ಅಕ್ಟೋಬರ್ 2020

₹ 15/-

# ಯುಗರಶ್ಮಿ

ತ್ರೈಮಾಸಿಕ




- ಸೌತಾಲ್‌ನಲ್ಲಿ ಒಂದು ಮಾರ್ಗದರ್ಶಕ ದೀಪ
- ಅಂತರ್ ಧರ್ಮೀಯ ಶಾಂತಿ
- ಇಸ್ಲಾಮಿನ ಸತ್ಯಸಾಕ್ಷ್ಯ
- ಹಝ್ರತ್ ಈಸಾ ಮಸೀಹರ(ಅ) ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು
- ಶಾಂತಿಯ ಹಾದಿ
- ನೀನು ಮಾಡು - ಮಾಡಬೇಡ

"ಎಲೈ ವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ"

– ಪವಿತ್ರ ಖುರ್‌ಆನ್ (5:9)

# ಯುಗರಶ್ಮಿ

**ವಿಷಯ ಸೂಚಿಕೆ** — **ಪುಟ**


- ಪ್ರಾರ್ಥನೆ 1
- ಮುಹಮ್ಮದ್ ಪೈಗಂಬರರ[ಸ] ನುಡಿಮುತ್ತುಗಳು 2
- ಸೌತಾಲ್‌ನಲ್ಲಿ ಒಂದು ಮಾರ್ಗದರ್ಶಕ ದೀಪ 3
- ಅಂತರ್ ಧರ್ಮೀಯ ಶಾಂತಿ 7
- ಇಸ್ಲಾಮಿನ ಸತ್ಯಸಾಕ್ಷ್ಯ 12
- ಹ। ಈಸಾ ಮಸೀಹರ[ಅ] ಮೃತ್ಯು ಬಗ್ಗೆ ಪ್ರಬಲ ಸಾಕ್ಷ್ಯಾಧಾರಗಳು 16
- ಶಾಂತಿಯ ಹಾದಿ 21
- ನೀನು ಮಾಡು – ಮಾಡಬೇಡ 25
- ಅಹ್ಮದಿಯಾ ವಾರ್ತೆಗಳು 29
  - * ಅಹ್ಮದಿಯಾ ಜಮಾಅತಿನ ಪ್ರಗತಿ
  - * ಹಿಂದೂ ಮುಸ್ಲಿಮರ ಭಾವೈಕ್ಯ ಸಮಾವೇಶ
- ನಿಧನ ವಾರ್ತೆ 31
- ಓದಿದ್ದು : 32
  - * ಭೂಮಿಯನ್ನು ಹೋಲುವ ಮತ್ತೊಂದು ಗ್ರಹ ಪತ್ತೆ * ಖಗೋಳಾಸ್ತಕರಿಗೆ ಹಬ್ಬ * ನಕ್ಷತ್ರ ಪುಂಜದಿಂದ ಹೊಮ್ಮಿದ ಬೆಳಕು * ಅಂತ್ಯ ಸಂಸ್ಕಾರದ ಬೆನ್ನಲ್ಲೇ ಸಮಾಧಿಯಿಂದ ಹೆಣ್ಣು ಮಗುವಿನ ಮೃತದೇಹ ಕಿತ್ತು ರಸ್ತೆಗೆಸದ ಧರ್ಮಾಂಧರು * ಶಾಂತಿಯ ಪ್ರತಿಭಟನಕಾರರು ದೇಶದ್ರೋಹಿಗಳಲ್ಲ
  - * ವೋಟರ್ ಐಡಿ ಸಾಕು * 43 ವರ್ಷ ಬಳಿಕ ಮನೆ ಸೇರಿದ ಅಜ್ಜಿ * ಅಸಭ್ಯ ವರ್ತನೆ : ಪಾದ್ರಿ ಅಮಾನತು
  - * ಪುತ್ರಿಯ ಮೇಲೆ ದೌರ್ಜನ್ಯ: ಬಂಧನ * ಉಯಿಘರ್ ಮುಸ್ಲಿಂ ಜನಸಂಖ್ಯೆ ನಿಗ್ರಹಕ್ಕೆ ಬಲವಂತದ ಗರ್ಭಪಾತ
  - * ಪಾಕ್‌ನಲ್ಲಿ ಶ್ರೀಕೃಷ್ಣ ದೇಗುಲ ನಿರ್ಮಾಣ ವಿರುದ್ಧ ಫತ್ವಾ * ಕೃಷ್ಣ ದೇಗುಲ ನಿರ್ಮಾಣಕ್ಕೆ ಸಮ್ಮತಿ
  - * ಕತ್ತೆ ಹಾಲಿನ ಹೈನುಗಾರಿಕೆಯತ್ತ ಹೊರಳಿದ ಭಾರತ * ಹೆಣ್ಣು ಮಕ್ಕಳಿಗೆ ಸಮಾನ ಆಸ್ತಿ ಹಕ್ಕು
  - * ಲಂಡನ್‌ನಲ್ಲಿ ಚೆನ್ನೈಯ ಯುವತಿ ಅಪಹರಣ : ಝಕೀರ್ ಲಿಂಕ್?
  - * ಝಕೀರ್ ಭಾಷಣದಿಂದ ಪ್ರಭಾವಿತನಾಗಿದ್ದ ಉಗ್ರ * ಟಿಪ್ಪು ವೀರ ಹೋರಾಟಗಾರ : ಎಚ್. ವಿಶ್ವನಾಥ್
- ಆರೋಗ್ಯ : 38
  - * ಕುರ್ಕುಮಿನ್‌ನಿಂದ ಕೊರೋನಾ ವೈರಸ್‌ಗಳ ನಾಶ: ಅಧ್ಯಯನ * ಕಾಮಕಸ್ತೂರಿಯಲ್ಲಿದೆ ಆರೋಗ್ಯದ ಗುಟ್ಟು
  - * ಆರೋಗ್ಯ ವೃದ್ಧಿಗೆ ಪಪ್ಪಾಯಿ ಹಣ್ಣು * ಮೆದುಳು ಚುರುಕಾಗಲು ಚಹಾ ಸಹಕಾರಿ
- ಪ್ರವಾದಿ ಮುಹಮ್ಮದ್[ಸ] ಮುಸ್ಲಿಮೇತರರ ವೀಕ್ಷಣೆಯಲ್ಲಿ 41
- ಓದುಗರ ಓಲೆ 42
- ಸಂಪಾದಕರಿಗೆ ಪತ್ರ 43


ಮುಖಪುಟ ಚಿತ್ರ : 23–2–2020ರಂದು ಅಹ್ಮದಿಯಾ ಖಲೀಫರಿಂದ ಉದ್ಘಾಟಿಸಲ್ಪಟ್ಟ ವೆಸ್ಟ್ ಲಂಡನಿನ ಸೌತಾಲ್‌ನಲ್ಲಿರುವ "ಮಸ್ಜಿದ್ ದಾರುಸ್ಸಲಾಮ್"


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

ಸಂಪರ್ಕಿಸಿರಿ : 9900410789

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

*ಸಂಪಾದಕ : ಮುಹಮ್ಮದ್ ಯೂಸುಫ್*

**ಅಕ್ಟೋಬರ್ 2020**

| | | | |
|---|---|---|---|
| ಆರಂಭ : 1975 | ಸಂಪುಟ : 37 | ಇಖ್ಾ : 1399 ಹಿಜರೀ ಶಮ್ಸೀ | ಸಂಚಿಕೆ : 1 |


## ಪ್ರಾರ್ಥನೆ

ಒಬ್ಬನು ಹೃತ್ಪೂರ್ವಕವಾಗಿ ಪ್ರಾರ್ಥಿಸುವನಾದರೆ ಎಂದಿಗೂ ಅದು ವಿಫಲವಾಗದು. ಐಶ್ವರ್ಯ ಎಂಬುದು ಸಂಪನ್ನತೆಯಿಂದಾಗಲಿ, ಅಧಿಕಾರದಿಂದಾಗಲಿ ಪಡೆಯಬಹುದಾದುದಲ್ಲ. ಅದು ದೇವನ ಕೈಗಳಿಂದ ಲಭ್ಯವಾಗಬೇಕಾಗಿದೆ. ಅವನು ಇಚ್ಛಿಸಿದ ಪ್ರಕಾರ ಅದನ್ನು ನೀಡುತ್ತಾನೆ. ಉತ್ತಮವಾದ ಪ್ರಾರ್ಥನೆ ಮೂಲಕ ಅದು ಲಭಿಸುವುದು. ಸರ್ವಶಕ್ತನಾದ ದೇವನು ಉದ್ದೇಶಿಸಿದರೆ ನಿಷ್ಕಳಂಕನೂ ಸಾತ್ವಿಕನೂ ಆದ ಒಬ್ಬನಿಗೆ ಅವನ ವಿಷಮಗಳ ಪರಾಕಾಷ್ಠೆಯಲ್ಲಿ ಪ್ರಾರ್ಥನೆಯ ಬಳಿಕ ಆತ್ಮೀಯಾನಂದ ಲಭಿಸುತ್ತದೆ. ಒಬ್ಬ ಚಕ್ರವರ್ತಿಗೂ ಅವನ ಸಿಂಹಾಸನದಿಂದ ಅಂತಹ ರೀತಿಯ ಒಂದು ಆತ್ಮೀಯಾನಂದ ಲಭಿಸಲಾರದು. ಇದು ಪ್ರಾರ್ಥಿಸುವವನ ಪ್ರಾರ್ಥನೆಗೆ ಕೊನೆಗೆ ಲಭಿಸುವ ಯಥಾರ್ಥ ವಿಜಯವಾಗಿದೆ.

**(ಅಯ್ಯಾಮು ಸುಲ್ಹ್ ಪುಟ 8)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ನಾನು ನಿಮ್ಮೊಡನೆ ನಿಷೇಧಿಸಿದ ಕಾರ್ಯಗಳನ್ನೆಲ್ಲ ನೀವು ಬಿಟ್ಟುಬಿಡಿರಿ. ನಾನು ನಿಮಗೆ ಆಜ್ಞಾಪಿಸಿದ ಕಾರ್ಯಗಳಿಂದ ನಿಮಗೆ ಸಾಧ್ಯವಾದಷ್ಟು ಮಾಡಿರಿ. ನಿಮ್ಮ ಪೂರ್ವಜರನ್ನು ನಾಶಮಾಡಿದ್ದು ಅವರ ಪ್ರಶ್ನೆಗಳ ಆಧಿಕ್ಯ ಮತ್ತು ಪ್ರವಾದಿಗಳೊಡನೆ ಇರುವ ಭಿನ್ನಮತವೂ ಆಗಿತ್ತು. (ಬುಖಾರಿ, ಮುಸ್ಲಿಂ)

♦ ಸಂಶಯ ಉಂಟುಮಾಡುವ ವಿಚಾರಗಳನ್ನು ನೀನು ಬಿಟ್ಟುಬಿಡು. ಸಂಶಯಕ್ಕೆ ಎಡೆಕೊಡದಿರುವುದನ್ನು ಮಾಡು. (ತಿರ್ಮಿದೀ)

♦ ತನಗೆ ಸಂಬಂಧವಿಲ್ಲದ ಕಾರ್ಯಗಳಲ್ಲಿ ತಲೆಹಾಕದಿರುವುದು ಒಬ್ಬನನ್ನು ಉತ್ತಮ ಮುಸ್ಲಿಮನಾಗಿ ಮಾಡುವ ವಿಚಾರಗಳಲ್ಲಿ ಸೇರುತ್ತದೆ. (ತಿರ್ಮಿದೀ)

♦ ನೀನು ಎಲ್ಲಿದ್ದರೂ ಅಲ್ಲಾಹನ ಭಯವಿರಲಿ. ಮಾಡಿದ ಕೆಡುಕಿನ ಬದಲಿಗೆ ಒಳಿತು ಮಾಡು. ಅದು ಕೆಡುಕನ್ನು ತೊಲಗಿಸುವುದು. ಜನರೊಡನೆ ಒಳ್ಳೆಯ ಸ್ವಭಾವದಿಂದ ವರ್ತಿಸು. (ತಿರ್ಮಿದೀ)

♦ ಪುಣ್ಯ ಎಂದರೆ ಉತ್ತಮ ಸ್ವಭಾವವಾಗಿದೆ. ಪಾಪ ಎಂದರೆ ನಿನ್ನ ಮನಸ್ಸಿಗೆ ಪ್ರಯಾಸ ಉಂಟುಮಾಡುವಂಥದ್ದು ಮತ್ತು ಜನರು ತಿಳಿಯುವುದನ್ನು ನೀನು ಇಷ್ಟಪಡದ ವಿಚಾರವಾಗಿದೆ. (ಮುಸ್ಲಿಂ)

♦ ಐಹಿಕ ಜೀವಿತದಲ್ಲಿ ನೀನು ವಿರಕ್ತಿ ತೋರಿಸು; ಅಲ್ಲಾಹು ನಿನ್ನನ್ನು ಇಷ್ಟಪಡುವನು. ಜನರ ಬಳಿಯಿರುವುದರಲ್ಲಿ ನೀನು ವಿರಕ್ತಿ ತೋರಿಸು; ಜನರು ನಿನ್ನಲ್ಲಿ ಸಂತುಷ್ಟರಾಗುವರು. (ಇಬ್ನು ಮಾಜ)

♦ ದ್ರೋಹ ಮಾಡಬಾರದು; ಪರಸ್ಪರ ಉಪದ್ರ ಮಾಡಬಾರದು. (ಇಬ್ನು ಮಾಜ)

♦ ನೀವು ಅಲ್ಲಾಹನನ್ನು ಕಾಣುತ್ತಿದ್ದೀರೆಂಬ ರೀತಿಯಲ್ಲಿ ಅವನ ಆರಾಧನೆ ಮಾಡಿರಿ. ನಿಶ್ಚಯವಾಗಿಯೂ ಅವನು ನಿನ್ನನ್ನು ಕಾಣುತ್ತಾನೆ; ನೀನು ಅವನನ್ನು ಕಾಣದಿದ್ದರೂ. (ಮುಸ್ಲಿಂ)

♦ ಈ ಲೋಕದಲ್ಲಿ ನೀನೊಬ್ಬ ಅಪರಿಚಿತನ ಹಾಗೆ ಆಗು; ಅಥವಾ ಒಬ್ಬ ದಾರಿಹೋಕನ ಹಾಗೆ. (ಬುಖಾರಿ)


♦ ಅಲ್ಲಾಹನು ಹೇಳಿದ್ದಾನೆ: ಎಲೈ ಪ್ರವಾದಿಗಳೇ, ನೀವು ಉತ್ತಮವಾದುದನ್ನು ತಿನ್ನಿರಿ, ಉತ್ತಮವಾಗಿ ವರ್ತಿಸಿರಿ. ಸತ್ಯವಿಶ್ವಾಸಿಗಳೇ, ನಿಮಗೆ ನಾವು ನೀಡಿದುದರಿಂದ ಉತ್ತಮವಾದುದನ್ನು ತಿನ್ನಿರಿ. (ಮುಸ್ಲಿಂ)

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

1. ಜ| ಎಮ್. ಯು. ತಾಹಿರ್ ಅಹ್ಮದ್ ಸಾಹಿಬ್, ಮಂಜೇಶ್ವರ – ರೂ. 1000/–

2. ಜ| ಅಬ್ದುಲ್ ಗಫೂರ್ ಸಾಹಿಬ್, ಶಾಹ್‌ಪುರ – ರೂ. 1000/–

# ಸೌತಾಲ್‌ನಲ್ಲಿ ಒಂದು ಮಾರ್ಗದರ್ಶಕ ದೀಪ



**ಯುನೈಟೆಡ್ ಕಿಂಗ್‌ಡಮ್‌ನ ಸೌತಾಲ್‌ನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ ನಿರ್ಮಿಸಿದ್ದ ದಾರುಸ್ಸಲಾಮ್ ಮಸ್‌ಜಿದ್ ಉದ್ಘಾಟಿಸುವಾಗ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ, ಪಂಚಮ ಖಲೀಫ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಲ್ಲಾಹನು ಅವರಿಗೆ ನೆರವು ನೀಡುವವನಾಗಲಿ) ಮಾಡಿದ ಭಾಷಣ.**

*ಮಸ್‌ಜಿದ್ ನಿರ್ಮಿಸುವಾಗ ಅದರೊಳಗೆ ಮಾಡುವ ಪ್ರಾರ್ಥನೆಗಳ ಬಗ್ಗೆ ಸಹಜವಾಗಿ ಯೋಚನೆಗಳುಂಟಾಗುತ್ತವೆ. ಆದರೆ ಪ್ರೀತಿ ರಹಿತ, ಅನುಕಂಪ ರಹಿತ ಮತ್ತು ಮಾನವರಿಗೆ ಸೇವೆ ಸಲ್ಲಿಸುವ ಮನೋಭಾವ ರಹಿತ ಪ್ರಾರ್ಥನೆಗಳು ಪೊಳ್ಳಾಗಿರುತ್ತವೆ. 2020 ಫೆಬ್ರವರಿ ದಿನಾಂಕ 23ರಂದು ಸೌತಾಲ್‌ನಲ್ಲಿ ದಾರುಸ್ಸಲಾಮ್ ಮಸ್‌ಜಿದನ್ನು ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಉದ್ಘಾಟಿಸುವಾಗ ಪ್ರಾರ್ಥನೆ ಅಂಗೀಕರಿಸಲ್ಪಡಲು ಮಾಡಬೇಕಾದ ಕರ್ತವ್ಯಗಳನ್ನು ವಿವರಿಸಿದರಲ್ಲದೆ ಯಾವುದೇ ತಾರತಮ್ಯ ಭಾವನೆಯಿಲ್ಲದೆ ಅನ್ಯರಿಗೆ ಸೇವೆ ಸಲ್ಲಿಸುವುದು ಮುಸ್ಲಿಮರ ಕರ್ತವ್ಯವೆಂದು ಹೇಳಿದರು. ಅತಿಥಿಗಳಾಗಿ 150 ಜನರು ಆಗಮಿಸಿದ್ದರು. ಅತಿಥಿಗಳಾದ ಫೆಲ್ಟ್ ಹ್ಯಾಮ್ ಮತ್ತು ಹೆಸ್‌ಟನ್ ಎಂ.ಪಿ. ಸೀಮಾ ಮಲ್‌ಹೋತ್ರ, ಈಲಿಂಗ್ ಸೌತ್‌ಹಾಲ್ ಎಂ.ಪಿ. ವೀರೇಂದ್ರ ಶರ್ಮ ಭಾಷಣ ಮಾಡಿದರು.*

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ, ಪಂಚಮ ಖಲೀಫ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೀಗೆ ಹೇಳಿದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹು – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮೆಲ್ಲರ ಮೇಲೆ ಇರಲಿ.

ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಂದು ಸೌತಾಲ್‌ನ ತನ್ನ ಪ್ರಥಮ ಮಸ್‌ಜಿದ್ ಉದ್ಘಾಟಿಸುತ್ತಿದೆ. ನಮ್ಮ ಸಂಘಟನೆ ಸೌತಾಲ್‌ನಲ್ಲಿ ಅಂದಾಜು ಅರುವತ್ತು ವರ್ಷಗಳ ಹಿಂದೆ ಸ್ಥಾಪಿತವಾಗಿದ್ದರೂ ಇಷ್ಟರ ತನಕ ನಮಗೆ ಇಲ್ಲಿ ಸರಿಯಾಗಿ ನಿರ್ಮಿತವಾದ ಮಸ್‌ಜಿದ್ ಇರಲಿಲ್ಲ. ಆದುದರಿಂದ ಇಲ್ಲಿರುವ ಅಹ್ಮದಿ ಮುಸ್ಲಿಮರು ಒಂದು ಮನೆಯನ್ನು ಪರಿವರ್ತಿಸಿ ತಮ್ಮ ಸ್ಥಳೀಯ ಕೇಂದ್ರವಾಗಿ ವಿವಿಧ ಆವಶ್ಯಕತೆಗಳಿಗೋಸ್ಕರ ಅನೇಕ ವರ್ಷಗಳಿಂದ ಬಳಸುತ್ತಾ ಇದ್ದರು.

ಆದುದರಿಂದ ಈ ದಿನ ನಮಗೆಲ್ಲರಿಗೂ ಅತ್ಯಂತ ಹರ್ಷದಾಯಕ ದಿನವಾಗಿದೆ. ನಮ್ಮ ಹೃದಯಗಳು ಸರ್ವಶಕ್ತನಾದ ಅಲ್ಲಾಹನ ಸನ್ನಿಧಿಯಲ್ಲಿ ಅವನು ನಮಗೆ ಈ ಮಸ್‌ಜಿದನ್ನು ನಿರ್ಮಿಸಲು ಭಾಗ್ಯವನ್ನು ದಯಪಾಲಿಸಿದಕ್ಕೋಸ್ಕರ ಕೃತಜ್ಞತೆಯಿಂದ ಬಾಗುತ್ತಿವೆ.

ಇದೇ ಸಂದರ್ಭದಲ್ಲಿ ನಾವು ಇಲ್ಲಿನ ಸ್ಥಳೀಯ ಕೌನ್ಸಿಲ್‌ಗೆ, ಅಧಿಕಾರಿಗಳಿಗೆ ಮತ್ತು ಇಲ್ಲಿನ ನಿವಾಸಿಗಳಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಸೌತಾಲ್‌ನಲ್ಲಿ ಏಶಿಯನರ ಬಹಳ ಹೆಚ್ಚು ಜನಸಂಖ್ಯೆ ಇದೆ. ಇಲ್ಲಿನ ನಿವಾಸಿಗಳಲ್ಲಿ ಅಂದಾಜು ಶೇಕಡ 25ರಷ್ಟು ಮುಸ್ಲಿಮರಿದ್ದಾರೆ. ಇಲ್ಲಿನ ಸ್ಥಳೀಯ ಅಹ್ಮದಿ ಮುಸ್ಲಿಮರ ಜನಸಂಖ್ಯೆ ಬಹಳ ಕಡಿಮೆ ಇದೆ. ಇಲ್ಲಿನ ಸಮಾಜದವರೆಲ್ಲರೂ ನೀಡಿದ ಬೆಂಬಲ ಮತ್ತು ಔದಾರ್ಯಕ್ಕೋಸ್ಕರ ನಾವು ಮೆಚ್ಚಿಗೆಯನ್ನೂ ಕೃತಜ್ಞತೆಯನ್ನೂ ಸೂಚಿಸುತ್ತೇವೆ.

ಸೌತಾಲ್‌ನ ಹಿಂದಿನ ಚರಿತ್ರೆಯನ್ನು ನೋಡುವುದಾದರೆ, ಇಲ್ಲಿ ಜನಾಂಗೀಯ ಬಿಗುವುಗಳೂ ಸಂಘರ್ಷಗಳೂ ಕೆಲವೊಮ್ಮೆ ಸಂಭವಿಸಿವೆ. ಆದರೆ ಸಾಮಾನ್ಯವಾಗಿ ಹೇಳುವುದಾದರೆ, ಸೌತಾಲ್‌ನ ಜನಸಮುದಾಯ ಪರಸ್ಪರ ಗೌರವದಿಂದಲೂ ಸಭ್ಯತೆಯಿಂದಲೂ ವರ್ತಿಸುವ ಬಹುಜನಾಂಗೀಯ ಮಾದರಿ ಸಮಾಜವಾಗಿದೆ. ಇಲ್ಲಿ ವಿವಿಧ ಜನಾಂಗಗಳ, ವಿವಿಧ ಧರ್ಮಗಳ ಜನರು ಪರಸ್ಪರ ಸೌಹಾರ್ದ



Guests and dignitaries were given the opportunity to have an audience with His Holiness[aba], including members of Southall's Sikh and Hindu communities.

ಪೂರ್ಣವಾಗಿ ಜೀವಿಸುತ್ತಿದ್ದಾರೆ.

ಆದುದರಿಂದ ನಾನು ಹಿಂದೆ ಹೇಳಿದ ಹಾಗೆ ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದ ನಂತರ ಇಲ್ಲಿನ ಸಿಖ್, ಹಿಂದೂ, ಕ್ರಿಶ್ಚಿಯನ್ ಮತ್ತು ಇತರ ಸ್ಥಳೀಯ ನಿವಾಸಿಗಳಾದ ಜನರಿಗೆ ಅವರ ಉಪಕಾರ, ವಿಶಾಲ ಹೃದಯ ಮತ್ತು ವಿವಿಧ ಗುಂಪುಗಳ ಮಧ್ಯೆ ಭಾವೈಕ್ಯಪೂರ್ಣವಾದ ಸೌಹಾರ್ದದ ಪರಿಸರದ ಪೋಷಣೆಗೋಸ್ಕರ ಕೃತಜ್ಞತೆ ಅರ್ಪಿಸುವುದು ನಮ್ಮ ಹೊಣೆಗಾರಿಕೆಯಾಗಿದೆ.

ನಿಸ್ಸಂಶಯವಾಗಿ ಇಸ್ಲಾಮ್ ಧರ್ಮದ ಮೂಲಭೂತ ತತ್ವಗಳಲ್ಲಿ ಒಂದು, ಎಲ್ಲ ಧರ್ಮಗಳ ಮತ್ತು ನಂಬಿಕೆಗಳ ಜನರ ಮಧ್ಯೆ ಪರಸ್ಪರ ಸಹಕಾರ ಮತ್ತು ಗೌರವದ ಪರಿಸರವಿರಬೇಕೆಂದಾಗಿದೆ. ಇಸ್ಲಾಮ್ ಧರ್ಮದ ಪವಿತ್ರ ಪ್ರವಾದಿ ಇದಕ್ಕೆ ಸಂಬಂಧಿಸಿ ಅಪ್ರತಿಮ ಮಾದರಿಯನ್ನು ತೋರಿಸಿಕೊಟ್ಟರು.

ಮದೀನಕ್ಕೆ ವಲಸೆ ಹೋದ ನಂತರ ಇಸ್ಲಾಮಿನ ಪೈಗಂಬರರು(ಸ) ಒಂದು ಶಾಂತಿಯ ಒಡಂಬಡಿಕೆಯನ್ನು ಮದೀನದಲ್ಲಿ ವಾಸಿಸುತ್ತಿದ್ದ ಇತರ ಧಾರ್ಮಿಕ ಸಮುದಾಯಗಳ ಮತ್ತು ಗೋತ್ರಗಳೊಂದಿಗೆ ಮಾಡಿಕೊಂಡರು. ಅದು "ಮದೀನದ ಪ್ರಣಾಳಿಕೆ" ಎಂದು ಪ್ರಸಿದ್ಧವಾಗಿದೆ. ಆ ಒಡಂಬಡಿಕೆ ಪ್ರಕಾರ ಮದೀನವನ್ನು ಆಳುವ ಒಂದು ಆಡಳಿತೆ ವ್ಯವಸ್ಥೆ ರೂಪಿಸಲ್ಪಟ್ಟಿತು. ಆ ನಗರ ರಾಜ್ಯದ ಅಧಿಪತಿಯಾಗಿ ಇಸ್ಲಾಮಿನ ಪೈಗಂಬರರು ಆಯ್ಕೆಗೊಂಡರು. ಅವರು ತನ್ನ ಈ ಪದವಿಯಲ್ಲಿರುವಾಗ ಅಲ್ಲಿನ ಯಹೂದಿ, ಕ್ರೈಸ್ತ ಮತ್ತು ವಿವಿಧ ಗೋತ್ರಗಳ ಜನರು ತಮ್ಮ ಸ್ವಂತ ಆಚಾರಗಳನ್ನು ಅನುಷ್ಠಿಸಲು ಅವರಿಗಿರುವ ಹಕ್ಕುಗಳನ್ನು ಖಾತರಿಪಡಿಸಿದರು ಮತ್ತು ಸಂರಕ್ಷಿಸಿದರು.

ಹಝ್ರತ್ ಪೈಗಂಬರರು(ಸ) ಯಾವಾಗಲೂ ಒಡಂಬಡಿಕೆಯ ಶರ್ತಗಳಿಗೆ ಬದ್ಧರಾಗಿದ್ದರಲ್ಲದೆ ಮುಸ್ಲಿಮರೆಲ್ಲರೂ ಅವುಗಳಿಗೆ ಬದ್ಧರಾಗಿರಲು ಆದೇಶಿಸಿದರು. ಅವರು ಒಮ್ಮೆಯೂ ತನ್ನ ಅಧಿಕಾರವನ್ನು ದುರುಪಯೋಗಪಡಿಸಲಿಲ್ಲ ಮತ್ತು ಒಡಂಬಡಿಕೆಯ ಶರತ್ತುಗಳನ್ನು ಉಲ್ಲಂಘಿಸಲಿಲ್ಲ. ಅವರು ಯಾವುದೇ ರೀತಿಯಲ್ಲಿ ಅನ್ಯಾಯದಿಂದಲೂ ತಾರತಮ್ಯ ಭಾವನೆಯಿಂದಲೂ ಅನ್ಯ ಸಮುದಾಯದವರೊಂದಿಗೆ ವರ್ತಿಸಲಿಲ್ಲ. ಮಾತ್ರವಲ್ಲ, ಅವರು ಮುಸ್ಲಿಮರ ಪಕ್ಷಪಾತಿಯಾಗಿಯೂ ಅವರಿಗೆ ತಪ್ಪಾಗಿ ಅನುಕೂಲ ಮಾಡಿಕೊಡುವವರಾಗಿಯೂ ವರ್ತಿಸಲಿಲ್ಲ. ಅವರು ಮುಸ್ಲಿಮೇತರರೊಂದಿಗೆ ಕರುಣೆಯಿಂದ ವರ್ತಿಸುತ್ತಿದ್ದರಲ್ಲದೆ ಅವರ ಭಾವನೆಗಳ ಬಗ್ಗೆ ಸಂವೇದನೆಯುಳ್ಳವರಾಗಿದ್ದರು.

ಒಡಂಬಡಿಕೆಯಲ್ಲಿ ಭಾಗವಹಿಸಿದ ಇತರ ಪಕ್ಷದ ಜನರು ಶರತ್ತುಗಳನ್ನು ಉಲ್ಲಂಘಿಸಿದಾಗ ಕೂಡ ಅಪ್ರತಿಮ ಸಂಯಮದಿಂದಲೂ ಸಹನೆಯಿಂದಲೂ ಅವರು ವರ್ತಿಸುತ್ತಿದ್ದರು. ಒಬ್ಬ ವ್ಯಕ್ತಿ ಅಥವಾ ಒಂದು ಗುಂಪಿನ ಜನರು ಎಲ್ಲ ಮಿತಿಗಳನ್ನು ಮೀರಿ ಅತಿರೇಕದಿಂದ ವರ್ತಿಸಿದಾಗ ಇಸ್ಲಾಮಿನ ಪೈಗಂಬರರು ತಪ್ಪಿಗೆ ಅನುಪಾತ ಪ್ರಮಾಣದ ಶಿಕ್ಷೆ ನೀಡಲು ಅನುಮತಿಸಿದರು. ಅಂತಹ ಶಿಕ್ಷೆಗಳು ಒಡಂಬಡಿಕೆಯ ಶರತ್ತುಗಳಿಗೆ ಅನುಸಾರವಾಗಿ ನೀಡಲಾಗಿತ್ತು ಮತ್ತು ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಸ್ಥಾಪಿಸಲಿಕ್ಕೋಸ್ಕರವಾಗಿತ್ತು.

ಈ ರೀತಿ ಇಸ್ಲಾಮಿನ ಪೈಗಂಬರರು ತನ್ನ ಜೀವಿತಾದ್ಯಂತ ಸಹನೆ ಮತ್ತು ಅನ್ಯರ ನಂಬಿಕೆಗಳ ಬಗ್ಗೆ ಗೌರವ ತೋರಿಸುವ ಶಾಶ್ವತ ಉದಾಹರಣೆಗಳನ್ನು ತೋರಿಸಿದರು.

ಪವಿತ್ರ ಖುರ್‌ಆನ್ ಪದೇ ಪದೇ ಮುಸ್ಲಿಮರೊಂದಿಗೆ ಉಪದೇಶಿಸುತ್ತಿದೆ – ಅನ್ಯರೊಂದಿಗೆ ಸಹಾನುಭೂತಿ, ಕರುಣೆ ಮತ್ತು ದಯೆಯಿಂದ ವರ್ತಿಸಬೇಕೆಂದು ಮತ್ತು ಮಾನವರ ಆವಶ್ಯಕತೆಗಳನ್ನು ಈಡೇರಿಸಬೇಕೆಂದು.

ಪವಿತ್ರ ಖುರ್‌ಆನ್ ಅಧ್ಯಾಯ 51 ವಚನ 57ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಘೋಷಿಸಿದ್ದಾನೆ: ಮನುಷ್ಯನನ್ನು ಸೃಷ್ಟಿಸಿದುದರ ಮೂಲ ಉದ್ದೇಶ ಸರ್ವಶಕ್ತನಾದ ಅಲ್ಲಾಹನನ್ನು ಅವನಿಗೆ ಸಂಪೂರ್ಣವಾಗಿ ಶರಣಾಗಿ ವಿಧೇಯನಾಗಿ ಆರಾಧಿಸುವುದಾಗಿದೆ.

ಆದರೆ ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿಯಬೇಕು. ಅಲ್ಲಾಹನಿಗೆ ಹೊಗಳಿಕೆಯ ಆವಶ್ಯಕತೆ ಇಲ್ಲ. ಅಲ್ಲಾಹನ ಗುಣ ವಿಶೇಷಗಳನ್ನು ಗುರುತಿಸಿ ಮನವರಿಕೆ ಮಾಡಿಕೊಂಡು ಅವುಗಳನ್ನು ಮೈಗೂಡಿಸಿಕೊಂಡು ತಮ್ಮನ್ನು ಸುಧಾರಣೆ ಮಾಡಿಕೊಳ್ಳುವುದನ್ನು ಆರಾಧನೆ ಆವಶ್ಯಪಡುತ್ತದೆ.

ಹೀಗೆ ವರ್ತಿಸಿದರೆ ಮಾತ್ರ ಒಬ್ಬನು ತನ್ನನ್ನು ಸೃಷ್ಟಿಸಿದುದರ ಉದ್ದೇಶವನ್ನು ಈಡೇರಿಸುವವನಾಗುತ್ತಾನೆ. ಉದಾಹರಣೆಗೆ ಪವಿತ್ರ

ಖುರ್‌ಆನ್ ಸರ್ವಶಕ್ತನಾದ ಅಲ್ಲಾಹನನ್ನು ರಬ್ಬ್ (ಪ್ರಭು) ಎಂದು ಹೆಸರಿಸಿದೆ. ರಬ್ಬ್ ಎಂಬ ಪದದ ಅರ್ಥ ಪಾಲಿಸುವವನೂ ಪೋಷಿಸುವವನೂ ಎಂದು. ಅವನು ಮಾನವರ ಮತ್ತು ಎಲ್ಲ ಸೃಷ್ಟಿಗಳನ್ನು ಪಾಲಿಸುವವನೂ ಪೋಷಿಸುವವನೂ ಆಗಿದ್ದಾನೆ. ಅವನು ಪರಮ ದಯಾವಂತನೂ ಕಾರುಣ್ಯನಿಧಿಯೂ ಅತಿ ಕ್ಷಮಾಶೀಲನೂ ಆಗಿದ್ದಾನೆ.

ಅಲ್ಲಾಹನ ಇನ್ನೂ ಅನೇಕ ಗುಣವಿಶೇಷಗಳಿವೆ. ಅವುಗಳನ್ನು ಗುರುತಿಸಿ ತಮ್ಮಲ್ಲಿ ಅಳವಡಿಸಿಕೊಂಡು ವರ್ತಿಸುವುದು ಮುಸ್ಲಿಮನ ಕಡ್ಡಾಯ ಕರ್ತವ್ಯವಾಗಿದೆ. ಆದುದರಿಂದ ಮುಸ್ಲಿಮರು ಅನ್ಯರ ಹಕ್ಕುಗಳನ್ನು ಈಡೇರಿಸಿ ಕೊಡುವವರಾದರೆ, ಅವರು ಪರಮ ದಯಾವಂತರಾಗಿ ವರ್ತಿಸುವವರಾದರೆ, ಅನ್ಯರ ಹಿತೈಷಿಗಳಾಗುವವರಾದರೆ ಕಾರುಣ್ಯದೋರುವವರೂ ಕ್ಷಮಿಸುವವರೂ ಆಗುವವರಾದರೆ ಮಾತ್ರ ಅವರು ಸರ್ವಶಕ್ತನಾದ ಅಲ್ಲಾಹನನ್ನು ಆರಾಧಿಸಬೇಕೆಂಬ ತಮ್ಮ ಕರ್ತವ್ಯವನ್ನು ಈಡೇರಿಸುವವರಾಗುವರು.

ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಘೋಷಿಸಿದೆ: ಮಾನವರ ಹಕ್ಕುಗಳನ್ನು ಈಡೇರಿಸಿ ಕೊಡದವರ ಪ್ರಾರ್ಥನೆಗಳು ಅಲ್ಲಾಹನಿಂದ ಎಂದೂ ಅಂಗೀಕರಿಸಲ್ಪಡಲಾರವು; ತದ್ವಿರುದ್ಧವಾಗಿ ಅಂತಹ ಜನರ ನಾಶಕ್ಕೆ ಹೇತುವಾಗುವುದು.

ಉದಾಹರಣೆಗೆ, ಅನಾಥರ ಬಗ್ಗೆ ಮತ್ತು ಇತರ ಬಲಹೀನರ ಬಗ್ಗೆ ಅನುಕಂಪತೋರದ, ಸಮಾಜದ ಶಾಂತಿಗೆ ಬೆದರಿಕೆಯೊಡ್ಡುವ ಮುಸ್ಲಿಮರ ಪ್ರಾರ್ಥನೆಗಳು ಅವರಿಗೆ ಅಪಕೀರ್ತಿಯನ್ನೂ ಅಪಮಾನವನ್ನೂ ಉಂಟುಮಾಡುವುದೇ ಹೊರತು ಅವರಿಗೆ ಜಯವಾಗಲಿ, ವಿಮೋಚನೆಯಾಗಲಿ ಲಭಿಸಲಾರದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ನಾವು ಹೀಗೆ ನಂಬುತ್ತೇವೆ: ಅನ್ಯರ ಬಗ್ಗೆ ಕಾಳಜಿ ಹೊಂದಿ ಅವರೊಂದಿಗೆ ಅನುಕಂಪ ಭರಿತನಾಗಿಯೂ ಗೌರವಭರಿತನಾಗಿಯೂ ವರ್ತಿಸುವವನು ಮಾತ್ರ ಸರ್ವಶಕ್ತನಾದ ಅಲ್ಲಾಹನಿಂದ ನೈಜ ಆರಾಧಕನಾಗಿ ಗಣಿಸಲ್ಪಡುವನು. ಸ್ವಾರ್ಥಿಗಳಾದ ಮತ್ತು ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡಲು ಇಚ್ಛಿಸದ ಜನರ ಪ್ರಾರ್ಥನೆಗಳನ್ನು ಸರ್ವಶಕ್ತನಾದ ಅಲ್ಲಾಹನು ತಿರಸ್ಕರಿಸಿ ಅವು ಕಪಟಾಚರಣೆ ಎಂದೂ ವಂಚನೆ ಎಂದೂ ಗಣಿಸುವನು.

ಆದುದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಪ್ರತಿಯೊಬ್ಬ ಮುಸ್ಲಿಮನ ಧಾರ್ಮಿಕ ಕರ್ತವ್ಯವೇನೆಂದರೆ, ಅವನು ಜಾತಿ, ಧರ್ಮ, ವರ್ಣವನ್ನು ಪರಿಗಣಿಸದೆ ಮಾನವರಲ್ಲಿ ಪ್ರತಿಯೊಬ್ಬನ ಹಕ್ಕುಗಳನ್ನು ದಯೆಯಿಂದಲೂ ಪ್ರೀತಿಯಿಂದಲೂ ವಾತ್ಸಲ್ಯದಿಂದಲೂ ಈಡೇರಿಸಿಕೊಡುವವನಾಗಬೇಕು.

ಮಾನವರ ಸೇವೆ ಮಾಡುವುದು ಖಂಡಿತವಾಗಿಯೂ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ವೈಶಿಷ್ಟ್ಯಪೂರ್ಣವಾದ ಚಿಹ್ನೆಯಾಗಿದೆ. ನಾವು ಅದನ್ನು ನಮ್ಮ ಧ್ಯೇಯವಾಗಿ ಮಾಡಿಕೊಂಡಿದ್ದೇವೆ. ಏಕೆಂದರೆ ಹಾಗೆ ಮಾಡಬೇಕೆಂದು ಅಲ್ಲಾಹನು ಆಜ್ಞಾಪಿಸಿದ್ದಾನೆ. ನಿಸ್ಸಂಶಯವಾಗಿ, ನೊಂದವರಿಗೆ ಸಹಾಯ ನೀಡುವುದು, ಮಾನವರ ಶಾರೀರಿಕ ಮತ್ತು ಆಧ್ಯಾತ್ಮಿಕ ಕಷ್ಟಾನುಭವಗಳನ್ನು ತಗ್ಗಿಸುವುದು ನಮ್ಮ ಧಾರ್ಮಿಕ ವಿಶ್ವಾಸದ ಅವಿಭಾಜ್ಯ ಘಟಕವಾಗಿದೆ.

ಅನ್ಯರ ಬಗ್ಗೆ ಎಲ್ಲ ವಿಧಗಳ ನಕಾರಾತ್ಮಕ ಭಾವನೆಗಳಿಂದಲೂ ಕೆಟ್ಟ ಇಚ್ಛೆಗಳಿಂದಲೂ ನಮ್ಮ ಹೃದಯಗಳನ್ನು ಸ್ವಚ್ಛಗೊಳಿಸಬೇಕೆಂದೂ ಮಾನವರ ಸೇವೆಗೆ ಸದಾ ಸಿದ್ಧರಾಗಿರಬೇಕೆಂದೂ ಕಷ್ಟಾನುಭವಿಗಳ ಮತ್ತು ಯಾವುದಾದರೂ ವಿಧದಲ್ಲಿ ವಂಚಿತರಾದವರ ಆವಶ್ಯಕತೆಗಳನ್ನು ಈಡೇರಿಸಬೇಕೆಂದೂ ಸರ್ವಶಕ್ತನಾದ ಅಲ್ಲಾಹನು ನಮಗೆ ಉಪದೇಶಿಸಿದ್ದಾನೆ.

ಇದೇ ಕಾರಣದಿಂದ ನಾವು ಆಫ್ರಿಕದ ಬಡ ದೇಶಗಳಲ್ಲಿಯೂ ಇತರ ದೇಶಗಳಲ್ಲಿಯೂ ಅನೇಕ ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಿ ಅಲ್ಲಿನ ನಿವಾಸಿಗಳಿಗೆ ಆವಶ್ಯಕ ಆರೋಗ್ಯ ಸೇವೆ ಮತ್ತು ಶೈಕ್ಷಣಿಕ ವ್ಯವಸ್ಥೆ ಮಾಡಲು ನಾವು ಶಕ್ತರಾದುದು ನಮಗೆ ದೊರಕಿದ ಮಹಾಭಾಗ್ಯವೆಂದು ಭಾವಿಸುತ್ತೇವೆ.

ಇದಲ್ಲದೆ ನಾವು ಇನ್ನಿತರ ಅನೇಕ ಪರೋಪಕಾರ ಮತ್ತು ಮಾನವ ಹಿತಕಾರಿ ಯೋಜನೆಗಳನ್ನು ಕೈಗೊಳ್ಳುತ್ತಿದ್ದೇವೆ. ಉದಾಹರಣೆಗೆ, ನಾವು ಆಹಾರ, ಶುದ್ಧ ನೀರು, ನೈರ್ಮಲ್ಯ ವ್ಯವಸ್ಥೆ ಮತ್ತು ಇತರ ಆವಶ್ಯಕತೆಗಳನ್ನು ಲೋಕದ ದೂರ ಪ್ರದೇಶಗಳ ಸವಲತ್ತು ವಂಚಿತ ಭಾಗಗಳಲ್ಲಿ ವಾಸಿಸುವ ಬಡಜನರಿಗೆ ಅವರ ಧರ್ಮವನ್ನು ಪರಿಗಣಿಸದೆ ಒದಗಿಸಿ ಕೊಡುತ್ತಿದ್ದೇವೆ.

ಆದುದರಿಂದ ನಾವು ಎಲ್ಲಿಯೆಲ್ಲ ಮಸ್‌ಜಿದ್‌ಗಳನ್ನು ನಿರ್ಮಿಸುತ್ತೇವೋ ಅಲ್ಲಿ ನಾವು ಮಾನವರಿಗೆ ಸೇವೆ ಸಲ್ಲಿಸುವುದು ಮತ್ತು ಜನರ ಕಷ್ಟಾನುಭವಗಳನ್ನು ತಗ್ಗಿಸುವುದು ನಮ್ಮ ಪ್ರಾರ್ಥನೆಗಳ ಜೊತೆಗೆ ನಮ್ಮ ಕರ್ತವ್ಯವಾಗಿದೆ ಎಂದು ದೃಢವಾಗಿ ನಂಬುತ್ತೇವೆ.

ನಿಶ್ಚಯವಾಗಿಯೂ ನೈಜ ಮುಸ್ಲಿಮನ ಚಿಹ್ನೆ ಏನೆಂದರೆ, ಅವನು ಅಲ್ಲಾಹನ ಗುಣವಿಶೇಷಗಳನ್ನು ತನ್ನ ಮೂಲಕ ಉದಾಹರಣೆಯಾಗಿ ಪ್ರಕಟಿಸುತ್ತಾನಲ್ಲದೆ ಅವನು ಸದಾ ಕಾಲ ಸಮುದಾಯಗಳಿಗೆ ಸೇವೆ ಸಲ್ಲಿಸುತ್ತಾ ಪ್ರೀತಿ ಮತ್ತು ಸಹನೆಯ ಮನೋಭಾವವನ್ನು ಸಮಾಜದಲ್ಲಿ ಪೋಷಿಸುತ್ತಾ ಇರುತ್ತಾನೆ.

ನೈಜ ಮುಸ್ಲಿಮರು ಯಾವುದೇ ರೀತಿಯ ಕೆಟ್ಟ ಇಚ್ಛೆಗಳನ್ನೂ ಅಸೂಯೆಯನ್ನೂ ಅನ್ಯರ ಬಗ್ಗೆ ತಮ್ಮ ಹೃದಯಗಳಲ್ಲಿ ಪ್ರವೇಶಿಸಲು ಮತ್ತು ತಮ್ಮ ಮಸ್‌ಜಿದ್‌ಗಳಲ್ಲಿ ನಿಯೋಜಿಸಲು ಅನುಮತಿಸಲಾರರು. ನಮ್ಮ ಹೃದಯಗಳು ಮತ್ತು ನಮ್ಮ ಮಸ್‌ಜಿದ್‌ಗಳು ಯಾವಾಗಲೂ ನಮ್ಮ ಸಹಜೀವಿಗಳಾದ ಜನರ ಬಗ್ಗೆ ಪ್ರೀತಿ ಮತ್ತು ಅನುಕಂಪಗಳಿಂದ ಭರಿತವಾಗಿರುವುವು.

ಅನ್ಯರ ಬಗ್ಗೆ ದ್ವೇಷ ಮತ್ತು ಹಗೆತನವನ್ನು ವರ್ಜಿಸುವುದು ಮಾತ್ರ ಸಾಕಾಗಲಾರದು. ಮುಸ್ಲಿಮರ ಹೊಣೆಗಾರಿಕೆ ಏನಾಗಿದೆ ಎಂದರೆ ಅವರು ತಮ್ಮ ಮಸ್‌ಜಿದ್‌ಗಳನ್ನು ದೇವನ ಸೃಷ್ಟಿಗಳಿಗೆ ಸೇವೆ ಮಾಡುವ ಯೋಜನೆಗಳನ್ನು ರೂಪಿಸಲು ಬಳಸಬೇಕು ಮತ್ತು ಸಮಾಜದ ಸದಸ್ಯರ ಆವಶ್ಯಕತೆಗಳನ್ನು ಈಡೇರಿಸಲು ಪ್ರತಿಯೊಂದು ರೀತಿಯ ಪ್ರಯತ್ನಗಳನ್ನು ಮಾಡಬೇಕು.

ಮುಸ್ಲಿಮರೆಲ್ಲರೂ ತಮ್ಮ ಮಸ್‌ಜಿದ್‌ಗಳನ್ನು ಸಮಾಜದಲ್ಲಿ ಪ್ರೀತಿ ಮತ್ತು ಸಹಾನುಭೂತಿಯ ಭಾವನೆಗಳನ್ನು ಬೆಳೆಸಲು ಖಂಡಿತವಾಗಿಯೂ ಬಳಸುವವರಾಗಬೇಕು. ಇದೇ ಕಾರಣದಿಂದ ಅಹ್ಮದಿ ಮುಸ್ಲಿಮರು ಲೋಕದಾದ್ಯಂತ ಘೋಷಿಸುತ್ತಾರೆ: "Love for All Hatred for None" – "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ."

ಇವು ಕೇವಲ ಟೊಳ್ಳು ಶಬ್ದಗಳೋ ಮುಸ್ಲಿಮೇತರರನ್ನು ಪ್ರಭಾವಿಸಲು ರೂಪಿಸಿದ ನುಡಿಗಳೋ ಅಲ್ಲ. ಈ ವಾಕ್ಯ ಇಸ್ಲಾಮಿನ ನೈಜ ತತ್ವವನ್ನೂ ಇಸ್ಲಾಮಿನ ಪವಿತ್ರ ಪೈಗಂಬರರ ಸ್ವಭಾವಗುಣಗಳನ್ನೂ ಪ್ರತಿಬಿಂಬಿಸುವುದಾಗಿದೆ. ಉದಾಹರಣೆಗೆ, ಮುಸ್ಲಿಮರು ತಮ್ಮ ನೆರೆಹೊರೆಯ ಜನರ ಬಗ್ಗೆ ಕಾಳಜಿ ವಹಿಸಬೇಕೆಂದೂ ಅವರ ಹಕ್ಕುಗಳನ್ನು ಈಡೇರಿಸಿಕೊಡಬೇಕೆಂದೂ ಪವಿತ್ರ ಖುರ್‌ಆನ್ ಮುಸ್ಲಿಮರಿಗೆ ಬಹಳ ಸ್ಪಷ್ಟವಾಗಿ ಉಪದೇಶ ನೀಡಿದೆ.

ಈಗ ಈ ಮಸ್‌ಜಿದ್ ಉದ್ಘಾಟಿಸಲಾಗಿದೆ. ಇಲ್ಲಿ ವಾಸಿಸುತ್ತಿರುವ ಅಹ್ಮದಿ ಮುಸ್ಲಿಮರು ಮಸ್‌ಜಿದ್‌ಗೆ ಸಂಬಂಧಿಸಿದ ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸುವರೆಂದೂ ಸಮಾಜದ ವ್ಯಕ್ತಿಗಳ ಬಗ್ಗೆ ತಮಗಿರುವ ಪ್ರೀತಿ, ಸಹಾನುಭೂತಿ ಮತ್ತು ವಾತ್ಸಲ್ಯದ ಮಟ್ಟವನ್ನು ಉನ್ನತಗೊಳಿಸುವರೆಂದೂ ನಾನು ದೃಢವಾಗಿ ನಂಬುತ್ತೇನೆ. ನಾನು ಖಂಡಿತವಾಗಿಯೂ ಭರವಸೆ ಹೊಂದಿದ್ದೇನೆ ಮತ್ತು ಪ್ರತೀಕ್ಷಿಸುತ್ತೇನೆ – ಇಲ್ಲಿನ ಸಮಾಜದ ಜನರು ಗುರುತಿಸುವರು ಮತ್ತು ಸಾಕ್ಷಿಗಳಾಗುವರು – ನಮ್ಮ ಮಸ್‌ಜಿದ್‌ಗಳು, ಅಹ್ಮದಿ ಮುಸ್ಲಿಮರು ತಮ್ಮ ಆಧ್ಯಾತ್ಮಿಕ ಮತ್ತು ನೈತಿಕ ಮಟ್ಟವನ್ನು ಅಲ್ಲಾಹನನ್ನು ಆರಾಧಿಸುವ ಮೂಲಕ ಉತ್ತಮ ಪಡಿಸುವರಲ್ಲದೆ ಅವರನ್ನು ಮಾನವರ ಸೇವೆ ಮಾಡಲು ಮತ್ತು ಅದಕ್ಕೋಸ್ಕರ ಎಲ್ಲ ವಿಧಗಳ ತ್ಯಾಗಗಳನ್ನು ಮಾಡಲು ಸದಾ ಸಿದ್ಧರಾಗಲು ಪ್ರೋತ್ಸಾಹಿಸುವುದು.

ನಾನು ಪ್ರತೀಕ್ಷಿಸುತ್ತೇನೆ ಮತ್ತು ನಾನು ಪ್ರಾರ್ಥಿಸುತ್ತೇನೆ, ಇನ್‌ಶಾಅಲ್ಲಾಹ್ (ದೇವನಿಚ್ಚಿಸಿದರೆ) ಇಲ್ಲಿ ವಾಸಿಸುವ ಎಲ್ಲ ಅಹ್ಮದಿ ಮುಸ್ಲಿಮರು ನಾನು ವಿವರಿಸಿದ ಆದರ್ಶ ಮಾದರಿಗಳನ್ನು ಅನುಸರಿಸಿ ಜೀವಿಸುವರು.

ನಾನು ದೃಢವಾಗಿ ನಂಬುತ್ತೇನೆ – ಇಲ್ಲಿನ ಸಮಾಜದ ಸದಸ್ಯರು ನಮ್ಮ ಪ್ರೀತಿ ಮತ್ತು ಕಾರುಣ್ಯಕ್ಕೆ ಪ್ರತಿಕ್ರಿಯೆ ನೀಡಿ ನಾವು ಚಾಚಿರುವ ಸ್ನೇಹದ ಹಸ್ತವನ್ನು ಸ್ವೀಕರಿಸುವರು. ನಮ್ಮ ಸ್ನೇಹದ ಹಸ್ತ ತಮ್ಮ ಕಡೆಗೆ ಯಾವಾಗಲೂ ಚಾಚಿರುವುದು.

ಕೊನೆಯದಾಗಿ ನಾನು ಪ್ರತೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ, ಇಲ್ಲಿನ ಜನರು ಯಾವಾಗಲೂ ಸಾರ್ವತ್ರಿಕ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಲು ತಮ್ಮ ಶ್ರದ್ಧೆಯನ್ನು ಕೇಂದ್ರೀಕರಿಸುವರೆಂದು. ಅವುಗಳೇ ನಮ್ಮನ್ನು ಒಗ್ಗೂಡಿಸುವುದು.

ನಾನು ಪ್ರಾರ್ಥಿಸುತ್ತೇನೆ, ಸೌತಾಲ್ ಯಾವಾಗಲೂ ಶಾಂತಿ ಮತ್ತು ಸೌಹಾರ್ದದ ಚಿಹ್ನೆಯಾಗಿ ಮುಂದುವರಿಯುವುದು. ವಿವಿಧ ಜನಾಂಗಗಳು ಪರಸ್ಪರ ಗೌರವ ಭಾವನೆಯಿಂದಲೂ ಅನ್ಯರ ಭಾವನೆಗಳ ಬಗ್ಗೆ ಸಹಾನುಭೂತಿ ಹೊಂದಿದ ಬಹು ಜನಾಂಗೀಯ ಸಮಾಜದ ಉದಾಹರಣೆಯಾಗಿ ಮುಂದುವರಿಯುವುದು.

ಸರ್ವಶಕ್ತನಾದ ಅಲ್ಲಾಹನು ಈ ಪ್ರದೇಶವನ್ನು ಯಾವಾಗಲೂ ಶಾಂತಿಭರಿತವನ್ನಾಗಿ ಮಾಡಲಿ. ಇಲ್ಲಿ ಪ್ರತಿಯೊಬ್ಬನಿಗೆ ತನ್ನ ಧರ್ಮವನ್ನು ಅನುಷ್ಠಾನಕ್ಕೆ ತಂದು ಜೀವಿಸುವ ಭಾಗ್ಯ ದೊರಕಲಿ. ಇಲ್ಲಿನ ಸಮಾಜದ ಪ್ರತಿಯೊಬ್ಬನು ತನ್ನ ಸಹಜೀವಿ ನಾಗರಿಕರ ಹಕ್ಕುಗಳನ್ನು ಈಡೇರಿಸಿಕೊಡುವವನಾಗಲಿ ಮತ್ತು ಸಮಾಜದಲ್ಲಿ ಶಾಂತಿ ಮತ್ತು ಸಮೃದ್ಧಿ ವರ್ಧಿಸಲು ಪರಿಶ್ರಮ ಪಡುವವನಾಗಲಿ.

ಕೊನೆಯದಾಗಿ ನಾನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ, ಈ ಮಸ್‌ಜಿದ್ ಶಾಂತಿಯ ಮಾರ್ಗದರ್ಶಕ ಜ್ಯೋತಿಯಾಗಿ ಸಮಾಜದ ಎಲ್ಲರಿಗೂ ಪರಿಣಮಿಸಲಿ ಮತ್ತು ಐಕ್ಯತೆ, ಸೌಹಾರ್ದ ಮತ್ತು ಶಾಂತಿಯ ಲಾಂಛನವಾಗಲಿ – ಆಮೀನ್.

ಈ ಸಂಜೆ ನೀವೆಲ್ಲರೂ ನಮ್ಮೊಂದಿಗೆ ಸೇರಲು ಆಗಮಿಸಿದ ಬಗ್ಗೆ ಪ್ರಾಮಾಣಿಕ ಮೆಚ್ಚುಗೆಯನ್ನು ನಿಮ್ಮೆಲ್ಲರಿಗೂ ಸಲ್ಲಿಸುತ್ತೇನೆ.

ನಿಮಗೆಲ್ಲರಿಗೂ ಧನ್ಯವಾದಗಳು.

**(The Review of Religions May 2020 ಸಂಚಿಕೆಯಿಂದ. ಭಾಷಾಂತರ: ಎಮ್. ಉಬೈದುಲ್ಲಾ)**

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಅಂತರ್ ಧರ್ಮೀಯ ಶಾಂತಿ

## ಧಾರ್ಮಿಕ ಮೌಲ್ಯಗಳ ಕ್ರಮಾತೀತ ಬೆಳವಣಿಗೆ

♦ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

ಲೋಕದ ಧರ್ಮಗಳ ಸ್ಥಿತಿಯನ್ನು ಅಧ್ಯಯನ ಮಾಡುವಾಗ ಧರ್ಮಕ್ಕೆ ಸಂಬಂಧಿಸಿ ವಿರೋಧಾಭಾಸಕರವಾದ ಸ್ಥಿತಿಯನ್ನು ನಾವು ಕಾಣದಿರುವುದಿಲ್ಲ. ಸಾಮಾನ್ಯವಾಗಿ ಹೇಳುವುದಾದರೆ, ಧರ್ಮವು ಅದರ ಹಿಡಿತವನ್ನು ಕಳೆದುಕೊಳ್ಳುತ್ತಾ ಇದೆಯಾದರೂ ಬೇರೆ ಬೇರೆ ಪ್ರದೇಶಗಳಲ್ಲಿ ಅದು ತನ್ನ ಹಿಡಿತವನ್ನು ಬಿಗಿಪಡಿಸುತ್ತಾ ಇದೆ. ಸಮಾಜದ ಕೆಲವು ವಿಭಾಗಗಳಲ್ಲಿ, –ಎಲ್ಲ ಧರ್ಮಗಳಿಗೆ ಸೇರಿದ ಜನರಲ್ಲಿ– ಮಧ್ಯಕಾಲೀನ ಕಾಲಘಟ್ಟದ ಒರಟುತನ ಮತ್ತು ವಿರೋಧದ ಬಗ್ಗೆ ಅಸಹನೆ ಕಂಡು ಬರುತ್ತಾ ಇದೆ.

ನೈತಿಕವಾಗಿ ಧರ್ಮವು ಹಿಂದೆ ಸರಿಯುತ್ತಾ ಇದೆ. ಅಪರಾಧಗಳು ಧಾರಾಳ ವರ್ಧಿಸಿವೆ. ಸತ್ಯವು ಬೇಗಬೇಗನೆ ಅದೃಶ್ಯವಾಗುತ್ತಿದೆ. ಧಾರ್ಮಿಕ ನೀತಿ ಮತ್ತು ನ್ಯಾಯಪಾಲನೆಯು ಅಳಿದು ಹೋಗುತ್ತಾ ಇದೆ. ಸಮಾಜಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಕಡೆಗಣಿಸಲಾಗುತ್ತಿದೆ. ಧಾರ್ಮಿಕ ಮೌಲ್ಯಗಳನ್ನು ಕಾಪಾಡುವುದಾಗಿ ಹೇಳಿಕೊಳ್ಳುವ ದೇಶಗಳಲ್ಲಿ ಸಹ ಸ್ವಾರ್ಥ ಹಿತಾಸಕ್ತಿಗಳು ಶಕ್ತಿಯನ್ನು ಗಳಿಸುತ್ತಾ ಇವೆ. ಧಾರ್ಮಿಕವಾಗಿ ಅಧಃಪತನ ಹೊಂದುತ್ತಿರುವ ಸಮಾಜದ ಸ್ಪಷ್ಟ ಚಿಹ್ನೆಗಳಾದ ಮೇಲೆ ವಿವರಿಸಿದ ಮತ್ತು ಇತರ ಅನೇಕ ಸಾಮಾಜಿಕ ಕೆಡುಕುಗಳು ಈಗ ಎಲ್ಲ ಕಡೆಗಳಲ್ಲೂ ಕಾಣಿಸುತ್ತಾ ಇವೆ.

ಯಾವುದೇ ಧರ್ಮದ ಜೀವ ಮತ್ತು ಆತ್ಮ ಅದರ ನೈತಿಕ ಮೌಲ್ಯಗಳಾಗಿವೆ. ಈ ನೈತಿಕ ಮೌಲ್ಯಗಳ ಕತ್ತುಗಳು ಕ್ರಮೇಣ ಹಿಸುಕಲ್ಪಡುತ್ತಿರುವಾಗ ನಾವು ಅನಿವಾರ್ಯವಾಗಿ ಹೀಗೆ ನಿಷ್ಕರ್ಷೆಗೆ ತಲಪುತ್ತೇವೆ: ಧರ್ಮದ ಆತ್ಮವು ವೇಗ ವೇಗವಾಗಿ ಶರೀರದಿಂದ ಹೊರಗೆ ಹೋಗುತ್ತಿರುವಾಗ ಧರ್ಮದ ದೇಹ ಮಾತ್ರ ಪುನಶ್ಚೇತನಗೊಳ್ಳುತ್ತಿದೆ. ನಾವು ಇಂದು ಧರ್ಮವನ್ನು ಹೀಗೆ ಕಾಣುತ್ತಿದ್ದೇವೆ – ಧರ್ಮದ ತಥಾಕಥಿತ ಪುನಶ್ಚೇತನವು ಶವಗಳ ನಡೆದಾಡುವಿಕೆಗೆ ಸಮವಾಗಿರುತ್ತದೆ.

ಇನ್ನೊಂದು ಕಡೆ ಸ್ಥಿತಿ ಹೇಗಿದೆ ಎಂದರೆ ಧಾರ್ಮಿಕ ಮನೋಭಾವದ ಜನರು ಅದ್ಭುತಕರ ಘಟನೆಗಳನ್ನು ಕಾಣದುದರಿಂದ ಬೇಸರಗೊಂಡಿರುತ್ತಾರೆ. ಅವರು ಪ್ರತೀಕ್ಷಿಸುತ್ತಿರುವ ಪವಾಡಗಳು ಸಂಭವಿಸಿವುದಿಲ್ಲ. ತಾವು ಬಯಸುವ ರೀತಿಯಲ್ಲಿ ಲೋಕದಲ್ಲಿ ಪರಿವರ್ತನೆಗಳು ಉಂಟಾಗಲು ಪ್ರಕೃತ್ಯಾತೀತ ಮಧ್ಯಪ್ರವೇಶ ನಡೆಯುತ್ತಾ ಇಲ್ಲ. ಅವರು ತಮ್ಮ ನಂಬಿಕೆಗಳ ವಿಶ್ವಾಸಾರ್ಹತೆಗೋಸ್ಕರ ವಿಚಿತ್ರವಾದ ಭವಿಷ್ಯವಾಣಿಗಳು ಈಡೇರಬೇಕೆಂದು ಬಯಸುತ್ತಾರೆ. ಆದರೆ ಹಾಗೇನೂ ಸಂಭವಿಸುವುದಿಲ್ಲ. ಇಂತಹ ಜನರು ನವೀನ ಪಂಥಗಳಿಗೆ ಮೇವನ್ನು ಒದಗಿಸುತ್ತಾರೆ. ಆ ಪಂಥಗಳು ಈ ಜನರ ನಿರಾಶೆಗಳ ನೆಲದಲ್ಲಿ ಬೆಳವಣಿಗೆ ಪಡೆಯುತ್ತವೆ. ಹಿಂದಿನ ವಿಶ್ವಾಸಾದರ್ಶಗಳಿಂದ ತಪ್ಪಿಸಿಕೊಳ್ಳುವ ಆಗ್ರಹದ ಪರಿಣಾಮವಾಗಿ ಉಂಟಾಗುವ ಶೂನ್ಯ ಪ್ರದೇಶದಲ್ಲಿ ಹೊಸತೇನಾದರೂ ತುಂಬಿಸುವ ಅಭಿಲಾಷೆ ಉಂಟಾಗುತ್ತದೆ.

ವಿನಾಶಕರವಾದ ದಿಶೆಯಲ್ಲಿ ಈ ಪರಿವರ್ತನೆಗಳಲ್ಲದೆ ಇನ್ನೊಂದು ಅತ್ಯಂತ ಆತಂಕದಾಯಕವಾದ ಪರಿಸ್ಥಿತಿ ತಲೆದೋರಿದೆ. ಅದು ಪ್ರಾಯಶಃ ಧಾರ್ಮಿಕ ನಂಬಿಕೆಗಳ ಪುನಶ್ಚೇತನದೊಂದಿಗೆ ಸಂಬಂಧಿಸಿದ್ದು, ಅದು ಲೋಕದಲ್ಲಿ ಶಾಂತಿಗೆ ಬೆದರಿಕೆ ಒಡ್ಡುವುದಾಗಿದೆ. ಇಂತಹ ನಂಬಿಕೆಗಳ ಪುನಶ್ಚೇತನದಿಂದ ವಿಷಮಯ ವಾತಾವರಣವು ಉಂಟಾಗುತ್ತಿದ್ದು ಅದು ಸಂಭಾಷಣೆಗಳ ಆರೋಗ್ಯಕರ ಪರಿಸ್ಥಿತಿಯನ್ನೂ ಚಿಂತನೆಗಳ ಸ್ವತಂತ್ರ ಹರಿಯುವಿಕೆಯನ್ನೂ ನಾಶಗೊಳಿಸುವಂತಹದ್ದಾಗಿದೆ. ಇದರೊಂದಿಗೆ ಔಚಿತ್ಯಬೋಧವಿಲ್ಲದ ಕೆಲವು ರಾಜಕಾರಣಿಗಳು ಅಸ್ಥಿರ ಸ್ಥಿತಿಗಳನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳಲು ಸದಾ ಸಿದ್ಧರಾಗುವುದರಿಂದ ಅವರ ಉದ್ದೇಶಪೂರ್ವಕ ಕ್ರಮಗಳಿಂದಲೂ ಧರ್ಮಕ್ಕೆ ಕಳಂಕ ತಗಲುತ್ತದೆ. ಚಾರಿತ್ರಿಕವಾದ ಅಂತರ್ ಧರ್ಮೀಯ ಸ್ಪರ್ಧೆಗಳು ಮತ್ತು ಜಗಳಗಳು ಸಹ ತಮ್ಮ ಕೆಲಸಗಳನ್ನು ನಿರ್ವಹಿಸುತ್ತವೆ. ಅದರೊಂದಿಗೆ "ಸ್ವತಂತ್ರ" ಎನ್ನಲಾದ ಸಂಪರ್ಕ ಮಾಧ್ಯಮಗಳು ಸಾಮಾನ್ಯವಾಗಿ ಅದೃಶ್ಯ ಕೈಗಳಿಂದ ನಿಯಂತ್ರಿಸಲ್ಪಡುತ್ತವೆ. ಅವು ಲೋಕದ ಘಟನೆಗಳ ಬಗ್ಗೆ ಸಂಪೂರ್ಣವಾಗಿ ನಿಷ್ಪಕ್ಷಪಾತಿಯಾಗಿ ವರ್ತಿಸುವ ಸ್ವಾತಂತ್ರ್ಯವನ್ನು ಹೊಂದಿರುವುದಿಲ್ಲ. ಆದುದರಿಂದ ಒಂದು ಧರ್ಮದ ಜನರು ಬಹುಸಂಖ್ಯಾತರಾಗಿರುವ ದೇಶದ ಸಂಪರ್ಕ ಮಾಧ್ಯಮಗಳು ಇನ್ನೊಂದು ಧರ್ಮದ ವಿರುದ್ಧ ನಿಂದನೆಯ ಹೋರಾಟ ನಡೆಸುವಾಗ ಆಗ ಪರಿಸ್ಥಿತಿಯು ಜಟಿಲವಾಗುತ್ತದೆ. ಈ ಜಗಳದಲ್ಲಿ ಪ್ರಥಮವಾಗಿ ಹತನಾಗುವುದು ಧರ್ಮವೇ ಆಗಿದೆ.

ಧಾರ್ಮಿಕ ಲೋಕದಲ್ಲಿ ಇಂದು ಸಂಭವಿಸುತ್ತಿರುವುದರ ಬಗ್ಗೆ ನಾನು ಬಹಳ ಆತಂಕಗೊಂಡಿರುತ್ತೇನೆ. ಧರ್ಮಗಳು ಪರಸ್ಪರ ಹೊಂದಿರುವ ತಪ್ಪು ಗ್ರಹಿಕೆಗಳನ್ನು ನಿವಾರಿಸಲು ಸತ್ಯಸಂಧವಾದ ಮತ್ತು ಗಂಭೀರವಾದ ಪ್ರಯತ್ನಗಳನ್ನು ಮಾಡುವುದು ಅತ್ಯಾವಶ್ಯಕವಾಗಿದೆ. ಇಸ್ಲಾಮ್ ಧರ್ಮವು ಈ ಕಾಲಘಟ್ಟದ ಆವಶ್ಯಕತೆಗಳನ್ನು ಈಡೇರಿಸಬಲ್ಲದೆಂದು ನಾನು ನಂಬುತ್ತೇನೆ.

ಈ ವಿಷಯವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಲು ನಾನು ಈ ವಿಷಯವನ್ನು ವಿವಿಧ ಭಾಗಗಳಾಗಿ ವಿಂಗಡಿಸಿದ್ದೇನೆ. ಉದಾಹರಣೆಗೆ, ನಾನು ಹೀಗೆ ನಂಬುತ್ತೇನೆ: ಒಂದು ಧರ್ಮವು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಹಾಯಕವಾಗಬೇಕಾದರೆ,

ಒಂದು ಧರ್ಮವು ಮನುಷ್ಯರನ್ನೆಲ್ಲ ಒಗ್ಗೂಡಿಸಲು ಸಮರ್ಥವಾಗಬೇಕಾದರೆ ಅದು ಸ್ವತಃ ಧರ್ಮದ ಸಾರ್ವಲೌಕಿಕತೆಯನ್ನು ಅಂಗೀಕರಿಸಬೇಕು. ಎಂದರೆ ಎಲ್ಲ ಮನುಷ್ಯರು ಅವರು ಯಾವ ವರ್ಣ, ಜನಾಂಗ ಅಥವಾ ಪ್ರದೇಶದವರಾಗಿದ್ದರೂ ಅವರೆಲ್ಲರೂ ಒಬ್ಬನೇ ಒಬ್ಬ ಸೃಷ್ಟಿಕರ್ತನ ಸೃಷ್ಟಿಗಳಾಗಿದ್ದಾರೆ. ಆದುದರಿಂದ ಎಲ್ಲರೂ ದೇವನ ಮಾರ್ಗದರ್ಶನ ಪಡೆಯಲು ಅರ್ಹರಾಗಿದ್ದಾರೆ. ಮಾನವರ ಒಂದು ವಿಭಾಗಕ್ಕೆ ದೇವನ ಮಾರ್ಗದರ್ಶನ ದೊರೆತಿದ್ದರೆ ಇತರ ವಿಭಾಗಗಳಿಗೂ ಮಾರ್ಗದರ್ಶನ ದೊರೆತಿರಬೇಕು. ಯಾವುದೇ ಧರ್ಮ ಸತ್ಯದ ಏಕಸ್ವಾಮಿತ್ವವನ್ನು ಪಡೆದಿರುವುದಾಗಿರುವ ಕಲ್ಪನೆಯನ್ನು ಇದು ನಿರಾಕರಿಸುತ್ತದೆ.

ಎಲ್ಲ ಧರ್ಮಗಳು, ಅವುಗಳ ಹೆಸರು ಏನೇ ಆಗಿರಲಿ, ಅವುಗಳ ತತ್ವಗಳು ಏನೇ ಆಗಿರಲಿ, ಅವು ಎಲ್ಲಿ ಇದ್ದರೂ ಅವು ಯಾವ ಕಾಲಘಟ್ಟದ್ದಾಗಿದ್ದರೂ ಅವೆಲ್ಲ ತಮ್ಮ ಬಳಿ ಕೆಲವು ದೈವಿಕ ಸತ್ಯಗಳಿವೆ ಎಂದು ವಾದಿಸಲು ಅಧಿಕಾರ ಹೊಂದಿವೆ. ತತ್ವಗಳು ಮತ್ತು ಉಪದೇಶಗಳು ವಿಭಿನ್ನವಾಗಿದ್ದರೂ ಧರ್ಮಗಳು ಒಂದೇ ಮೂಲದಿಂದ ಜನಿಸಿದವುಗಳಾಗಿವೆ. ಲೋಕದ ಒಂದು ಪ್ರದೇಶದಲ್ಲಿ ಒಂದು ಧರ್ಮವು ಹುಟ್ಟುವಂತೆ ಮಾಡಿದ ದೈವಿಕ ಶಕ್ತಿ ಲೋಕದ ಇತರ ಪ್ರದೇಶಗಳ ಜನರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಆವಶ್ಯಕತೆಗಳನ್ನು ವಿವಿಧ ಕಾಲಘಟ್ಟಗಳಲ್ಲಿ ಈಡೇರಿಸಿರಬೇಕು. ಇಸ್ಲಾಮಿನ ಪವಿತ್ರ ಗ್ರಂಥವಾದ ಪವಿತ್ರ ಖುರ್‌ಆನಿನ ಸಂದೇಶ ಇದೇ ಆಗಿರುತ್ತದೆ.

## ಪ್ರವಾದಿತ್ವದ ಸಾರ್ವಲೌಕಿಕತೆ

ಪ್ರವಾದಿತ್ವದ ಸಾರ್ವಲೌಕಿಕತೆ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ನಾವು ಪ್ರತಿಯೊಂದು ಸಮುದಾಯದಲ್ಲೂ ಸಂದೇಶವಾಹಕನನ್ನು ನಿಯೋಜಿಸಿದ್ದೇವೆ. ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ದುಷ್ಪ್ರೇರಕಗಳಿಂದೆಲ್ಲ ದೂರವಿರಿ (ಎಂದು ಅವರ ಉಪದೇಶವಾಗಿತ್ತು)" (16 : 37).

ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: ಹೇ ಪ್ರವಾದಿ, ನೀನು ಲೋಕಕ್ಕೆ ಆಗಮಿಸಿದ ಏಕಮಾತ್ರ ಪ್ರವಾದಿ ಅಲ್ಲ.

ಇದನ್ನು ವಿಶದೀಕರಿಸಿ ಹೀಗೆ ಹೇಳಿದೆ: "ನಿನಗಿಂತ ಮುಂಚೆ ಸಹ ನಾವು ಎಷ್ಟೋ ಸಂದೇಶವಾಹಕರನ್ನು ಕಳುಹಿಸಿದ್ದೆವು. ಅವರಲ್ಲಿ ಕೆಲವರ ಕುರಿತು ನಾವು ನಿನಗೆ ತಿಳಿಸಿದ್ದೇವೆ; ಕೆಲವರ ಕುರಿತು ನಾವು ನಿನಗೆ ತಿಳಿಸಿಲ್ಲ." (40 :79).

ಪವಿತ್ರ ಖುರ್‌ಆನ್ ಹಝ್ರತ್ ಪೈಗಂಬರರಿಗೆ(ಸ) ಹೀಗೆ ನೆನಪಿಸಿಕೊಡುತ್ತದೆ: "ನೀನು ಕೇವಲ ಒಬ್ಬ ಮುನ್ನೆಚ್ಚರಿಕೆಗಾರನಾಗಿರುವೆ. ದಿಟವಾಗಿಯೂ ನಾವು ನಿನ್ನನ್ನು ಸತ್ಯದೊಂದಿಗೆ ಶುಭ ಸಮಾಚಾರ ಅರುಹುವವನಾಗಿಯೂ ಮುನ್ನೆಚ್ಚರಿಕೆ ನೀಡುವವನಾಗಿಯೂ ಕಳುಹಿಸಿದ್ದೇವೆ. ಓರ್ವ ಮುನ್ನೆಚ್ಚರಿಕೆಗಾರನು ಬಂದಿರದ ಯಾವುದೇ ಜನಾಂಗವಿಲ್ಲ." (35: 24–25).

ಪವಿತ್ರ ಖುರ್‌ಆನಿನ ಮೇಲೆ ಉಲ್ಲೇಖಿಸಿದ ವಚನಗಳಿಂದ ಹೀಗೆ ಸ್ಪಷ್ಟವಾಗುತ್ತದೆ: ಇತರ ಧರ್ಮಗಳನ್ನು ನಿರಾಕರಿಸಿ ಇಸ್ಲಾಮ್ ಧರ್ಮವು ಸತ್ಯವನ್ನು ತನ್ನ ಏಕ ಸ್ವಾಮಿತ್ವಕ್ಕೆ ಸೇರಿದುದೆಂದು ಘೋಷಿಸುವುದಿಲ್ಲ. ಅದು ಹೀಗೆ ಸ್ಪಷ್ಟವಾಗಿ ಹೇಳುತ್ತದೆ, ಎಲ್ಲ ಕಾಲಘಟ್ಟಗಳಲ್ಲೂ ಲೋಕದ ಎಲ್ಲ ಪ್ರದೇಶಗಳಲ್ಲೂ ದೇವನು ಮಾನವರ ಆಧ್ಯಾತ್ಮಿಕ ಮತ್ತು ಧಾರ್ಮಿಕ ಆವಶ್ಯಕತೆಗಳನ್ನು ಈಡೇರಿಸಲಿಕ್ಕೋಸ್ಕರ ತನ್ನ ಸಂದೇಶವಾಹಕರನ್ನು ಕಳುಹಿಸುತ್ತಾ ಇದ್ದನು. ಆ ಸಂದೇಶವಾಹಕರನ್ನು ಯಾರಿಗೋಸ್ಕರ ಕಳುಹಿಸಲಾಗಿತ್ತೋ ಆ ಜನರಿಗೆ ಅವರು ದೇವನ ಸಂದೇಶವನ್ನು ತಲಪಿಸುತ್ತಾ ಇದ್ದರು.

## ಎಲ್ಲ ಪ್ರವಾದಿಗಳು ಸಮಾನರು

ಒಂದು ಪ್ರಶ್ನೆ ಉದಿಸುತ್ತದೆ. ಲೋಕದ ಎಲ್ಲ ಪ್ರದೇಶಗಳ ಜನರಿಗೆ ವಿವಿಧ ಕಾಲಘಟ್ಟಗಳಲ್ಲಿ ಅನೇಕ ಪ್ರವಾದಿಗಳು ದೇವನಿಂದ ಕಳುಹಿಸಲ್ಪಟ್ಟಿದ್ದರೆ ಅವರೆಲ್ಲರೂ ಸಮಾನವಾದ ದೈವಿಕ ಅಧಿಕಾರ ಹೊಂದಿದ್ದರೆ? ಪವಿತ್ರ ಖುರ್‌ಆನ್ ಪ್ರಕಾರ ಎಲ್ಲ ಪ್ರವಾದಿಗಳು ದೇವನಿಂದ ನೇಮಿಸಲ್ಪಟ್ಟವರಾಗಿದ್ದಾರೆ. ಅವರಿಗೆ ದೇವನಿಂದ ಲಭಿಸಿದ ಅಧಿಕಾರದ ಬಗ್ಗೆ ಹೇಳುವುದಾದರೆ, ಅವರು ತಮಗೆ ದೇವನಿಂದ ದೊರೆತ ಅಧಿಕಾರವನ್ನು ಸಮಾನ ಶಕ್ತಿ ಮತ್ತು ಬಲದಿಂದ ಚಲಾಯಿಸುತ್ತಾರೆ. ಒಬ್ಬ ಪ್ರವಾದಿಯನ್ನು ಇನ್ನೊಬ್ಬ ಪ್ರವಾದಿಯೊಂದಿಗೆ ತಾರತಮ್ಯ ಭಾವನೆಯಿಂದ ಕಾಣುವ ಹಕ್ಕು ಯಾರಿಗೂ ಇರುವುದಿಲ್ಲ. ಪ್ರವಾದಿಗಳಿಗೆ ದೇವನಿಂದ ದೊರೆತ ಸಂದೇಶದ ಸತ್ಯತೆಯ ಬಗ್ಗೆ ಹೇಳುವುದಾದರೆ, ಎಲ್ಲ ಪ್ರವಾದಿಗಳು ಸಮಾನರಾಗಲೇಬೇಕು. ಇತರ ಧರ್ಮಗಳ ಮತ್ತು ಅವರ ಸ್ಥಾಪಕ ಪ್ರವಾದಿಗಳ ಬಗ್ಗೆ ಮತ್ತು ಸ್ಥಾಪಕ ಪ್ರವಾದಿಯ ಅನುಯಾಯಿಗಳಾದ ಪ್ರವಾದಿಗಳ ಬಗ್ಗೆ ಇಸ್ಲಾಮ್ ಧರ್ಮದ ಅಭಿಪ್ರಾಯವು ವಿವಿಧ ಧರ್ಮಗಳನ್ನು ಒಗ್ಗೂಡಿಸಲು ಮತ್ತು ಪರಸ್ಪರ ಸಂಬಂಧಗಳನ್ನು ಬಿಗಿಪಡಿಸಲು ಸಹಾಯಕವಾಗಿದೆ. ಪ್ರತಿಯೊಬ್ಬ ಪ್ರವಾದಿಗೆ ದೊರೆತ ದೈವಿಕ ಸಂದೇಶವಾಣಿ ಸಮಾನವಾದ ಗೌರವಕ್ಕೆ ಅರ್ಹವಾಗಿದೆ ಎಂಬ ಸಿದ್ಧಾಂತವು ವಿವಿಧ ಧರ್ಮಗಳನ್ನು ಒಗ್ಗೂಡಿಸಲು ಅತ್ಯಂತ ಬಲಶಾಲಿ ಶಕ್ತಿಯಾಗಬಹುದು. ಅನ್ಯ ಧರ್ಮಗಳ ಪ್ರವಾದಿಗಳಿಗೆ ದೊರೆತ ಸಂದೇಶವಾಣಿಗಳ ಬಗ್ಗೆ ಇರುವ ದ್ವೇಷ ಮನೋಭಾವವನ್ನು ಈ ನಿಲುವು ಹೋಗಲಾಡಿಸುವುದು ಮತ್ತು ಪರಸ್ಪರ ಆದರ ಭಾವನೆ ಉಂಟುಮಾಡುವುದು. ಪವಿತ್ರ ಖುರ್‌ಆನ್ ತರ್ಕಬದ್ಧವಾದ ಈ ನಿಲುವನ್ನು ಹೀಗೆ ಪ್ರಕಟಿಸಿದೆ:

"(ನಮ್ಮ) ಈ ಸಂದೇಶವಾಹಕ ತನ್ನ ಪ್ರಭುವಿನಿಂದ ತನಗೆ ಅವತೀರ್ಣಗೊಂಡದ್ದರಲ್ಲಿ ವಿಶ್ವಾಸವಿಟ್ಟಿರುತ್ತಾರೆ. (ಹಾಗೆಯೇ ಇತರ) ಸತ್ಯ ವಿಶ್ವಾಸಿಗಳು ಸಹ ವಿಶ್ವಾಸವಿಟ್ಟಿರುತ್ತಾರೆ. (ಅವರು) ಎಲ್ಲರೂ ಅಲ್ಲಾಹನಲ್ಲೂ ಅವನ ದೂತರಲ್ಲೂ ಅವನ ಗ್ರಂಥಗಳಲ್ಲೂ ಅವನ ಸಂದೇಶವಾಹಕರಲ್ಲೂ ವಿಶ್ವಾಸವಿಟ್ಟಿರುತ್ತಾರೆ. 'ಅಲ್ಲಾಹನ ಸಂದೇಶವಾಹಕರ ಮಧ್ಯೆ ನಾವು ವ್ಯತ್ಯಾಸವನ್ನೇನೂ ಕಲ್ಪಿಸುವುದಿಲ್ಲ' (ಎಂದು ಅವರು ಹೇಳುತ್ತಾರೆ). 'ನಾವು (ಅಲ್ಲಾಹನ ಆಜ್ಞೆಯನ್ನು) ಕೇಳಿ (ಹೃತ್ಪೂರ್ವಕವಾಗಿ) ಅನುಸರಿಸಿದ್ದೇವೆ' ಎಂದು ಸಹ ಅವರು ಹೇಳುತ್ತಾರೆ." (2 : 286).

ಇದೇ ವಿಷಯವನ್ನು ಪವಿತ್ರ ಖುರ್‌ಆನ್ ಬೇರೆ ವಚನಗಳಲ್ಲಿ ಹೀಗೆ ಪುನರಾವರ್ತಿಸಿ ಹೇಳಿದೆ: "ಅಲ್ಲಾಹನನ್ನೂ ಅವನ ಸಂದೇಶವಾಹಕರನ್ನೂ ಧಿಕ್ಕರಿಸಿ, ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮಧ್ಯೆ ವ್ಯತ್ಯಾಸ ತೋರಿಸಲು ಉದ್ದೇಶಿಸುತ್ತಾ, 'ನಾವು ಕೆಲವರನ್ನು ನಂಬುತ್ತೇವೆ, ಕೆಲವರನ್ನು ನಿರಾಕರಿಸುತ್ತೇವೆ' ಎಂದು ಹೇಳಿ ಇದರ ಮಧ್ಯೆ ಬೇರೊಂದು ಮಾರ್ಗವನ್ನು ಅನುಸರಿಸಲು ಬಯಸುವವರಾರೋ ನಿಶ್ಚಯವಾಗಿಯೂ ಅವರೇ ನಿಜವಾದ ಅವಿಶ್ವಾಸಿಗಳು. ನಾವು ಅವಿಶ್ವಾಸಿಗಳಿಗೆ ನಿಂದನೀಯ ಶಿಕ್ಷೆಯನ್ನು ಕಾದಿರಿಸಿದ್ದೇವೆ. ಅಲ್ಲಾಹನನ್ನೂ ಅವನ (ಎಲ್ಲ) ಸಂದೇಶವಾಹಕರನ್ನೂ ನಂಬಿ, (ನಂಬಿಕೆಯ ವಿಚಾರದಲ್ಲಿ) ಅವರ ಮಧ್ಯೆ ಯಾರಲ್ಲೂ ವ್ಯತ್ಯಾಸ ಮಾಡದವರಾರೋ, ಅವರಿಗೆ ಅವರ ಪ್ರತಿಫಲವನ್ನು ಅವನು (ಅಲ್ಲಾಹನು) ಶೀಘ್ರದಲ್ಲೇ ನೀಡುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ." (4 : 151–153).

## ಪ್ರವಾದಿಗಳು ಸತ್ಯವಂತರೆಂಬ ವಿಷಯದಲ್ಲಿ ಸಮಾನರಾಗಿದ್ದರೆ ಅವರ ಪದವಿಗಳಲ್ಲಿ ವ್ಯತ್ಯಾಸವಿರುವುದೇ?

ಪ್ರವಾದಿಗಳು ದೇವನಿಂದ ಸತ್ಯವಾಗಿಯೂ ನೇಮಿಸಲ್ಪಟ್ಟವರಾಗಿದ್ದರೂ ಅವರ ಪದವಿಗಳು ಸಮಾನವಾಗಿರಬೇಕೆ? ಈ ಪ್ರಶ್ನೆಗೆ ಉತ್ತರವೇನೆಂದರೆ, ಪ್ರವಾದಿಗಳು ತಮ್ಮ ವೈಯಕ್ತಿಕ ಗುಣಗಳಲ್ಲೂ ತಮ್ಮ ಹೊಣೆಗಾರಿಕೆಯನ್ನು ಈಡೇರಿಸುವ ರೀತಿಗಳಲ್ಲೂ ಬೇರೆ ಬೇರೆಯಾಗಿದ್ದಾರೆ. ದೇವನೊಂದಿಗೆ ಸಾಮೀಪ್ಯ ಹೊಂದಿದ ವಿಷಯದಲ್ಲೂ ದೇವನ ದೃಷ್ಟಿಯಲ್ಲಿ ಅವರು ಹೊಂದಿರುವ ಪದವಿಗಳಲ್ಲೂ ಪ್ರವಾದಿಗಳು ಒಬ್ಬರಿನ್ನೊಬ್ಬರಿಗಿಂತ ವ್ಯತ್ಯಾಸ ಹೊಂದಿದ ಪದವಿ ಗಳಿಸಿರುತ್ತಾರೆ. ಪವಿತ್ರ ಬೈಬಲ್, ಪವಿತ್ರ ಖುರ್‌ಆನ್ ಮತ್ತು ಇತರ ಧಾರ್ಮಿಕ ಗ್ರಂಥಗಳು ವಿವರಿಸಿದ ಪ್ರವಾದಿಗಳ ಚರಿತ್ರೆಯ ಅಧ್ಯಯನ ಈ ನಿಷ್ಕರ್ಷೆಯನ್ನು ಬೆಂಬಲಿಸುತ್ತದೆ.

ಪವಿತ್ರ ಖುರ್‌ಆನ್ ಹೇಳುವುದೇನೆಂದರೆ, ಪ್ರವಾದಿಗಳ ಮಧ್ಯದಲ್ಲಿರುವ ಪದವಿಗಳ ವ್ಯತ್ಯಾಸ ಮನುಷ್ಯನ ಮನಶ್ಶಾಂತಿಯನ್ನು ಕೆಡಿಸದ ರೀತಿಯಲ್ಲಿದೆ. ದೇವನಿಂದ ಅಧಿಕಾರ ಪಡೆದ ವಿಷಯದಲ್ಲಿ ಪ್ರವಾದಿಗಳ ಮಧ್ಯೆ ವ್ಯತ್ಯಾಸವಿಲ್ಲ ಎಂದು ಘೋಷಿಸುವ ಪವಿತ್ರ ಖುರ್‌ಆನ್ ಹೀಗೆ ಸಹ ಹೇಳುತ್ತದೆ: "(ಮೇಲೆ ಹೇಳಿದ) ಆ ಸಂದೇಶವಾಹಕರಲ್ಲಿ ಕೆಲವರನ್ನು (ಇತರ) ಕೆಲವರಿಗಿಂತ ಶ್ರೇಷ್ಠರನ್ನಾಗಿ ಮಾಡಿರುವೆವು. ಅಲ್ಲಾಹನು (ವಿಶೇಷವಾಗಿ) ಮಾತನಾಡಿದ ಕೆಲವರೂ ಅವರ ಪೈಕಿಯಲ್ಲಿದ್ದಾರೆ. ಕೆಲವರನ್ನು ಅವನು ಹಲವು ಪದವಿಗಳನ್ನು ನೀಡಿ ಉನ್ನತಗೊಳಿಸಿರುವನು." (2 : 254).

ಈ ಪ್ರಸ್ತಾಪವನ್ನು ಅಂಗೀಕರಿಸುವಾಗ ಪ್ರವಾದಿಗಳಲ್ಲಿ ಯಾರು ಅತ್ಯಂತ ಉನ್ನತ ಪದವಿಯನ್ನು ಹೊಂದಿರುವರೆಂದು ಗಣಿಸಬೇಕೆಂದು ಚಿಂತಿಸಬೇಕಾಗಬಹುದು. ಇದು ಬಹಳ ಸೂಕ್ಷ್ಮಸಂವೇದನಶೀಲ ವಿಷಯವಾಗಿದೆ. ಆದರೆ ಈ ಪ್ರಶ್ನೆಯ ಪ್ರಾಮುಖ್ಯತೆಯ ಬಗ್ಗೆ ಕಣ್ಣು ಮುಚ್ಚಲು ಸಾಧ್ಯವಿಲ್ಲ.

ಸರ್ವ ಸಾಮಾನ್ಯ ಎಲ್ಲ ಧರ್ಮಗಳ ಅನುಯಾಯಿಗಳು ಹೀಗೆ ವಾದಿಸುತ್ತಾರೆ: ನಮ್ಮ ಧರ್ಮದ ಸ್ಥಾಪಕ ಅತ್ಯಂತ ಶ್ರೇಷ್ಠರಾಗಿದ್ದಾರೆ. ಅವರಿಗೆ ಸರಿಸಮಾನರಾದ ಒಬ್ಬರೂ ಇಲ್ಲ. ಉನ್ನತ ಗುಣ, ಘನತೆ, ಭಕ್ತಿ, ಗೌರವ ಮತ್ತು ಪ್ರವಾದಿಗೆ ಅನುಯೋಜ್ಯವಾದ ಇತರ ಎಲ್ಲ ಗುಣಗಳಲ್ಲೂ ಅಪ್ರತಿಮರಾಗಿದ್ದಾರೆ.

ಇಸ್ಲಾಮಿನ ಪ್ರವಾದಿ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಇತರ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠ ಪದವಿ ಹೊಂದಿದ್ದಾರೆಂದು ಇಸ್ಲಾಮ್ ಸಹ ವಾದಿಸುತ್ತಿದೆಯೋ? ಹೌದು, ಇಸ್ಲಾಮ್ ಧರ್ಮವು ಹಝ್‌ರತ್ ಮುಹಮ್ಮದ್ ಪೈಗಂಬರರು(ಸ) ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠ ಪದವಿ ಹೊಂದಿದ್ದಾರೆಂದು ಘೋಷಿಸುತ್ತದೆ. ಆದರೆ ಈ ವಾದದಲ್ಲಿ ಇತರ ಧರ್ಮಗಳ ಮತ್ತು ಇಸ್ಲಾಮ್ ಮಧ್ಯೆ ಸ್ಪಷ್ಟವಾದ ವ್ಯತ್ಯಾಸಗಳು ಇವೆ.

ಎಲ್ಲದಕ್ಕಿಂತಲೂ ಮೊದಲು ಮನವರಿಕೆ ಮಾಡಿಕೊಳ್ಳಬೇಕಾದುದೇನೆಂದರೆ, ಇಸ್ಲಾಮ್ ಹೊರತು ಬೇರೆ ಯಾವ ಧರ್ಮವೂ ಪ್ರವಾದಿತ್ವದ ಸಾರ್ವಲೌಕಿಕತೆಯನ್ನು ಪ್ರತಿಪಾದಿಸುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಯಹೂದಿಯರು ಮೂಸಾ ಪ್ರವಾದಿಯನ್ನು ಅತ್ಯಂತ ಶ್ರೇಷ್ಠ ಪ್ರವಾದಿ ಎನ್ನುವಾಗ ಅವರು ಪ್ರವಾದಿ ಮೂಸಾರನ್ನು ಇತರ ಪ್ರವಾದಿಗಳಾದ ಶ್ರೀಬುದ್ಧ, ಶ್ರೀಕೃಷ್ಣ, ಈಸಾ ಮಸೀಹ್, ಅಥವಾ ಮುಹಮ್ಮದ್ ಪೈಗಂಬರ್‌ರೊಂದಿಗೆ(ಸ) ಹೋಲಿಸಿ ಹೇಳುವುದಿಲ್ಲ. ಏಕೆಂದರೆ ಮೇಲೆ ಉಲ್ಲೇಖಿಸಿದ ಮಹಾನ್ ಧರ್ಮ ಸ್ಥಾಪಕರನ್ನು ಸತ್ಯವಾದಿಗಳೆಂದೂ ಅಂಗೀಕಾರಾರ್ಹರೆಂದೂ ಅವರು ನಂಬುವುದಿಲ್ಲ. ಆದುದರಿಂದ ಯಹೂದಿಯರ ಪ್ರವಾದಿಗಳ ಪಟ್ಟಿಯಲ್ಲಿ ಬೈಬಲಿನ ಹಳೆಯ ಒಡಂಬಡಿಕೆಯ ಪ್ರವಾದಿಗಳ ಹೊರತು ಬೇರೆ ಯಾವ ಪ್ರವಾದಿಯ ಹೆಸರೂ ಇರುವುದಿಲ್ಲ. ಲೋಕದ ಬೇರೆ ಪ್ರದೇಶಗಳಲ್ಲಿ ಪ್ರವಾದಿಗಳು ಆಗಮಿಸುವರೆಂಬ ಸಾಧ್ಯತೆಯನ್ನೂ ನಿರಾಕರಿಸಲಾಗಿದೆ. ಯಹೂದಿಯರ ಈ ಮನೋಭಾವದ ಕಾರಣ ಯಹೂದಿಯರು ತಮ್ಮ ಒಬ್ಬ ಪ್ರವಾದಿಯ ಶ್ರೇಷ್ಠತೆಯನ್ನು ವಾದಿಸುವಾಗ ಅದು ಇಸ್ಲಾಮ್ ಧರ್ಮ ಪ್ರತಿಪಾದಿಸುವ ಶ್ರೇಷ್ಠತೆಯ ವಿಭಾಗಕ್ಕೆ ಸೇರುವುದಿಲ್ಲ. ಏಕೆಂದರೆ ಯಹೂದಿ ಧರ್ಮದ ಪ್ರಕಾರ ಬೈಬಲ್ ವಿವರಿಸುವವರ ಹೊರತು ಬೇರೆ ಯಾವ ಪ್ರವಾದಿಯೂ ಇಲ್ಲ. ಬುದ್ಧ ಧರ್ಮದವರು, ಝೊರಾಸ್ಟ್ರಿಯನ್ ಧರ್ಮದವರು, ಹಿಂದೂ ಧರ್ಮದವರು ಮೊದಲಾದವರು ಇದಕ್ಕೆ ಸರಿಸಮಾನವಾದ ವಿಶ್ವಾಸಗಳನ್ನೇ ಹೊಂದಿರುತ್ತಾರೆ.

ಇನ್ನೊಂದು ವ್ಯತ್ಯಾಸವನ್ನೂ ನೆನಪಿಟ್ಟುಕೊಳ್ಳಬೇಕು. ನಾವು ವಿವಿಧ ಧರ್ಮಗಳ ಪ್ರವಾದಿಗಳ ಬಗ್ಗೆ ಹೇಳುವಾಗ ಕೆಲವು ಧರ್ಮಗಳ ಜನರು ತಮ್ಮ ಪವಿತ್ರ ಧಾರ್ಮಿಕ ಪುರುಷರನ್ನು ಪ್ರವಾದಿ ಎಂದು ಯಾವಾಗಲೂ ಹೇಳುವುದಿಲ್ಲ. ಯಹೂದಿ ಧರ್ಮ, ಕ್ರೈಸ್ತ ಧರ್ಮ ಮತ್ತು ಇಸ್ಲಾಮ್ ಧರ್ಮಗಳಲ್ಲಿರುವ ಪ್ರವಾದಿಗಳ ಮತ್ತು ಸಂದೇಶವಾಹಕರ ಕಲ್ಪನೆ ಅದೇ ರೀತಿಯಲ್ಲಿ ಅನ್ಯಧರ್ಮಗಳು ಹೊಂದಿಲ್ಲ. ಇದಕ್ಕೆ ಬದಲಾಗಿ ಅವರು ತಮ್ಮ ಧರ್ಮದ ಸ್ಥಾಪಕರನ್ನು ಮತ್ತು ಇತರ ಪವಿತ್ರ ಧಾರ್ಮಿಕ ಪುರುಷರನ್ನು ಮಹಾತ್ಮರೆಂದೂ

ದೇವನ ಅವತಾರವೆಂದೂ ಅಥವಾ ದೇವನೆಂದೂ ಅಥವಾ ಅದಕ್ಕೆ ಸಮೀಪವಾದ ಇನ್ನೊಂದು ಎಂದೂ ನಂಬುತ್ತಾರೆ. ಕ್ರೈಸ್ತ ಧರ್ಮೀಯರು ಈಸಾ ಮಸೀಹರನ್ನು ಸಹ ಇದೇ ವರ್ಗಕ್ಕೆ ಸೇರಿದುದಾಗಿ ಭಾವಿಸುತ್ತಿದ್ದಾರೆ. ಇದೊಂದು ಅಪವಾದವಾಗಿದೆ.

ಆದರೆ ಇಸ್ಲಾಮ್ ಧರ್ಮದ ಪ್ರಕಾರ ತಥಾಕಥಿತ ದೇವರು, ದೇವನ ಅವತಾರ, ದೇವಪುತ್ರ ಅಥವಾ ದೇವರ ಮಕ್ಕಳು ವಾಸ್ತವಿಕವಾಗಿ ಕೇವಲ ಪ್ರವಾದಿಗಳೂ ಸಂದೇಶವಾಹಕರೂ ಆಗಿದ್ದರು. ಅವರನ್ನು ಕಾಲಾಂತರದಲ್ಲಿ ಅವರ ಅನುಯಾಯಿಗಳು ದೈವತ್ವಕ್ಕೇರಿಸಿದರು. ಧಾರ್ಮಿಕ ಮಹಾಪುರುಷರನ್ನು ದೈವೀಕರಿಸುವ ಪ್ರಕ್ರಿಯೆ ಕ್ರಮೇಣ ನಡೆದುದಾಗಿದೆ ಎಂದು ಇಸ್ಲಾಮ್ ಹೇಳುತ್ತದೆ. ಯಾವುದೇ ಪ್ರವಾದಿಯನ್ನು ಅವರ ಸಮಕಾಲೀನ ಪೀಳಿಗೆಗೆ ಸೇರಿದ ಜನರು ದೈವತ್ವಕ್ಕೇರಿಸಿರಲಿಲ್ಲ. ಅದರ ಬಗ್ಗೆ ಮುಂದೆ ವಿವರಿಸುವೆವು.

ಇಸ್ಲಾಮ್ ಧರ್ಮವು ಅದರ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಸರ್ವಶ್ರೇಷ್ಠ ಪ್ರವಾದಿ ಎಂದು ವಾದಿಸುವಾಗ ಅದು ಇತರ ಧರ್ಮಗಳ ಪವಿತ್ರ ವ್ಯಕ್ತಿಗಳನ್ನು ಗಮನದಲ್ಲಿರಿಸುತ್ತದೆ. ಯಹೂದಿ – ಇಸ್ಲಾಮ್ ಧರ್ಮಗಳ ಕಲ್ಪನೆ ಪ್ರಕಾರ ಅವರನ್ನು ಪ್ರವಾದಿಗಳೆಂದು ಗಣಿಸುತ್ತದೆ. ಎಲ್ಲ ದೈವಿಕ ಧರ್ಮಗಳ ಸ್ಥಾಪಕರು ದೇವನಿಂದ ನೇಮಿಸಲ್ಪಟ್ಟ ಪ್ರವಾದಿಗಳಾಗಿದ್ದರೂ ಅವರೆಲ್ಲರೂ ಮನುಷ್ಯರಾಗಿದ್ದರೆಂದು ಇಸ್ಲಾಮ್ ಹೇಳುತ್ತದೆ. ಈ ಸಾರ್ವಲೌಕಿಕ ಪ್ರಕ್ರಿಯೆಗೆ ಯಾವುದೇ ಅಪವಾದವಿಲ್ಲ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತಂದು, ಇವರಿಗೆ ಸಾಕ್ಷಿಯಾಗಿ ನಿನ್ನನ್ನೂ ತರುವಾಗ (ಇವರ) ಸ್ಥಿತಿ ಏನಾಗಿರಬಹುದು?" (4 :42).

ಮೇಲಿನ ಮುಖ್ಯ ವಿಶದೀಕರಣದ ನಂತರ ಪವಿತ್ರ ಖುರ್‌ಆನ್ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪದವಿಯನ್ನು ಅಧ್ಯಯನ ಮಾಡಲು ಮುಂದುವರಿಯುತ್ತೇವೆ. ಅತ್ಯಂತ ಸ್ಪಷ್ಟವೂ ಅಖಂಡನೀಯವೂ ಆಗಿರುವ ವಾದವನ್ನು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಬಗ್ಗೆ ಅತ್ಯಂತ ಪ್ರಸಿದ್ಧವೂ ಬಹಳ ಚರ್ಚಿಸಲ್ಪಡುವುದೂ ಆಗಿರುವ ಈ ಕೆಳಗಿನ ಪವಿತ್ರ ಖುರ್‌ಆನ್ ವಚನದಲ್ಲಿ ಪ್ರಸ್ತಾಪಿಸಲಾಗಿದೆ: "ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತನಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ (ಖಾತಮುನ್ನಬಿಯ್ಯೀನ್) ಆಗಿದ್ದಾರೆ. ಎಲ್ಲ ವಿಚಾರಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ." (33 : 41).

ಈ ವಚನದಲ್ಲಿರುವ ಖಾತಮ್ ಎಂಬ ಪದಕ್ಕೆ ಅನೇಕ ಅರ್ಥಗಳಿವೆ. ಆದರೆ ಖಾತಮುನ್ನಬಿಯ್ಯೀನ್ ಎಂಬ ಪದದ ಅರ್ಥ ನಿಸ್ಸಂದೇಹವಾಗಿಯೂ ಪ್ರವಾದಿಗಳಲ್ಲಿ ಅತ್ಯುತ್ತಮನು, ಸರ್ವಶ್ರೇಷ್ಠನು, ಕೊನೆಯ ಶಬ್ದ, ಸರ್ವೋನ್ನತ ಅಧಿಕಾರಿ, ಎಲ್ಲರನ್ನೂ ತನ್ನಲ್ಲಿ ಅಳವಡಿಸಿಕೊಂಡವನು ಮತ್ತು ಅನ್ಯರ ಸತ್ಯತೆಯನ್ನು ದೃಢೀಕರಿಸುವವನು ಎಂದೆಲ್ಲ ಆಗಿವೆ. (ಇ. ಡಬ್ಲ್ಯುಲೇನ್ ಬರೆದ ನಿಘಂಟು, ಅಖ್‌ರಬುಲ್ ಮವಾರೀದ್, ಮುಫ್ರದಾತು ರಾಗಿಬ್, ಫತ್‌ಹ್ ಮತ್ತು ಝುರ್‌ಖಾನಿ ಮೊದಲಾದ ಅರಬಿ ನಿಘಂಟುಗಳನ್ನು ನೋಡಿರಿ).

ಇನ್ನೊಂದು ಪವಿತ್ರ ಖುರ್‌ಆನ್ ವಚನ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸರ್ವಶ್ರೇಷ್ಠತೆಯನ್ನು ಪ್ರಸ್ತಾಪಿಸಿ ಪವಿತ್ರ ಪೈಗಂಬರರ ಉಪದೇಶಗಳು ಪರಿಪೂರ್ಣವೂ ಅಂತಿಮವಾದುದೆಂದೂ ಹೇಳುತ್ತದೆ. ಆ ವಚನ ಹೀಗಿದೆ: "ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ಆಯ್ಕೆ ಮಾಡಿರುವೆನು." (5 : 4).

ಈ ವಚನದಿಂದ ಹೀಗೆ ತಿಳಿಯುತ್ತದೆ: ಲೋಕದಲ್ಲಿ ಆಗಮಿಸಿದ ನಿಯಮ ಸಂಹಿತೆ (ಶರೀಅತ್) ತಂದ ಪ್ರವಾದಿಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಸರ್ವಶ್ರೇಷ್ಠರೆಂದೂ ಅವರು ಅತ್ಯಂತ ಪರಿಪೂರ್ಣವಾದ ಉಪದೇಶ ಸಂಹಿತೆಯನ್ನು ಲೋಕಕ್ಕೆ ತಂದು ಪ್ರವಾದಿಗಳಲ್ಲಿ ಅತ್ಯಂತ ಉನ್ನತ ಸ್ಥಾನ ಪಡೆದರು ಎಂದೂ ಸ್ಪಷ್ಟವಾಗುತ್ತದೆ.

ಇದೇ ವಿಷಯವನ್ನು ಮುಂದುವರಿಸಿ ಇಸ್ಲಾಮ್ ಧರ್ಮದ ಪವಿತ್ರ ಪ್ರವಾದಿಗೆ(ಸ) ಹೀಗೆ ಸ್ಪಷ್ಟವಾಗಿ ಖಾತರಿ ನೀಡಲಾಗಿದೆ: ಅವರಿಗೆ ಅವತೀರ್ಣವಾದ ಗ್ರಂಥವು ಸಂರಕ್ಷಿಸಲ್ಪಡುವುದು ಮತ್ತು ಹಸ್ತಕ್ಷೇಪಗಳಿಂದ ರಕ್ಷಣೆ ಪಡೆಯುವುದು. ಈ ರೀತಿ ಹಝ್ರತ್ ಪೈಗಂಬರರಿಗೆ(ಸ) ಅವತೀರ್ಣವಾದ ಗ್ರಂಥ ಪರಿಪೂರ್ಣವಾಗಿರುವುದು ಮಾತ್ರವಲ್ಲ ಅದು ಶಾಶ್ವತವಾಗಿ ಯಾವುದೇ ಪರಿವರ್ತನೆಗೆ ಗುರಿಯಾಗದೆ ಅದು ಹೇಗೆ ಅವತೀರ್ಣಗೊಂಡಿತೋ ಅದೇ ರೀತಿಯಲ್ಲಿ ಶುದ್ಧ ರೂಪದಲ್ಲಿ ಬಾಕಿಯಾಗಿ ಉಳಿಯುವುದು. ಕಳೆದ ಹದಿನಾಲ್ಕು ನೂರು ವರ್ಷಗಳ ಚರಿತ್ರೆಯು ಈ ಖಾತರಿಯು ಸತ್ಯವಾಗಿ ಪಾಲಿಸಲ್ಪಟ್ಟಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ಸಂಬಂಧಿಸಿದ ಪವಿತ್ರ ಖುರ್‌ಆನಿನ ಕೆಲವು ವಚನಗಳು ಈ ಕೆಳಗಿನವುಗಳಾಗಿವೆ:

"ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದ್ದು, ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು." (15 :10).

"ಇದಾದರೋ ಮಹತ್ವಪೂರ್ಣವಾದ ಖುರ್‌ಆನ್ ಆಗಿದೆ; ಸುರಕ್ಷಿತವಾಗಿರುವ ಫಲಕದಲ್ಲಿ." (85 : 22–23).

ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನಗಳಲ್ಲಿ ಇಸ್ಲಾಮ್ ಧರ್ಮದ ಪ್ರವಾದಿಯನ್ನು ಅತ್ಯಂತ ಶ್ರೇಷ್ಠ ಪ್ರವಾದಿ ಎಂದು ಮಾತ್ರವಲ್ಲ ಅಂತಿಮ ನ್ಯಾಯ ಪ್ರಮಾಣ ಸಂಹಿತೆ ತಂದ ಪ್ರವಾದಿ ಎಂದೂ ಅವರ ಅಧಿಕಾರ ಲೋಕಾಂತ್ಯದ ತನಕ ಮುಂದುವರಿಯುವುದು ಎಂದೂ ಸ್ಪಷ್ಟವಾಗಿ ಘೋಷಿಸಲಾಗಿದೆ.

ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠರೆಂದು ಘೋಷಿಸುವುದರಿಂದ ವಿವಿಧ ಧರ್ಮಗಳ ಅನುಯಾಯಿಗಳ ಮಧ್ಯೆ ಅನಿಷ್ಟ ಭಾವನೆ ಮತ್ತು ತಪ್ಪು ಗ್ರಹಿಕೆ ಉಂಟಾಗಲಾರದೆ? ಎಂದು ಕೆಲವರು ಯೋಚಿಸಬಹುದು. ಇಸ್ಲಾಮ್ ಎಲ್ಲ ಕ್ಷೇತ್ರಗಳಲ್ಲೂ ಶಾಂತಿಯ ಖಾತರಿ ನೀಡುತ್ತದೆ ಎಂದೂ

ಧಾರ್ಮಿಕ ಕ್ಷೇತ್ರವು ಅದರಲ್ಲಿ ಅತ್ಯಂತ ಮುಖ್ಯವಾದುದೆಂದೂ ನಾನು ಪ್ರಸ್ತಾಪಿಸಲಿರುವಾಗ ಈ ವಾದವು ಅದರೊಂದಿಗೆ ಸಮನ್ವಯ ಹೊಂದುವುದು ಹೇಗೆ?

ಈ ಪ್ರಶ್ನೆ ನನ್ನ ಮನಸ್ಸಿನಲ್ಲಿದ್ದುದರಿಂದ ನಾನು ಈ ವಾದದ ಬಗ್ಗೆ ದೀರ್ಘವಾಗಿ ವಿವರಿಸಬೇಕಾಗಿತ್ತು. ಪೂರ್ವಗ್ರಹ ಪೀಡಿತವಾಗದ ಜಿಜ್ಞಾಸು ಮನಸ್ಸಿಗೆ ಇದರ ಬಗ್ಗೆ ಒಂದಕ್ಕಿಂತ ಹೆಚ್ಚು ಸಮಾಧಾನಕರ ಉತ್ತರ ನೀಡಬಹುದಾಗಿದೆ.

ಇದರ ಮೊದಲು ವಿವರಿಸಿದ ಹಾಗೆ ಅನೇಕ ಧರ್ಮಗಳ ಅನುಯಾಯಿಗಳು ತಮ್ಮ ಧರ್ಮಗಳ ಸ್ಥಾಪಕರ ಬಗ್ಗೆ ಇದೇ ರೀತಿಯಲ್ಲಿ ಶ್ರೇಷ್ಠತೆಯ ವಾದ ಮಾಡಿದ್ದರು. ಈ ವಾದಗಳ ಬಗ್ಗೆ ಅನಾವಶ್ಯಕವಾಗಿ ಭಾವೋದ್ವೇಗಕ್ಕೊಳಗಾಗದೆ ಅವರ ವಾದದ ಅರ್ಹತೆಯನ್ನು ಪರಿಶೋಧಿಸುವುದು ಬುದ್ಧಿಗೆ ಅನುಯೋಜ್ಯವಾದುದಾಗಿದೆ. ಒಂದು ಧರ್ಮದವರು ಈ ರೀತಿ ವಾದಿಸಿದರೆ ಅದು ಬೇರೆ ಧರ್ಮದವರ ಭಾವನೆಗಳನ್ನು ನೋಯಿಸಬೇಕೆಂದಿಲ್ಲ. ಅದಕ್ಕೆ ಉತ್ತರವಾಗಿ ಅದೇ ರೀತಿಯ ವಾದ ಬೇರೆ ಧರ್ಮದವರು ಮಾಡಬೇಕೆಂದಿಲ್ಲ.

ಇಸ್ಲಾಮ್ ತನ್ನ ಅನುಯಾಯಿಗಳಿಗೆ ವಿನಯವನ್ನೂ ಸಭ್ಯತೆಯನ್ನೂ ಕಲಿಸುತ್ತದೆ. ಇಸ್ಲಾಮಿನ ಪವಿತ್ರ ಪೈಗಂಬರರ(ಸ) ಶ್ರೇಷ್ಠತೆಯನ್ನು ಅಜಾಗರೂಕತೆಯಿಂದ ಪ್ರಸ್ತಾಪಿಸಿ ಅನ್ಯ ಧರ್ಮದವರಿಗೆ ನೋವನ್ನುಂಟು ಮಾಡಬಾರದೆಂದು ಇಸ್ಲಾಮ್ ಕಲಿಸುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಎರಡು ಹದೀಸುಗಳು (ನುಡಿಮುತ್ತುಗಳು) ಈ ವಿಷಯದ ಬಗ್ಗೆ ಬೆಳಕನ್ನು ಬೀರುವ ದೀಪಸ್ತಂಭಗಳಾಗಿವೆ:

1. ಹಝ್ರತ್ ಪೈಗಂಬರರ(ಸ) ಒಬ್ಬ ಶಿಷ್ಯ ಯೂನುಸ್ ಪ್ರವಾದಿಯ ಒಬ್ಬ ನಿಷ್ಠಾವಂತ ಅನುಯಾಯಿಯೊಂದಿಗೆ ಬಿರುಸಾದ ಚರ್ಚೆ ಮಾಡುವಾಗ ಅವರಿಬ್ಬರೂ ತಮ್ಮ ತಮ್ಮ ಪ್ರವಾದಿಯು ಶ್ರೇಷ್ಠರೆಂದು ವಾದಿಸಿದರು. ಮುಸ್ಲಿಮನ ವಾದವು ಯೂನುಸ್ ಪ್ರವಾದಿಯ ಅನುಯಾಯಿಯನ್ನು ನೋಯಿಸಿತೆಂದು ಕಾಣುತ್ತದೆ. ಅವನು ಹಝ್ರತ್ ಪೈಗಂಬರರಿಗೆ ದೂರಿತ್ತನು. ಆಗ ಹಝ್ರತ್ ಪೈಗಂಬರರು(ಸ) ಹೇಳಿದರು: "ಮತ್ತನ ಪುತ್ರ ಯೂನುಸ್ ಪ್ರವಾದಿಗಿಂತ ನಾನು ಶ್ರೇಷ್ಠನೆಂದು ಘೋಷಿಸಬೇಡಿರಿ." (ಅಲ್ ಬಿದಾಯ ವನ್ನಿಹಾಯ ಲಿ ಇಬ್ನಿ ಕಸೀರ್ ಸಂಪುಟ 1 ಪುಟ 171).

ಹದೀಸುಗಳ ವ್ಯಾಖ್ಯಾನಗಾರರನ್ನು ಈ ಹದೀಸು ಆಶ್ಚರ್ಯಕ್ಕೊಳಪಡಿಸಿದೆ. ಏಕೆಂದರೆ ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಪ್ರವಾದಿ ಯೂನಸ್‌ರಿಗಿಂತ ಮಾತ್ರವಲ್ಲ ಇತರ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠರು ಎಂಬ ಪವಿತ್ರ ಖುರ್‌ಆನಿನ ವಾದವನ್ನು ಈ ಹದೀಸು ಮೇಲಿಂದ ಮೇಲೆ ನೋಡುವಾಗ ಖಂಡಿಸುತ್ತದೆ ಎಂದು ತೋರಬಹುದಾಗಿದೆ. ಆದರೆ ವ್ಯಾಖ್ಯಾನಗಾರರು ಗಮನಿಸದ ವಿಷಯವೇನೆಂದರೆ, ಹಝ್ರತ್ ಪೈಗಂಬರರು ತನ್ನನ್ನು ಪ್ರವಾದಿ ಯೂನುಸ್‌ಗಿಂತ ಕೆಳಮಟ್ಟದವನೆಂದು ಹೇಳಿಲ್ಲ. ಹಝ್ರತ್ ಪೈಗಂಬರರು(ಸ) ಹೇಳಿದುದೇನೆಂದರೆ, "ಅನ್ಯರ ಭಾವನೆಗಳಿಗೆ ನೋವುಂಟಾಗುವ ರೀತಿಯಲ್ಲಿ ನನ್ನ ಶ್ರೇಷ್ಠತೆಯನ್ನು ಪ್ರಕಟಿಸಬಾರದು" ಎಂದು ಮಾತ್ರವಾಗಿದೆ. ಈ ಘಟನೆಯಿಂದ ತಿಳಿಯುವುದೇನೆಂದರೆ, ಹಝ್ರತ್ ಪೈಗಂಬರರು ತನ್ನ ಅನುಯಾಯಿಗಳಿಗೆ ಸಭ್ಯತೆಯ ಪಾಠ ಅದರ ಮೂಲಕ ನೀಡಿದರು. ತನ್ನ ಅನುಯಾಯಿಗಳು ಹೆಮ್ಮೆ ಕೊಚ್ಚಿಕೊಳ್ಳಬಾರದೆಂದು ಆ ಮೂಲಕ ಉಪದೇಶಿಸಿದರು. ಅನ್ಯರಿಗೆ ನೋವುಂಟಾಗುವ ರೀತಿಯಲ್ಲಿ ತನ್ನ ಶ್ರೇಷ್ಠತೆಯ ಬಗ್ಗೆ ವಾದಿಸಬಾರದೆಂದು ಹಝ್ರತ್ ಪೈಗಂಬರರು(ಸ) ಬಯಸಿದ್ದರು. ಹಾಗೆ ಅನ್ಯರಿಗೆ ನೋವುಂಟು ಮಾಡಿದರೆ ಅದು ಇಸ್ಲಾಮಿನ ಪ್ರಚಾರಕ್ಕೆ ಹಾನಿಕರವಾಗುವುದು. ಜನರ ಹೃದಯಗಳನ್ನೂ ಮನಸ್ಸುಗಳನ್ನೂ ಜಯಿಸುವುದಕ್ಕೆ ಬದಲಾಗಿ ಅದಕ್ಕೆ ವಿರುದ್ಧವಾದ ಪರಿಣಾಮ ಉಂಟಾಗುವುದು.

2. ಹಝ್ರತ್ ಪೈಗಂಬರರ(ಸ) ಮನೋಭಾವ ಇನ್ನೊಂದು ಹದೀಸಿನಿಂದ ಇನ್ನಷ್ಟು ಸ್ಪಷ್ಟವಾಗುತ್ತದೆ. ಒಬ್ಬ ಮುಸ್ಲಿಮ್ ಒಬ್ಬ ಯಹೂದಿಯನೊಂದಿಗೆ ಪ್ರವಾದಿಗಳ ಶ್ರೇಷ್ಠತೆ ಬಗ್ಗೆ ವಾಗ್ವಾದ ಮಾಡಿದರು. ಯಹೂದಿ ವಾಗ್ವಾದದಿಂದ ನೊಂದುಕೊಂಡು ಹಝ್ರತ್ ಪೈಗಂಬರರಿಗೆ ದೂರಿತ್ತನು. ಹಝ್ರತ್ ಪೈಗಂಬರರು ತನ್ನ ಸಹಜ ವಿನಯ ಭಾವದಿಂದಲೂ ವಿವೇಕದಿಂದಲೂ ಮುಸ್ಲಿಮರಿಗೆ ಸಭ್ಯತೆ ಮತ್ತು ಶಿಷ್ಟಾಚಾರವನ್ನು ಕಲಿಸಲು ಹೀಗೆ ಹೇಳಿದರು: "ನಾನು ಪ್ರವಾದಿ ಮೂಸಾರಿಗಿಂತ ಶ್ರೇಷ್ಠ ಎಂದು ಹೇಳಬೇಡಿರಿ." (ಒಂದನೇ ಹದೀಸು ಉಲ್ಲೇಖಿಸಲಾದ ಗ್ರಂಥದ ಸಂಪುಟ 1, ಪುಟ 237 ಮತ್ತು ಬುಖಾರಿ).

ಸಂಕ್ಷಿಪ್ತವಾಗಿ ಹೇಳುವುದಾದರೆ, ಯಾರು ಪ್ರವಾದಿಗಳಲ್ಲಿ ಶ್ರೇಷ್ಠ ಪ್ರವಾದಿ ಎಂದು ತೀರ್ಮಾನಿಸುವ ಮತ್ತು ಘೋಷಿಸುವ ಅಧಿಕಾರ ಇರುವುದು ದೇವನಿಗೆ ಮಾತ್ರವಾಗಿದೆ. ಅವನು ವಿವಿಧ ಪ್ರವಾದಿಗಳು ತನ್ನೊಂದಿಗೆ ಹೊಂದಿರುವ ಸಾಮೀಪ್ಯ ಪ್ರಕಾರ ಹಾಗೆ ಪ್ರಕಟಿಸುತ್ತಾನೆ. ಒಂದು ವಿಶಿಷ್ಟ ಕಾಲಘಟ್ಟದಲ್ಲಿ, ಒಂದು ವಿಶಿಷ್ಟ ಧರ್ಮಕ್ಕೆ ಸೇರಿದ ಪ್ರವಾದಿಯನ್ನು ಶ್ರೇಷ್ಠನೆಂದು ಘೋಷಿಸಿರಬಹುದು. ಒಂದು ಕಾಲಘಟ್ಟಕ್ಕೆ ಸಂಬಂಧಿಸಿ ಅದಕ್ಕೆ ಮಾತ್ರ ಸೀಮಿತಗೊಳಿಸಿ ಶ್ರೇಷ್ಠತೆಯನ್ನು ಘೋಷಿಸಿರಬಹುದು.

ಹೀಗೆ ಘೋಷಿಸಿದುದರಿಂದ ಆ ಪ್ರವಾದಿ ಅತ್ಯಂತ ಪವಿತ್ರರೆಂದೂ ಅತ್ಯಂತ ಶ್ರೇಷ್ಠರಾಗಿ ಎಲ್ಲ ಕಾಲಘಟ್ಟದಲ್ಲೂ ಗಣಿಸಲ್ಪಡುವರೆಂದೂ ಅವರ ಅನುಯಾಯಿಗಳು ಸುಲಭವಾಗಿ ಯೋಚಿಸಿರಬಹುದು. ಇದು ಸತ್ಯವೆಂದು ಒಂದು ಧರ್ಮದವರು ನಂಬುವರಾದರೆ ಅದು ಅನ್ಯ ಧರ್ಮದವರಿಗೆ ನೋವನ್ನುಂಟುಮಾಡುವ ಅಪರಾಧ ಎಂದು ಗಣಿಸಲಾಗದು. ಆದರೆ ಅಂತಹ ವಿಷಯಗಳನ್ನು ವಿವಿಧ ಧರ್ಮಗಳನ್ನು ಸಂಘರ್ಷಕ್ಕೊಯ್ಯುವ ರೀತಿಯಲ್ಲಿ ದುರುಪಯೋಗಪಡಿಸಬಾರದು. ಮೇಲೆ ಉಲ್ಲೇಖಿಸಿದ ಹದೀಸುಗಳಲ್ಲಿ ಈ ಎಚ್ಚರಿಕೆಯನ್ನು ಹಝ್ರತ್ ಪೈಗಂಬರರು(ಸ) ನೀಡಿದ್ದರು. ವಿನಯ ಮತ್ತು ಸಭ್ಯತೆಯ ಈ ತತ್ವವನ್ನು ಎಲ್ಲ ಧರ್ಮಗಳ ಜನರು ಪಾಲಿಸುವರಾದರೆ ಧಾರ್ಮಿಕ ಲೋಕದ ಜಗಳಗಳಿಗೆ ಪರಿಹಾರವಾಗುವುದು. ♦

**(ಅನುವಾದಕ: ಎಮ್. ಉಬೈದುಲ್ಲಾ)**

# * ಇಸ್ಲಾಮಿನ ಸತ್ಯಸಾಕ್ಷ್ಯ *

### ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ (ದ್ವಿತೀಯ ಖಲೀಫ)ರವರ ಭಾಷಣ

## ಧರ್ಮದ ಉದ್ದೇಶ ಲಕ್ಷ್ಯ

ನನ್ನ ಭಾಷಣ ಇಸ್ಲಾಮ್ ಧರ್ಮದ ಸತ್ಯಸಾಕ್ಷ್ಯದ ಬಗ್ಗೆಯಾಗಿದೆ. ಅದರ ಬಗ್ಗೆ ಇರುವ ಸಾಕ್ಷ್ಯಾಧಾರಗಳು ಯಾವುವು ಮತ್ತು ಈಗ ಇಸ್ಲಾಮ್‌ನೊಂದಿಗೆ ಸಂಬಂಧವಿರಿಸಿರುವವರು ಅಭಿವೃದ್ಧಿ ಗಳಿಸಲಿರುವ ಮಾರ್ಗಗಳು ಯಾವುವು ಎನ್ನುವುದರ ಬಗ್ಗೆಯಾಗಿದೆ. ಯಾವುದಾದರೊಂದು ಧರ್ಮದ ಸತ್ಯಸಾಕ್ಷ್ಯದ ಬಗ್ಗೆ ಚಿಂತಿಸುವ ಮೊದಲು ಅತ್ಯಂತ ಆವಶ್ಯಕವಾದುದು ಧರ್ಮದ ಉದ್ದೇಶಲಕ್ಷ್ಯ ಏನೆಂದು ನಾವು ನೋಡಬೇಕು. ಏಕೆಂದರೆ ಈ ವಿಷಯ ತಿಳಿಯದೆ ಇದ್ದರೆ ನಾವು ಒಂದು ಧರ್ಮದ ಸತ್ಯಸಾಕ್ಷ್ಯದ ಬಗ್ಗೆ ಚರ್ಚೆ ಮಾಡುವಾಗ ಎಲ್ಲಿಂದ ಎಲ್ಲಿಗೋ ಹೋಗಿ ಬಿಡುವ ಸಾಧ್ಯತೆ ಇದೆ. ನಾವು ಒಂದು ವಿಷಯವನ್ನು ಸತ್ಯತೆಗಿರುವ ಸಾಕ್ಷ್ಯಾಧಾರ ಎಂದು ಭಾವಿಸಿದರೂ ಆ ವಿಷಯ ಧರ್ಮದ ಸತ್ಯತೆಯೊಂದಿಗೆ ಯಾವುದೇ ಸಂಬಂಧವಿರದುದು ಆಗಿರಬಹುದು. ಉದಾಹರಣೆಗೆ, ಒಬ್ಬನು ಮನೆ ಖರೀದಿಸಲು ಹೋಗುವಾಗ ಅವನ ಉದ್ದೇಶ ಒಳ್ಳೆಯ ಚಿತ್ರಕಲೆ ಕೃತಿಗಳು ಕಾಣಿಸಬೇಕೆಂದಾಗಲಿ, ಮನೆಯೊಳಗೆ ಕೊಳ ನಿರ್ಮಿತವಾಗಿರಬೇಕೆಂದಾಗಲಿ ಆಗಿರುವುದಿಲ್ಲ. ಅವನು ಮುಖ್ಯ ಉದ್ದೇಶ ಸೆಖೆ ಮತ್ತು ಚಳಿಯಿಂದ ರಕ್ಷಣೆ ಪಡೆಯುವುದು, ತನ್ನ ಸಂಪತ್ತಿನ ಸಂರಕ್ಷಣೆ ಮತ್ತು ಕುಟುಂಬ ಸಂಬಂಧದಲ್ಲಿ ಅನ್ಯರು ಹಸ್ತಕ್ಷೇಪ ಮಾಡದಂತಿರಬೇಕು ಎಂದಾಗಿರುತ್ತದೆ. ಮನೆಯ ಉದ್ದೇಶ ಇದೇ ಆಗಿದೆ. ಮನೆ ಖರೀದಿಸುವಾಗ ಇದನ್ನೇ ನೋಡಲಾಗುವುದು. ಈ ಉದ್ದೇಶ ಲಕ್ಷ್ಯಗಳು ಈಡೇರುವುದಾದರೆ ಮನೆ ಖರೀದಿಸಲಾಗುವುದು. ಅವುಗಳು ಈಡೇರುವುದಿಲ್ಲವಾದರೆ ನಾವು ಮನೆ ಖರೀದಿಸಲಾರೆವು. ಛಾವಣಿ ಇಲ್ಲದ, ಆದರೆ ಗೋಡೆಗಳ ಮೇಲೆ ಚಿತ್ರಕಲೆ ಕೃತಿಗಳಿರುವ ಮನೆಯನ್ನು ನಾವು ಖರೀದಿಸಲು ಸಿದ್ಧರಾಗುವೆವೋ? ಖಂಡಿತ ಸಿದ್ಧರಾಗಲಾರೆವು. ಏಕೆಂದರೆ ಆ ಮನೆಯಿಂದ ಮನೆಯ ಉದ್ದೇಶಲಕ್ಷ್ಯಗಳು ಈಡೇರಲಾರವು. ಇದೇ ರೀತಿ ನಾವು ಧರ್ಮದ ಸತ್ಯಸಾಕ್ಷ್ಯದ ಬಗ್ಗೆ ಚಿಂತಿಸುವಾಗ ಧರ್ಮದ ಉದ್ದೇಶ ಲಕ್ಷ್ಯವೇನೆಂದು ಯೋಚಿಸುವುದು ಆವಶ್ಯಕವಾಗಿದೆ. ಇದನ್ನು ತಿಳಿದರೆ ಯಾವ ಧರ್ಮ ಇದನ್ನು ಈಡೇರಿಸುತ್ತದೆ ಎಂದು ನೋಡಬಹುದಾಗಿದೆ. ಯಾವ ಧರ್ಮ ಉದ್ದೇಶಲಕ್ಷ್ಯವನ್ನು ಈಡೇರಿಸುತ್ತದೆಯೋ ಅದೇ ಧರ್ಮ ಸತ್ಯ ಧರ್ಮವಾಗಿದೆ. ಆ ಧರ್ಮವೇ ಸ್ವೀಕಾರಾರ್ಹವಾಗಿದೆ. ಧರ್ಮದ ಉದ್ದೇಶಲಕ್ಷ್ಯವೇನೆಂದು ತಿಳಿಯದಿದ್ದರೆ ಧರ್ಮವನ್ನು ಗುರುತಿಸಲು ಸಾಧ್ಯವಾಗದು. ಆದುದರಿಂದ ಧರ್ಮಗಳ ಸತ್ಯತೆ ಬಗ್ಗೆ ಮಾತನಾಡುವ ಪ್ರತಿಯೊಬ್ಬ ಭಾಷಣಗಾರ ಭಾಷಣ ಪ್ರಾರಂಭಿಸುವಾಗ ಮೊತ್ತ ಮೊದಲು ಧರ್ಮದ ಉದ್ದೇಶ ಲಕ್ಷ್ಯವೇನೆಂದು ವಿವರಿಸಬೇಕು. ಆಗ ಪ್ರತಿಯೊಬ್ಬ ಶ್ರೋತೃವಿಗೆ ಭಾಷಣಕಾರನ ದೃಷ್ಟಿಯಲ್ಲಿ ಧರ್ಮದ ಉದ್ದೇಶವೇನೆಂದು ತಿಳಿಯುವುದು. ಆಗ ಅವನಿಗೆ ತಿಳಿಯುವುದು ಧರ್ಮದ ಉದ್ದೇಶ ಲಕ್ಷ್ಯದ ಬಗ್ಗೆ ತಾನು ಮನವರಿಕೆ ಮಾಡಿಕೊಂಡದ್ದು ಸರಿಯಲ್ಲವೆಂದು ಅಥವಾ ಭಾಷಣಕಾರ ಹೇಳಿದುದು ಸರಿಯಲ್ಲವೆಂದು ಮತ್ತು ಭಾಷಣಕಾರನ ಭಾಷಣ ಕೆಟ್ಟ ಅಸ್ತಿಭಾರದ ಮೇಲೆ ಕಟ್ಟಿದ ಕಟ್ಟಡದ ಹಾಗೆ ಇರುವುದೆಂದು.

ಈ ದಿನ ನಾನು ಧರ್ಮದ ಸತ್ಯಸಾಕ್ಷ್ಯಗಳನ್ನು ವಿವರಿಸುವ ಮೊದಲು ಧರ್ಮದ ಉದ್ದೇಶ ಲಕ್ಷ್ಯವೇನೆಂದು ವಿವರಿಸುವೆನು. ನೆನಪಿಡಬೇಕಾದುದೇನೆಂದರೆ ಇಸ್ಲಾಮ್ ಎಂಬ ಪದ ಅರಬಿ ಭಾಷೆಯದ್ದಾಗಿದೆ. ಈ ಶಬ್ದದ ಮೂಲಕ ಇಸ್ಲಾಮ್ ಧರ್ಮದ ಉದ್ದೇಶಲಕ್ಷ್ಯ ಏನೆಂದು ತಿಳಿಯುವುದು ಅತ್ಯಂತ ಸುಲಭಕರವಾಗಿದೆ. ಇದಕ್ಕೆ ಕಾರಣವೇನೆಂದರೆ ಅರಬಿ ಭಾಷೆಗೆ ಅಲ್ಲಾಹನು ಎಂತಹ ವೈಶಿಷ್ಟ್ಯ ನೀಡಿರುವನೆಂದರೆ ಅದರ ಎಲ್ಲ ಶಬ್ದಗಳು ಅರ್ಥಭರಿತವಾಗಿವೆ. ಲೋಕದ ಇತರ ಯಾವುದೇ ಭಾಷೆಗೆ ಈ ವೈಶಿಷ್ಟ್ಯವಿಲ್ಲ. ಬೇರೆ ಭಾಷೆಗಳಲ್ಲಿ, ಉದಾಹರಣೆಗೆ ಉರ್ದು ಭಾಷೆಯಲ್ಲಿ ನೋಡಿರಿ. ಯಾರ ಹೊಟ್ಟೆಯಿಂದ ಮಗು ಜನಿಸುತ್ತದೆಯೋ ಅವರನ್ನು "ಮಾಂ" ಎಂದು ಹೇಳುತ್ತಾರೆ. ಯಾರ ವೀರ್ಯದಿಂದ ಮಗು ಹುಟ್ಟುತ್ತದೆಯೇ ಅವರನ್ನು "ಬಾಪ್" ಎಂದು ಕರೆಯುತ್ತಾರೆ. ಆದರೆ ಮಾಂ ಮತ್ತು ಬಾಪ್ ಎಂಬ ಶಬ್ದಗಳಲ್ಲಿ ಮಗು ಹುಟ್ಟುವ ಬಗ್ಗೆ ಯಾವುದೇ ಸೂಚನೆ ಇರುವುದಿಲ್ಲ. "ಮಾಂ" ಎಂಬ ಪದಕ್ಕೆ ಬದಲಾಗಿ "ಪಾನೀ" ಎಂಬ ಶಬ್ದ ಬಳಸಿದರೂ ಆ ಶಬ್ದ ಸಹ ಇದೇ ರೀತಿಯಲ್ಲಿ ಇರುತ್ತದೆ. ಆದರೆ ಅರಬಿ ಭಾಷೆಯಲ್ಲಿ ಆ ರೀತಿ ಇಲ್ಲ. ಅದರಲ್ಲಿ ಒಂದು ಹೆಸರು ಇರಿಸಿದರೆ ಅದಕ್ಕೆ ಬಳಸಲಾದ ಪದ ಅದರ ಕೆಲಸ ಏನೆಂದು ಸೂಚಿಸುತ್ತದೆ; ಅದರ ಉದ್ದೇಶಲಕ್ಷ್ಯ ಏನೆಂದು ಸೂಚಿಸುತ್ತದೆ.

ಅರಬಿ ಭಾಷೆಯಲ್ಲಿ ತಾಯಿಯನ್ನು ಉಮ್ಮ್ ಎಂದು ಕರೆಯುತ್ತಾರೆ. ಅದರ ಅರ್ಥ ಬೇರು ಎಂದಾಗಿದೆ. ಬೇರಿನಿಂದ ಗಿಡ ಹುಟ್ಟುವ ಹಾಗೆ ಮಗು ತಾಯಿಯಿಂದ ಹುಟ್ಟುತ್ತದೆ. ಮಗು ತಾಯಿಯ ಗಿಡವಾಗಿರುತ್ತದೆ. ಆದರೆ ಉರ್ದು ಭಾಷೆಯಲ್ಲಿ ಮಾಂ ಎಂಬ ಪದಕ್ಕೆ ಬದಲಾಗಿ ಲಾಂ ಅಥವಾ ಶಾಂ ಎಂದು ಹೆಸರು ಇರಿಸುತ್ತಿದ್ದರೂ ವ್ಯತ್ಯಾಸವಾಗುತ್ತಿರಲಿಲ್ಲ. ಆದರೆ ಉಮ್ಮ್ ಎಂಬ ಪದಕ್ಕೆ ಬದಲಾಗಿ ಬೇರೆ ಪದ ಇರಿಸುತ್ತಿದ್ದರೆ ಆ ಪದ ಉಮ್ಮ್ ಪದದ ಅರ್ಥ ನೀಡಲಾರದು. ಉಮ್ಮ್ ಎಂಬ ಪದದ ಅರ್ಥ ಹಿಂಬಾಲಿಸಲ್ಪಡುವ ವಸ್ತುವೆಂದು ಸಹ ಇದೆ. ಮಗು ತಾಯಿಯ ಹಿಂದೆ ನಡೆಯುತ್ತಾ ಇರುವುದರಿಂದ ತಾಯಿಯನ್ನು ಅರಬಿಯಲ್ಲಿ ಉಮ್ಮ್ ಎಂದು ಹೇಳುತ್ತಾರೆ. ಮಗು ಪ್ರತಿಯೊಂದು ಕಷ್ಟದ ಸಂದರ್ಭದಲ್ಲಿ ತಾಯಿಯ ಕಡೆಗೆಯೇ ತಿರುಗುತ್ತದೆ. ಆದುದರಿಂದ ಉಮ್ಮ್ ಎಂಬ ಶಬ್ದದಲ್ಲಿ ಅಡಕವಾಗಿರುವ ಅರ್ಥ ಬೇರೆ ಯಾವ ಶಬ್ದದಲ್ಲಿಯೂ ಇರುವುದಿಲ್ಲ. ಅರಬಿ ಭಾಷೆಯ ಎಲ್ಲ ಪದಗಳ ಸ್ಥಿತಿ ಹೀಗೆಯೇ ಇದೆ. ಇದೇ ರೀತಿ ಧರ್ಮದ ಹೆಸರನ್ನು "ಮಝ್‌ಹಬ್" ಎಂದು ಅರಬಿಯಲ್ಲಿ ಇರಿಸಲಾಗಿದೆ. ಈ ಶಬ್ದ ಧರ್ಮದ ಉದ್ದೇಶಲಕ್ಷ್ಯವನ್ನು ಸೂಚಿಸುತ್ತದೆ. ಮಝ್‌ಹಬ್ ಎಂಬ ಪದದ ಅರ್ಥ ಮಾರ್ಗ, ದಾರಿ, ರೀತಿ ಮತ್ತು

ಶರೀಅತ್ ಎಂದು. ಎಂದರೆ ಮನುಷ್ಯನನ್ನು ಶಾರೀರಿಕವಾಗಿ ಅಲ್ಲ, ನೈತಿಕವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ತಲಪಿಸುವ ನಿಯಮಗಳೇ ಮರ್ಸ್ಹಬ್ ಆಗಿದೆ. ಈ ನಿಯಮಗಳು ತಲಪಿಸುವುದು ಎಲ್ಲಿಗೆ? ಇದರ ಬಗ್ಗೆ ಎಲ್ಲ ಧರ್ಮಗಳು ಒಮ್ಮತಾಭಿಪ್ರಾಯ ಹೊಂದಿವೆ. ದೇವನ ಕಡೆಗೆ ತಲಪಿಸುವುದೇ ಧರ್ಮಗಳ ಉದ್ದೇಶಲಕ್ಷ್ಯವಾಗಿದೆ. ಇದರ ಹೊರತು ಧರ್ಮಕ್ಕೆ ಬೇರೆ ಉದ್ದೇಶಲಕ್ಷ್ಯವಿಲ್ಲ. ಧರ್ಮದ ಉದ್ದೇಶಲಕ್ಷ್ಯ ವ್ಯಾಪಾರದ ನಿಯಮಗಳನ್ನು ರಚಿಸುವುದಲ್ಲ. ಯಾವ ಜನರ ವ್ಯಾಪಾರ ಬಹಳ ಬಿರುಸಾಗಿದೆಯೋ ಅವರ ಧರ್ಮ ಸತ್ಯವೆಂದು ಗಣಿಸಬೇಕಾಗಿಲ್ಲ. ಧರ್ಮದ ಉದ್ದೇಶ ಸಂಪತ್ತಲ್ಲ. ಯಾರಲ್ಲಿ ಸಂಪತ್ತು ಅಧಿಕವಾಗಿದೆಯೋ ಅವರ ಧರ್ಮ ಸತ್ಯವೆಂದು ಗಣಿಸಬೇಕಾಗಿಲ್ಲ. ಧರ್ಮದ ಉದ್ದೇಶ ರಾಜ್ಯಾಧಿಕಾರವಲ್ಲ. ಯಾರು ಹೆಚ್ಚು ರಾಜ್ಯಗಳಲ್ಲಿ ಅಧಿಕಾರ ಹೊಂದಿರುವರೋ ಅವರ ಧರ್ಮ ಸತ್ಯವೆಂದು ಗಣಿಸಬೇಕಾಗಿಲ್ಲ. ಧರ್ಮ ಎಂದರೆ ಅದು ಒಂದು ಮಾರ್ಗವನ್ನು ತೋರಿಸುವಂತಹದು ಆಗಿದೆ. ಆ ಮಾರ್ಗದಲ್ಲಿ ನಡೆದು ಮನುಷ್ಯನು ದೇವನ ಸಮೀಪ ತಲಪುವನು. ಯಾವ ಧರ್ಮ ಈ ಉದ್ದೇಶಲಕ್ಷ್ಯವನ್ನು ಈಡೇರಿಸುತ್ತಿದೆಯೋ ಅದೇ ಸತ್ಯಧರ್ಮವಾಗಿದೆ. ಯಾವ ಧರ್ಮ ಈ ಉದ್ದೇಶಲಕ್ಷ್ಯವನ್ನು ಈಡೇರಿಸುವುದಿಲ್ಲವೋ ಅದು ಸತ್ಯಧರ್ಮವಲ್ಲ.

## ಇಸ್ಲಾಮ್ ಧರ್ಮ ಈ ಉದ್ದೇಶಲಕ್ಷ್ಯವನ್ನು ಈಡೇರಿಸುತ್ತಿದೆಯೋ?

ಧರ್ಮದ ಉದ್ದೇಶಲಕ್ಷ್ಯ ಏನೆಂದು ತಿಳಿದಿರುವಾಗ ನಾವು ನೋಡಬೇಕಾದುದೇನೆಂದರೆ ಇಸ್ಲಾಮ್ ಧರ್ಮದ ಸತ್ಯವು ಇದರ ಮೂಲಕ ಸಾಬೀತಾಗುತ್ತಿದೆಯೋ? ದೇವನ ಕಡೆಗೆ ತಲಪುವ ಮಾರ್ಗವನ್ನು ಅದು ತೋರಿಸಿಕೊಡುತ್ತಿದೆಯೋ? ಅಥವಾ ಅದು ಮನಸ್ಸಿಗೆ ಚಲೋದಾಗಿ ತೋರುವ ಉಪದೇಶ ನೀಡುತ್ತಿದೆಯಾದರೂ ದೇವನ ಕಡೆಗೆ ತಲಪಿಸುವುದಿಲ್ಲವೇ? ಇಸ್ಲಾಮಿನ ಉಪದೇಶಗಳು ದೇವನ ಕಡೆಗೆ ತಲಪಿಸುವುದಿಲ್ಲವಾದರೆ ಅದರ ಸತ್ಯತೆ ಬಗ್ಗೆ ಎಷ್ಟೆಲ್ಲ ಸಾಕ್ಷ್ಯಾಧಾರಗಳನ್ನು ನೀಡಿದರೂ ಅವುಗಳಿಂದ ಲಾಭವೇನೂ ದೊರಕದು. ಆದರೆ ಇಸ್ಲಾಮ್ ಮನುಷ್ಯನನ್ನು ಅಲ್ಲಾಹನ ಕಡೆಗೆ ತಲಪಿಸುತ್ತದೆ ಎಂದು ಸಾಬೀತಾದರೆ ಪ್ರತಿಯೊಬ್ಬ ಬುದ್ಧಿಶಾಲಿ ಮನುಷ್ಯನು ಇಸ್ಲಾಮಿನ ಬಗ್ಗೆ, ಅದು ಅಲ್ಲಾಹನಿಂದ ಅವತೀರ್ಣಗೊಳಿಸಲ್ಪಟ್ಟ ಸತ್ಯ ಧರ್ಮವೆಂದು ಅಂಗೀಕರಿಸಬೇಕಾಗುವುದು.

## ಪ್ರತಿಯೊಂದು ಧರ್ಮದಲ್ಲಿ ಏನಾದರೂ ಒಳಿತು ಇರುತ್ತದೆ

ನಾನು ಪ್ರಾಸ್ತಾವಿಕವಾಗಿ ಇನ್ನೊಂದು ವಿಷಯ ಸಹ ಹೇಳಲು ಬಯಸುತ್ತೇನೆ. ಒಂದು ಧರ್ಮ ಸತ್ಯ ಧರ್ಮವೆಂದು ಸಾಬೀತು ಗೊಳಿಸುವುದರಿಂದ ಉಳಿದ ಎಲ್ಲ ಧರ್ಮಗಳು ನಿರರ್ಥಕವೆಂದೂ ಅವುಗಳ ಎಲ್ಲ ಉಪದೇಶಗಳು ನಿಷ್ಪ್ರಯೋಜಕವೆಂದೂ ಸಾಬೀತಾಗಲಾರದು. ನಮ್ಮ ದೇಶದಲ್ಲಿ ದೊಡ್ಡ ಕಲಹಗಳುಂಟಾಗಲು ಕಾರಣವೇನೆಂದರೆ, ಪ್ರತಿಯೊಂದು ಧರ್ಮದ ಜನರು ತಮ್ಮದು ಮಾತ್ರ ಸತ್ಯಧರ್ಮ, ಉಳಿದ ಎಲ್ಲ ಧರ್ಮಗಳು ಪೂರ್ಣವಾಗಿ ಸುಳ್ಳು ಎಂದು ಭಾವಿಸುವವರಾಗಿರುತ್ತಾರೆ. ಆದರೆ ಧರ್ಮಗಳ ಬಗ್ಗೆ ಅಧ್ಯಯನ ಮಾಡಿದವರು ಚೆನ್ನಾಗಿ ಮನವರಿಕೆ ಮಾಡಿಕೊಂಡಿರುವುದೇನೆಂದರೆ, ಯಾವುದಾದರೊಂದು ಒಳಿತು ಒಳಗೊಂಡಿರದ ಯಾವ ಧರ್ಮವೂ ಇಲ್ಲ. ಒಂದು ಧರ್ಮದ ಪ್ರತಿಯೊಂದು ವಿಷಯ, ಸುಳ್ಳು ಮತ್ತು ನಿರರ್ಥಕವಾಗಿದ್ದರೆ, ಅದರಲ್ಲಿ ಮನುಷ್ಯನ ಹೃದಯವನ್ನು ಆಕರ್ಷಿಸಲು ಯಾವುದೇ ಒಳಿತು ಇಲ್ಲದಿದ್ದರೆ ವಿದ್ಯಾವಂತರೂ, ಬುದ್ಧಿಶಾಲಿಗಳೂ ಆಗಿರುವ ಜನರು ಆ ಧರ್ಮವನ್ನು ಅನುಸರಿಸುತ್ತಾ ಇರುವುದರ ಕಾರಣವೇನು? ವಾಸ್ತವಿಕ ವಿಷಯವೇನೆಂದರೆ, ಪ್ರತಿಯೊಂದು ಧರ್ಮದಲ್ಲಿ ಕೆಲವು ಒಳಿತುಗಳು ಇರುತ್ತವೆ. ಆದುದರಿಂದ ಒಂದು ಧರ್ಮ ಸತ್ಯವೆಂದು ಸಾಬೀತುಗೊಳಿಸಿದರೆ ಅದರ ಅರ್ಥ ಉಳಿದ ಯಾವುದೇ ಧರ್ಮದಲ್ಲಿ ಯಾವುದೇ ಒಳಿತು ಇಲ್ಲ ಎಂದಲ್ಲ. ನಾವು ಸಾಬೀತುಗೊಳಿಸಲು ಪ್ರಯತ್ನಿಸುವುದು ಯಾವ ಧರ್ಮದಲ್ಲಿ ಇತರ ಎಲ್ಲ ಧರ್ಮಗಳಿಗಿಂತ ಹೆಚ್ಚಿನ ಒಳಿತುಗಳಿವೆ ಎಂಬುದರ ಬಗ್ಗೆಯಾಗಿದೆ. ತೀರಾ ಒಳಿತಿಲ್ಲದ ಯಾವುದೇ ಧರ್ಮವು ಇರುವುದಿಲ್ಲ. ಪ್ರಾಥಮಿಕ ಹಂತದಲ್ಲಿದ್ದ ಧರ್ಮದಲ್ಲಿ ಕೂಡ ಯಾವುದಾದರೊಂದು ಒಳಿತು ಇರಬಹುದಾಗಿದೆ. ಆಸ್ಟ್ರೇಲಿಯದ ಮೂಲ ನಿವಾಸಿ ಜನರ ಧರ್ಮ ಮತ್ತು ಅಮೇರಿಕದ ಕೆಲವು ಪ್ರದೇಶಗಳ ಮೂಲ ನಿವಾಸಿಗಳ ಧರ್ಮ ಬಹಳ ಪ್ರಾಥಮಿಕ ಹಂತದ ಧರ್ಮ ಎಂದು ಗಣಿಸಲಾಗುತ್ತಿದೆ. ಅವುಗಳಲ್ಲಿಯೂ ಒಳಿತಿರುವುದಾಗಿ ಕಾಣುತ್ತೇವೆ. ಉದಾಹರಣೆಗೆ, ಯಾರ ವಿರುದ್ಧವೂ ಕೆಡುಕನ್ನು ಮಾಡಬೇಡಿರಿ, ಮದ್ಯ ಕುಡಿಯಬೇಡಿರಿ, ಸಹೋದರರನ್ನು ಪ್ರೀತಿಸಿರಿ, ಸೃಷ್ಟಿಗಳೊಂದಿಗೆ ಮೃದುವಾಗಿ ವರ್ತಿಸಿರಿ, ದಾನಧರ್ಮ ನೀಡಿರಿ ಇಂತಹ ಉಪದೇಶಗಳು ಈ ಧರ್ಮಗಳಲ್ಲಿ ಸಹ ಇರುವಾಗ ಯಾವ ಧರ್ಮವನ್ನು ನಾಗರಿಕ ಜನರು ನಂಬುತ್ತಾರೋ ಆ ಧರ್ಮಗಳ ಬಗ್ಗೆ ಅವುಗಳಲ್ಲಿ ಯಾವುದೇ ಒಳಿತಿಲ್ಲ ಎಂದು ಹೇಳುವುದಕ್ಕಿಂತ ದೊಡ್ಡ ಅವಿವೇಕತನ ಬೇರೆ ಏನಿದೆ?

ಆದುದರಿಂದ ಯಾವುದಾದರೂ ಧರ್ಮದ ಸತ್ಯತೆಯ ಬಗ್ಗೆ ಚಿಂತಿಸುವಾಗ ಮೊದಲು ಪ್ರತಿಯೊಂದು ಧರ್ಮದಲ್ಲಿ ಏನಾದರೂ ಒಳಿತಿದೆ ಎಂದು ತಿಳಿದುಕೊಳ್ಳಬೇಕು. ನಾವು ನೋಡಬೇಕಾದುದೇನೆಂದರೆ ಎಲ್ಲ ಧರ್ಮಗಳಿಗಿಂತ ಹೆಚ್ಚಿನ ಒಳಿತು ಯಾವುದರಲ್ಲಿದೆ? ಕೆಲವು ಧರ್ಮಗಳ ಜನರು ಹೇಳುತ್ತಾರೆ: ನಮ್ಮ ಧರ್ಮದಲ್ಲಿ ಬರೆದಿದೆ; ಯಾರ ವಿರುದ್ಧವೂ ದೌರ್ಜನ್ಯ ಮಾಡಬಾರದು ಎಂದು. ಆದುದರಿಂದ ನಮ್ಮ ಧರ್ಮ ಸತ್ಯವಾಗಿದೆ. ನಾವು ಹೇಳುತ್ತೇವೆ: ನೀವು ದೌರ್ಜನ್ಯ ಮಾಡಿರಿ ಎಂದು ಉಪದೇಶಿಸಿದ ಯಾವುದಾದರೂ ಧರ್ಮವಿದ್ದರೆ ಅದನ್ನು ತೋರಿಸಿಕೊಡಿರಿ. ಇದೇ ರೀತಿ ಕೆಲವು ಧರ್ಮಗಳ ಜನರು ಹೇಳುತ್ತಾರೆ: ನಮ್ಮ ಧರ್ಮದಲ್ಲಿ ಬರೆಯಲಾಗಿದೆ– ಜನರನ್ನು ಪ್ರೀತಿಸಿರಿ ಎಂದು. ನಾವು ಹೇಳುತ್ತೇವೆ, ಇದೊಂದು ಒಳ್ಳೆಯ ಉಪದೇಶವೇ ಆಗಿದೆ. ಆದರೆ ಜನರೊಂದಿಗೆ ಶತ್ರುತ್ವದಿಂದ ವರ್ತಿಸಿರಿ ಎಂದು ಉಪದೇಶಿಸುವ ಧರ್ಮ ಯಾವುದಾದರೂ ಇದೆಯೇ? ಹೀಗೆ ಉಪದೇಶಿಸಿದ ಯಾವುದೇ ಧರ್ಮ ಇಲ್ಲದಿರುವಾಗ ನಿಮ್ಮ ಧರ್ಮ ಮಾತ್ರ ಸತ್ಯಧರ್ಮ ಎಂದು ಹೇಳಲು ಹೇಗೆ ತಾನೆ ಸಾಧ್ಯ? ಯಾರಾದರೂ ಹೀಗೆ ಹೇಳಬಹುದು: ದಾನಧರ್ಮ ನೀಡಿರಿ ಎಂದು ನಮ್ಮ ಧರ್ಮದಲ್ಲಿ ಬರೆಯಲಾಗಿದೆ. ಆದುದರಿಂದ ನಮ್ಮ

ಧರ್ಮ ಸತ್ಯವೆಂದು ಸಾಬೀತಾಗುತ್ತದೆ. ನಾವು ಹೀಗೆ ಉತ್ತರ ಹೇಳುತ್ತೇವೆ: ದಾನಧರ್ಮ ಎಂದೂ ಮಾಡಬಾರದು ಎಂದು ಹೇಳುವ ಧರ್ಮ ಯಾವುದಿದೆ? ಎಲ್ಲ ಧರ್ಮಗಳು ಇಂತಹದೇ ಉಪದೇಶ ನೀಡುತ್ತವೆ. ಹೀಗಿರುವಾಗ ನಿಮ್ಮ ಧರ್ಮವನ್ನು ಮಾತ್ರ ಸತ್ಯಧರ್ಮ ಎಂದು ನಂಬುವುದು ಏಕೆ?

## ಯಾವುದಾದರೂ ಧರ್ಮದ ಸತ್ಯತೆ ಸಾಬೀತಾಗುವುದು ಹೇಗೆ?

ಒಂದು ಧರ್ಮ ಸತ್ಯ ಧರ್ಮವೆಂದು ಹೇಳುವುದು ಅದರಲ್ಲಿ ಕೆಲವು ನೈತಿಕ ಉಪದೇಶಗಳು ಇರುವುದರ ಕಾರಣದಿಂದಲ್ಲ. ಇದಕ್ಕೆ ಸಂಬಂಧಿಸಿ ಅಂದಾಜು ಎಲ್ಲ ಧರ್ಮಗಳು ಒಂದೇ ರೀತಿ ಇವೆ. ಒಂದು ಧರ್ಮ ಸತ್ಯವೆಂದು ಸಾಬೀತಾಗಲು ಸಾಧ್ಯವಾಗುವುದು ಆ ಧರ್ಮದಲ್ಲಿ ದೇವನ ಕಡೆಗೆ ಮನುಷ್ಯನು ತಲಪಲು ಸಾಧ್ಯವಾಗುವಂತಹ ಉಪದೇಶಗಳಿರಬೇಕು ಮತ್ತು ದೇವನ ಪ್ರೀತಿ ಹುಟ್ಟುವಂತಿರಬೇಕು. ಹಾಗೂ ಅದರ ಉಪದೇಶಗಳು ವಿವರಣೆಗಳಲ್ಲೂ ಸರಿಯಾದುದಾಗಿರಬೇಕು. ಕೆಲವು ಧರ್ಮಗಳು ಹೇಗಿವೆ ಎಂದರೆ ಸೈದ್ಧಾಂತಿಕವಾಗಿ ಅವು ಒಳ್ಳೆಯ ಉಪದೇಶಗಳ ಬಗ್ಗೆ ಐಕ್ಯಮತ್ಯ ಹೊಂದಿರುತ್ತವೆ. ಆದರೆ ಅವುಗಳ ವಿವರಣೆಯಲ್ಲಿ ಬಹಳ ವ್ಯತ್ಯಾಸ ಇರುತ್ತದೆ. ಅಂತಹ ಧರ್ಮಗಳ ಉಪದೇಶಗಳು ಸರಿಯಾದುದಾಗಿ ಸಾಬೀತಾಗಲಾರದು.

## ಇಸ್ಲಾಮ್ ಧರ್ಮ ಅಲ್ಲಾಹನೊಂದಿಗೆ ದಾಸನ ಸಂಬಂಧ ಸ್ಥಾಪಿಸುತ್ತಿದೆ

ಈ ವಿಷಯವನ್ನು ಗಮನದಲ್ಲಿರಿಸಿ ನಾವು ನೋಡುತ್ತೇವೆ – ಇಸ್ಲಾಮ್ ಧರ್ಮ ಅಲ್ಲಾಹನೊಂದಿಗೆ ದಾಸನ ಸಂಬಂಧವನ್ನು ಜೋಡಿಸುತ್ತದೆಯೋ ಇಲ್ಲವೋ? ಅದು ಈ ಸಂಬಂಧವನ್ನು ಜೋಡಿಸುವುದಾದರೆ ಇಸ್ಲಾಮ್ ಧರ್ಮದ ಮೂಲಕವೇ ಮನುಷ್ಯನು ಮೋಕ್ಷ ಗಳಿಸಲು ಸಾಧ್ಯವಾಗುತ್ತದೆ ಎಂದು ನಂಬುವುದಕ್ಕೆ ಯಾವುದೇ ಸಂಶಯವಿರುವುದಿಲ್ಲ. ಇದರ ಬಗ್ಗೆ ಪವಿತ್ರ ಖುರ್‌ಆನ್ ಪ್ರಕಟಿಸುವುದೇನೆಂದರೆ, ನನ್ನ ಉಪದೇಶಗಳನ್ನು ಅನುಷ್ಠಾನಕ್ಕೆ ತರುವವನನ್ನು ಅಲ್ಲಾಹನ ಬಗ್ಗೆ ಪ್ರೀತಿಯಲ್ಲಿ ಎಷ್ಟು ವರ್ಧಿಸುವಂತೆ ಮಾಡುವೆನೆಂದರೆ ಬೇರೆ ಯಾವುದಾದರೂ ಮಾರ್ಗದ ಮೂಲಕ ಇಷ್ಟು ಪ್ರೀತಿ ಗಳಿಸಲು ಸಾಧ್ಯವೇ ಇಲ್ಲ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**ಅಲ್ಲಾಹು ನಝ್ಝಲ ಅಹ್‌ಸನಲ್ ಹದೀಸಿ ಕಿತಾಬನ್ ಮುತಶಾಬಿಹನ್ ಮಸಾನಿಯ. ತಖ್‌ಶಯಿರ್ರು ಮಿನ್‌ಹು ಜುಲೂದುಲ್ಲಧೀನ ಯಖ್‌ಶೌನ ರಬ್ಬಹುಮ್ ಸುಮ್ಮತಲೀನು ಜುನೂದುಹುಮ್ ವ ಖುಲೂಬುಹುಮ್ ಇಲಾ ಧಿಕ್ರಿಲ್ಲಾಹ್. ಧಾಲಿಕ ಹುದಲ್ಲಾಹಿ ಯುಹ್‌ದೀ ಬಿಹೀ ಮನ್ ಯಶಾಉ ವ ಮನ್‌ಯುದ್ಲಿಲಿಲ್ಲಾಹು ಫಮಾ ಲಹೂ ಮಿನ್ ಹಾದಿನ್.**

"ಅಲ್ಲಾಹನು ಅತ್ಯುತ್ತಮವಾದ ಸಂದೇಶವನ್ನು ಗ್ರಂಥ ರೂಪದಲ್ಲಿ ಅವತೀರ್ಣ ಗೊಳಿಸಿರುವನು. (ಅದರ ವಚನಗಳು) ಹೋಲಿಕೆ ಇರುವಂಥವೂ (ವಿವಿಧ ರೀತಿಯಲ್ಲಿ) ಪುನರಾವರ್ತಿಸಲ್ಪಡುವಂಥವೂ ಆಗಿವೆ. ತಮ್ಮ ಪ್ರಭುವಿನ ಭಯವುಳ್ಳವರ ಚರ್ಮಗಳಿಗೆ ಆ ಮೂಲಕ ರೋಮಾಂಚನವುಂಟಾಗುತ್ತದೆ. ಅನಂತರ ಅವರ ಚರ್ಮಗಳು ಮತ್ತು ಹೃದಯಗಳು ಮೃದುವಾಗಿ ಅಲ್ಲಾಹನ ಸ್ಮರಣೆಯ ಕಡೆಗೆ ವಾಲುತ್ತವೆ. ಅದು ಅಲ್ಲಾಹನ ಮಾರ್ಗದರ್ಶನವಾಗಿದೆ. ಅದರ ಮೂಲಕ ತಾನಿಚ್ಛಿಸುವವನಿಗೆ ಅವನು ಸತ್ಪಥ ದರ್ಶನ ಮಾಡುತ್ತಾನೆ. ಅಲ್ಲಾಹನು ಯಾರ ಬಗ್ಗೆ ದಾರಿ ತಪ್ಪಿದವನೆಂದು ತೀರ್ಮಾನಿಸುತ್ತಾನೋ ಅವನಿಗೆ ಬೇರೆ ಮಾರ್ಗದರ್ಶಕನಿಲ್ಲ." (39:24).

ಈ ವಚನದ ವ್ಯಾಖ್ಯಾನ ರೂಪದ ಅರ್ಥ ಹೀಗೆ: ನಾವು ಖುರ್‌ಆನ್ ಅವತೀರ್ಣಗೊಳಿಸಿದ್ದೇವೆ. ಅದರಲ್ಲಿ ಅತ್ಯಂತ ಉತ್ತಮ ಉಪದೇಶಗಳಿವೆ. ಇದರಲ್ಲಿ ಮಾತ್ರ ಉತ್ತಮ ಉಪದೇಶಗಳಿವೆ; ಬೇರೆ ಗ್ರಂಥಗಳಲ್ಲಿ ಕೆಟ್ಟ ಉಪದೇಶಗಳಿವೆ ಎಂದು ಇದರ ಅರ್ಥವಲ್ಲ. ಈ ಗ್ರಂಥದಲ್ಲಿ ಎಲ್ಲವುಗಳಿಗಿಂತಲೂ ಉತ್ತಮವಾದ ಮತ್ತು ಉನ್ನತವಾದ ಉಪದೇಶಗಳಿವೆ. ಇತರ ಧರ್ಮಗಳ ಗ್ರಂಥಗಳಲ್ಲಿಯೂ ಉತ್ತಮ ಉಪದೇಶಗಳು ಇವೆ ಎನ್ನುವುದನ್ನು ಅಲ್ಲಾಹನು ನಿರಾಕರಿಸಿಲ್ಲ. ಇದರಲ್ಲಿ ಅಡಕವಾದ ಉಪದೇಶಗಳು ಅತ್ಯುತ್ತಮವಾಗಿವೆ ಎಂದು ಅಲ್ಲಾಹನು ಹೇಳಿದ್ದಾನೆ. ಎಂದರೆ ಈ ಗ್ರಂಥದಲ್ಲಿರುವ ಯಾವುದೇ ವಿಷಯ ಬೇರೊಂದು ವಿಷಯಕ್ಕೆ ವಿರುದ್ಧವಾಗಿಲ್ಲ. ಇದರಲ್ಲಿ ಅಡಕವಾದ ಪ್ರತಿಯೊಂದು ವಿಷಯ ಒಂದು ಇನ್ನೊಂದನ್ನು ಸತ್ಯವೆಂದು ಸಾಬೀತುಗೊಳಿಸುತ್ತದೆ ಮತ್ತು ಬೆಂಬಲಿಸುತ್ತದೆ. ಈ ವಿಷಯಗಳ ವಿವರಣೆಗಳಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಅವು ಎಂತಹ ಮೂಲದಲ್ಲಿ ಸ್ಥಾಪಿತವಾಗಿವೆ ಎಂದರೆ ಅದರಿಂದ ಅವು ಅತ್ತಿತ್ತ ಚಲಿಸಲಾರವು. ಅವು ಎಂತಹ ಉಪದೇಶಗಳೆಂದರೆ ಅವು ಮಸಾನಿ ಎಂದರೆ ಪದೇ ಪದೇ ಪುನರಾವರ್ತಿಸಲ್ಪಡುವವುಗಳಾಗಿವೆ. ಅವುಗಳಲ್ಲಿ ಎಂತಹ ಆಧ್ಯಾತ್ಮಿಕ ಶಕ್ತಿ ಇದೆ ಎಂದರೆ ಮನುಷ್ಯನು ಪದೇ ಪದೇ ಓದಲು ನಿರ್ಬಂಧಿತನಾಗುತ್ತಾನೆ. ಅವುಗಳಲ್ಲಿ ಎಂತಹ ಆಕರ್ಷಣೆ ಇದೆ ಎಂದರೆ ಅವುಗಳನ್ನು ಆಲಿಸಿದವನನ್ನು ತನ್ನ ಕಡೆಗೆ ಸೆಳೆಯುತ್ತವೆ – ಒಬ್ಬನು ತನಗೆ ಪ್ರಿಯಕರವಾದ ಶಬ್ದವನ್ನು ಒಮ್ಮೆ ಆಲಿಸಿದಾಗ ಪುನಃ ಆಲಿಸುತ್ತಾನೆ ಮತ್ತು ಇನ್ನೊಮ್ಮೆ ಆಲಿಸಲು ಬಯಸುವ ಹಾಗೆ. ಇದೇ ರೀತಿ ಪವಿತ್ರ ಖುರ್‌ಆನಿನ ಶಬ್ದವನ್ನು ಒಮ್ಮೆ ಆಲಿಸಿದವನು ಪುನಃ ಆಲಿಸುತ್ತಾನೆ ಮತ್ತು ಇನ್ನೊಮ್ಮೆ ಆಲಿಸಬೇಕೆಂದು ಇಚ್ಛಿಸುತ್ತಾನೆ. ಪವಿತ್ರ ಖುರ್‌ಆನಿನ ಉಪದೇಶಗಳು ಪ್ರತಿಯೊಂದು ಕಾಲಘಟ್ಟಕ್ಕೂ ಪ್ರತಿಯೊಂದು ಶತಮಾನಕ್ಕೂ ಅನುಯೋಜ್ಯವಾದುದರಿಂದ ಅವುಗಳನ್ನು ಪ್ರತಿಯೊಂದು ಕಾಲಘಟ್ಟದಲ್ಲಿ ಪುನರಾವರ್ತಿಸುವುದು ಆವಶ್ಯಕವಾಗಿದೆ. ಅದರ ಉಪದೇಶಗಳು ತಾಜಾ ಆಗಿರುತ್ತವೆ. ಅವು ಅಳಿಸಿ ಬಿಡಲ್ಪಡುವುದಿಲ್ಲ. ಪವಿತ್ರ ಖುರ್‌ಆನಿನ ಉಪದೇಶಗಳನ್ನು ಆಲಿಸುವಾಗ ರೋಮಾಂಚನವಾಗುತ್ತದೆ. ಏಕೆಂದರೆ ಅಲ್ಲಾಹನ ಪ್ರತಾಪ, ಅವನ ಶಕ್ತಿಸಾಮರ್ಥ್ಯಗಳು, ಅವನ ವೈಭವಗಳ ವಿವರಣೆ ಎಷ್ಟು ಸ್ಪಷ್ಟವಾಗಿವೆ ಎಂದರೆ ಆ ವಿವರಣೆಗಳನ್ನು ಓದುವವನು ಧರ್ಮದಿಂದ ಎಷ್ಟು ದೂರವಿದ್ದರೂ ಅವನು ಅಲ್ಲಾಹನ ಬಗ್ಗೆ ಭಯಭೀತನಾಗಿ ಅವನಿಗೆ ರೋಮಾಂಚನವಾಗುತ್ತದೆ. ಭಯಪಡಿಸುವ ವಸ್ತುಗಳಿಂದ ಭಯ ಉಂಟಾಗುತ್ತದೆ. ಆದರೆ ಅಲ್ಲಾಹನ ಮಹಿಮೆ ತಿಳಿಯುವಾಗ

ಕೇವಲ ಭಯ ಮಾತ್ರ ಉಂಟಾಗುವುದಿಲ್ಲ; ಅದರ ಜೊತೆ ಪ್ರೀತಿ ಸಹ ಉಂಟಾಗುತ್ತದೆ. ಭಯ ಎರಡು ವಿಧಗಳ ವಸ್ತುಗಳಿಂದ ಉದ್ಭವಿಸುತ್ತದೆ. ಒಂದು, ಭಯವುಂಟುಮಾಡುವ ವಸ್ತುಗಳಿಂದ, ಎರಡನೆಯದು, ವೈಭವಶಾಲಿ ವಸ್ತುಗಳಿಂದ. ಭಯವುಂಟು ಮಾಡುವ ವಸ್ತುಗಳಿಂದ ಕೇವಲ ಭಯ ಉಂಟಾಗುತ್ತದೆ. ಆದರೆ ವೈಭವಶಾಲಿ ವಸ್ತುಗಳಿಂದ ಭಯ ಮಾತ್ರವಲ್ಲ ಅದರ ವೈಭವದ ಕಾರಣ ಪ್ರೀತಿ ಸಹ ಉಂಟಾಗುತ್ತದೆ. ಅಂತಹ ಜನರ ಚರ್ಮಗಳು ಪ್ರೀತಿಯಿಂದ ಮೃದುವಾಗುತ್ತವೆ ಎಂದು ಪವಿತ್ರ ಖುರ್‌ಆನ್ ಹೇಳಿದೆ. ಪವಿತ್ರ ಖುರ್‌ಆನ್ ವಾದಿಸುವುದೇನೆಂದರೆ, ಅದರಲ್ಲಿ ಎಲ್ಲದಕ್ಕಿಂತಲೂ ಉತ್ತಮ ಉಪದೇಶಗಳಿವೆ. ಯಾವ ಧರ್ಮ ಎಲ್ಲದಕ್ಕಿಂತ ಉತ್ತಮ ಮಟ್ಟದ ಉಪದೇಶ ನೀಡುತ್ತದೆಯೋ ಅದು ಸತ್ಯವಾದ ಧರ್ಮವೆಂದು ನಾನು ವಿವರಿಸಿರುವೆನು. ಬೇರೆ ಧರ್ಮಗಳಲ್ಲಿ ಯಾವುದೇ ಸತ್ಯವಿಲ್ಲ ಎಂದು ಹೇಳುವ ಧರ್ಮ ಉತ್ತಮವಾಗಿರಲಾರದು. ಯಾವ ಧರ್ಮದ ಉಪದೇಶಗಳನ್ನು ಅನುಸರಿಸಿ ಮನುಷ್ಯನು ಅಲ್ಲಾಹನ ಸಾಮೀಪ್ಯ ಗಳಿಸಬಲ್ಲನೋ ಆ ಧರ್ಮ ಸತ್ಯಧರ್ಮವಾಗಿರುತ್ತದೆ. ಪವಿತ್ರ ಖುರ್‌ಆನ್ ವಾದಿಸುವುದೇನೆಂದರೆ, "ನನ್ನಲ್ಲಿ ಎಂತಹ ಮಾರ್ಗವಿದೆ ಎಂದರೆ ಅದರಲ್ಲಿ ಚಲಿಸಿ ಮನುಷ್ಯನು ದೇವನನ್ನು ತಲಪಬಲ್ಲನು."

ಪವಿತ್ರ ಖುರ್‌ಆನಿನ ಈ ವಾದವು ಸತ್ಯವೋ ಎಂದು ನಾವು ನೋಡುವ. ಪವಿತ್ರ ಖುರ್‌ಆನ್ ಅಲ್ಲಾಹನೊಂದಿಗೆ ಮನುಷ್ಯನ ಸಂಬಂಧ ಸ್ಥಾಪಿಸುತ್ತದೆಯೋ ಎಂದು ಪರಿಶೀಲಿಸುವ. ಆದರೆ ಈ ಪ್ರಶ್ನೆ ಬಗ್ಗೆ ಪರಿಶೀಲಿಸುವ ಮೊದಲು ನೋಡಬೇಕಾದುದು ಏನೆಂದರೆ ಅಲ್ಲಾಹನೊಂದಿಗೆ ಮನುಷ್ಯನ ಸಂಬಂಧ ಸ್ಥಾಪಿತವಾಗುವುದು ಹೇಗೆ? ಒಂದು ವಸ್ತು ಒಳ್ಳೆಯದೆಂದು ವೈಜ್ಞಾನಿಕವಾಗಿ ಸಾಬೀತುಗೊಳಿಸಲು ಅದಕ್ಕೆ ಸೂಚಿಸಲಾದ ಪ್ರಾಯೋಗಿಕ ರೀತಿಗಳನ್ನು ಪರಿಶೀಲಿಸಬೇಕಾಗಿದೆ. ಆ ಪ್ರಾಯೋಗಿಕ ಪರೀಕ್ಷಣ ರೀತಿಗಳು ಸರಿಯಾದವುಗಳಾಗಿದ್ದರೆ ಒಂದು ಧರ್ಮವನ್ನು ಸರಿ ಎಂದು ನಂಬುವುದಾಗಿ ವಾದಿಸುವವರ ಸ್ಥಿತಿ ಹೇಗೆಯೇ ಇರಲಿ ಆ ಧರ್ಮದ ವಿರುದ್ಧ ಯಾವುದೇ ಆಕ್ಷೇಪ ಮಾಡಲಾಗದು. ನಾನು ಹೇಳುವುದೇನೆಂದರೆ ಹೀಗೆ ನಂಬುವುದಾಗಿ ವಾದಿಸುವ ಜನರು ಆ ಪ್ರಾಯೋಗಿಕ ವಿಧಾನಗಳನ್ನು ಅನುಸರಿಸಿಯೇ ಇಲ್ಲ. ಉದಾಹರಣೆಗೆ, ಒಬ್ಬನು ಜೈಲಿಗೆ ಸಂದರ್ಶನ ನೀಡಿದಾಗ ಅಲ್ಲಿ ಹಿಂದುಗಳನ್ನು, ಸಿಖ್ಖರನ್ನು, ಕ್ರೈಸ್ತರನ್ನು ಮತ್ತು ಮುಸ್ಲಿಮರನ್ನೂ ಕೈದಿಗಳಾಗಿ ಕಂಡಾಗ, "ಅವರೆಲ್ಲರ ಧರ್ಮ ಸುಳ್ಳು ಧರ್ಮವಾಗಿವೆ. ಅವರು ಸತ್ಯ ಧರ್ಮವಲಂಬಿಗಳಾಗಿದ್ದರೆ ಜೈಲಿನಲ್ಲಿ ಬಿದ್ದಿರುತ್ತಿರಲಿಲ್ಲ" ಎಂದು ಹೇಳಿದರೆ ಅದು ಸರಿಯಾದ ಮಾತಾಗಲಾರದು. ಏಕೆಂದರೆ ಆ ಜನರು ತಂತಮ್ಮ ಧರ್ಮಗಳ ವಿರುದ್ಧ ವರ್ತಿಸಿದ್ದರು. ಆ ಕಾರಣದಿಂದ ಜೈಲಿಗೆ ತಳ್ಳಲ್ಪಟ್ಟರು. ಅವರು ತಂತಮ್ಮ ಧರ್ಮಗಳ ಉಪದೇಶಗಳನ್ನು ಅನುಸರಿಸುತ್ತಿದ್ದರೆ ಹೀಗೆ ಆಗುತ್ತಿರಲಿಲ್ಲ. ಆದುದರಿಂದ ಒಂದು ಧರ್ಮವು ಸತ್ಯವೋ ಎಂದು ತಿಳಿಯಲು ಆ ಧರ್ಮ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವ ತತ್ವಗಳನ್ನು ವಿವರಿಸಿದೆಯೋ ಅಥವಾ ಇಲ್ಲವೋ ಎಂದು ನೋಡಬೇಕು. ಒಂದು ಧರ್ಮ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವ ವಿಧಾನಗಳನ್ನು ವಿವರಿಸಿದ್ದರೆ, ಆದರೆ ಆ ಧರ್ಮದ ಅನುಯಾಯಿಗಳಲ್ಲಿ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸದ ಜನರು ಕಂಡು ಬಂದರೆ ಹೇಳಬೇಕಾದುದೇನೆಂದರೆ, ಅದು ಆ ಜನರು ಸ್ವತಃ ಮಾಡಿದ ತಪ್ಪಾಗಿದೆ. ಅವರ ಧರ್ಮದ ನ್ಯೂನತೆಯ ಕಾರಣ ಹಾಗೆ ಸಂಭವಿಸಿಲ್ಲ. ಉದಾಹರಣೆಗೆ, ಕ್ವಿನೀನ್ ಜ್ವರಕ್ಕೆ ಉತ್ತಮ ಔಷಧಿಯಾಗಿದೆ. ಆದರೆ ಒಬ್ಬನು ಕ್ವಿನೀನನ್ನು ಮುಷ್ಟಿಯಲ್ಲಿ ಹಿಡಿದುಕೊಂಡು ಅಥವಾ ಜೇಬಿನಲ್ಲಿ ಹಾಕಿಕೊಂಡು ಕ್ವಿನೀನ್‌ನಿಂದ ನನಗೆ ಯಾವ ಪ್ರಯೋಜನವೂ ಸಿಗಲಿಲ್ಲ ಎಂದು ಹೇಳಿದರೆ ಅವನೊಂದಿಗೆ ಹೀಗೆ ಹೇಳಲಾಗುವುದು: ಕ್ವಿನೀನ್ ತಿಂದರೆ ಪ್ರಯೋಜನವಾಗುವುದೇ ಹೊರತು ಕೈಯಲ್ಲಿ ಇಟ್ಟುಕೊಳ್ಳುವುದರಿಂದ ಅಥವಾ ಜೇಬಿನಲ್ಲಿ ಇರಿಸುವುದರಿಂದ ಲಾಭ ಸಿಗಲಾರದು. ಇದೇ ರೀತಿ ಧರ್ಮದ ಪ್ರಯೋಜನ ಸಿಗುವುದು ಅದರ ತತ್ವಗಳನ್ನು ಅನುಷ್ಠಾನ ಮಾಡುವುದರಿಂದಾಗಿದೆ. ಕೇವಲ ಬಾಯಿಯಲ್ಲಿ ನಂಬುತ್ತೇನೆಂದು ವಾದಿಸುವುದರಿಂದ ಲಾಭ ಸಿಗಲಾರದು.

◆

# LOVE FOR ALL

# HATRED FOR NONE

# LET'S MAKE IT HEAVEN

# ಕೆಲವು ಸಂಶಯಗಳ ನಿವಾರಣೆ

ನಾನು ಓದುಗರೊಂದಿಗೆ ಅಪೇಕ್ಷಿಸುತ್ತೇನೆ. ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ನೀಡಿದ ಸಾಕ್ಷ್ಯಾಧಾರಗಳ ಬಗ್ಗೆ ಚೆನ್ನಾಗಿ ಯೋಚಿಸಿರಿ. ಹಝ್ರತ್ ಈಸಾ ಮಸೀಹರು(ಅ) ಆಕಾಶಕ್ಕೆ ಜೀವಂತವಾಗಿ ಎತ್ತಲ್ಪಟ್ಟಿಲ್ಲ ಎಂದೂ ಎಲ್ಲ ಸಾತ್ವಿಕರು ಅಲ್ಲಾಹನ ಸನ್ನಿಧಿಗೆ ಯಾವ ರೀತಿ ಎತ್ತಲ್ಪಡುತ್ತಾರೋ ಅದೇ ರೀತಿ ಹಝ್ರತ್ ಈಸಾ ಮಸೀಹರು(ಅ) ಎತ್ತಲ್ಪಟ್ಟರು ಎಂದೂ ಅವರು ಮೃತರಾಗಿರುವರು ಎಂದೂ ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಪ್ರಬಲವಾದ ಸಾಕ್ಷ್ಯ ನೀಡುತ್ತವೆ. ಮೃತನಾದವನು ಪುನಃ ಜೀವಂತನಾಗಿ ಲೋಕಕ್ಕೆ ಬರುವುದನ್ನು ಅಲ್ಲಾಹನ ನಡೆವಳಿಕೆ ಅನುಮತಿಸುವುದಿಲ್ಲ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಎಲ್ಲ ಖಲೀಫರು ಮುಸ್ಲಿಮ್ ಸಮುದಾಯದಿಂದಲೇ ನೇಮಿಸಲ್ಪಡುವರು ಎಂದು ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಸ್ಪಷ್ಟವಾಗಿ ಹೇಳುತ್ತವೆ. ವಾಗ್ದತ್ತ ಮಸೀಹರು ಮುಸ್ಲಿಮರಿಂದಲೇ ಆಗಮಿಸುವರೆಂದು "ಇಮಾಮುಕುಮ್ ಮಿನ್‌ಕುಮ್" (ನಿಮ್ಮ ಇಮಾಮ್ ನಿಮ್ಮಿಂದಲೇ) ಎಂಬ ಹದೀಸಿನ ಪದಗಳು ಸೂಚಿಸುತ್ತವೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಚಿತ್ರಿಸಿದ ಇಬ್ಬರು ಬೇರೆ ಬೇರೆ ಮಸೀಹರ ಚಿತ್ರಗಳನ್ನು ಸಹ ನಿಮ್ಮ ಮುಂದೆ ಇರಿಸಿದ್ದೇವೆ. ಇದಕ್ಕಿಂತ ಹೆಚ್ಚಿಗೆ ನಾವೇನು ಮಾಡಲು ಸಾಧ್ಯ ? ಈ ವೈಭವಶಾಲಿ ಸಾಕ್ಷ್ಯಾಧಾರಗಳು ಇರುವಾಗ ಹಝ್ರತ್ ಈಸಾ ಮಸೀಹ್ ಆಕಾಶಕ್ಕೆ ಹೋಗಿರುವರೆಂದೂ ಯಾವುದೋ ಕಾಲಘಟ್ಟದಲ್ಲಿ ಪುನಃ ಲೋಕಕ್ಕೆ ಇಳಿದು ಬರುವರೆಂದೂ ಒಂದು ಕ್ಷಣಕಾಲ ಕೂಡ ಹೃದಯದಲ್ಲಿ ಓದುಗರು ಯೋಚಿಸುವರೆಂದು ನಾನು ಭಾವಿಸುವೆನಾದರೆ ಬುದ್ಧಿಶಾಲಿಗಳಾದ ಓದುಗರ ಮೇಲೆ ನಾನು ದೌರ್ಜನ್ಯ ಮಾಡಿದ ಹಾಗೆ ಆಗುವುದು. ಆದರೆ ಹಝ್ರತ್ ಈಸಾ ಮಸೀಹರು(ಅ) ಮೃತರಾಗಿರುವರೆಂದು ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ಹಝ್ರತ್ ಪೈಗಂಬರರ(ಸ) ಶಿಷ್ಯರು ಸಾಕ್ಷ್ಯ ನೀಡುತ್ತಾ ಇರುವಾಗ ಮುಸ್ಲಿಮ್ ಸಮುದಾಯ ಇಷ್ಟು ಶತಮಾನಗಳ ಕಾಲ ಹಝ್ರತ್ ಈಸಾ ಮಸೀಹ್(ಅ) ಜೀವಂತವಾಗಿರುವರೆಂದು ಏಕೆ ನಂಬುತ್ತಾ ಇತ್ತು ಎಂಬುದರ ಬಗ್ಗೆ ಸಹಜವಾದ ಚಿಂತೆ ಓದುಗರ ಹೃದಯಗಳಲ್ಲಿ ಉಂಟಾಗಬಹುದಾಗಿದೆ.

## ಹಝ್ರತ್ ಈಸಾ ಮಸೀಹರು ಜೀವಿಸಿರುವರೆಂಬುದರ ಬಗ್ಗೆ ಮುಸ್ಲಿಮ್ ಸಮುದಾಯ ಎಂದೂ ಒಮ್ಮತವನ್ನು ಹೊಂದಲಿಲ್ಲ

ಮುಸ್ಲಿಮರೆಲ್ಲರೂ ಹಝ್ರತ್ ಈಸಾ ಮಸೀಹ್(ಅ) ಜೀವಿಸಿರುವರೆಂಬ ಬಗ್ಗೆ ಒಮ್ಮತ ಹೊಂದಿದ್ದರು ಎಂದು ಹೇಳುವುದು ತಪ್ಪು. ಹಿಂದಿನ ಕಾಲದ ಅನೇಕ ಸಾತ್ವಿಕರಾದ ಹಿರಿಯರು ಹಝ್ರತ್ ಈಸಾ ಮಸೀಹರು(ಅ) ಮೃತರಾಗಿರುವರೆಂದು ಹೇಳಿರುವರು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ನಿಧನ ಹೊಂದಿದ ನಂತರ ಮುಸ್ಲಿಮರ ಪ್ರಥಮ ಇಜ್‌ಮಾಅ್ (ಒಮ್ಮತಾಭಿಪ್ರಾಯ) ಇದೇ ವಿಷಯಕ್ಕೆ ಸಂಬಂಧಿಸಿಯಾಗಿತ್ತೆಂದು ಇದರ ಮೊದಲು ವಿವರಿಸಿದುದನ್ನು ನಾನು ಓದುಗರ ನೆನಪಿಗೆ ತರಲು ಬಯಸುತ್ತೇನೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹರಿಗಿಂತ(ಸ) ಮೊದಲು ಆಗಮಿಸಿದ ಎಲ್ಲ ಪ್ರವಾದಿಗಳು ಮೃತರಾಗಿರುವರು ಎಂದು ಆಗ ಮುಸ್ಲಿಮರು ಒಮ್ಮತಾಭಿಪ್ರಾಯ ಸೂಚಿಸಿದ್ದರು. ಹಝ್ರತ್ ಇಬ್ನು ಅಬ್ಬಾಸ್(ರ) ಮುತವಫ್ಫೀಕ ಪದಕ್ಕೆ ಮುಮೀತುಕ (ನಿನ್ನನ್ನು ಮೃತಪಡಿಸುವೆನು) ಎಂದು ಅರ್ಥ ಹೇಳಿ ತನ್ನ ನಂಬಿಕೆಯನ್ನು ಪ್ರಕಟಿಸಿರುವರು. ಇಮಾಮ್ ಬುಖಾರಿ(ರಹ್) ಹಝ್ರತ್ ಇಬ್ನು ಅಬ್ಬಾಸರ ಹೇಳಿಕೆಯನ್ನು ದಾಖಲಿಸಿ ಅದಕ್ಕೆ ಅನುಮೋದನೆ ಸೂಚಿಸಿರುವರು. ಮಜ್‌ಮಉಲ್ ಬಿಹಾರ್ ಎಂಬ ಗ್ರಂಥದಲ್ಲಿ ಹೀಗೆ ಬರೆದಿದೆ:

**ವಲ್ ಅಕ್‌ಸರು ಅನ್ನ ಈಸಾ ಅಲೈಹಿಸ್ಸಲಾಮು ಲಮ್ ಯಮುತ್ ವ ಖಾಲ ಮಾಲಿಕುನ್ ಮಾತ.**

"ಬಹತೇಕ ಜನರು ಈಸಾ ಅಲೈಹಿಸ್ಸಲಾಮ್ ಮೃತರಾಗಿಲ್ಲ ಎಂದು ಹೇಳುತ್ತಾರೆ. ಆದರೆ ಇಮಾಮ್ ಮಾಲಿಕ್, ಹಝ್ರತ್ ಈಸಾ ಅಲೈಹಿಸ್ಸಲಾಮ್ ಮೃತರಾಗಿರುವರೆಂದು ಹೇಳುತ್ತಾರೆ."

ಇಮಾಮ್ ಇಬ್ನು ಹಝ್ಮ್(ರಹ್) ಬಗ್ಗೆ ಹೀಗೆ ಬರೆಯಲಾಗಿದೆ:

**ವ ತಮಸ್ಸಕಬ್ನು ಹಝ್ಮ ಬಿಝಾಹಿರಿಲ್ ಆಯತಿ ವ ಖಾಲ ಬಿಮೌತಿಹೀ**

"ಇಬ್ನು ಹಝ್ಮ್ ಪವಿತ್ರ ಖುರ್‌ಆನ್ ವಚನದ ಬಾಹ್ಯಾರ್ಥವನ್ನು ತೆಗೆದುಕೊಂಡು ಈಸಾ ಅಲೈಹಿಸ್ಸಲಾಮ್ ಮೃತರಾದರೆಂದು ಹೇಳಿರುವರು."

ಹಝ್ರತ್ ಇಬ್ನು ಅರಬಿ(ರಹ್) ಹೀಗೆ ಹೇಳಿರುವರು: "ಹಝ್ರತ್ ಈಸಾ ಮಸೀಹರ(ಅ) ಪುನರಾಗಮನ ಪ್ರತೀಕಾತ್ಮಕವಾಗಿರುವುದು. ಎಂದರೆ ಅವರು ಸ್ವತಃ ಆಗಮಿಸಲಾರರು. ಅವರಿಗೆ ಹೋಲಿಕೆ ಹೊಂದಿದವರು ಆಗಮಿಸುವರು.[*1]

ಮೇಲಿನ ಉಲ್ಲೇಖಗಳಿಂದ ಸ್ಪಷ್ಟವಾಗುವುದೇನೆಂದರೆ, ಹಝ್ರತ್ ಈಸಾ(ಅ) ಜೀವಿಸಿರುವರು ಎಂಬ ತಪ್ಪು ವಿಶ್ವಾಸದ ಕುರಿತು ಒಮ್ಮತ ಎಂದೂ ಇರಲಿಲ್ಲ. ತದ್ವಿರುದ್ಧವಾಗಿ, ಮುಸ್ಲಿಮ್ ಸಮುದಾಯ ಯಾವುದಾದರೂ ವಿಷಯದಲ್ಲಿ ಒಮ್ಮತ ಹೊಂದಿದ್ದರೆ ಅದು ಹಝ್ರತ್ ಈಸಾ ಮಸೀಹರು ಮೃತರಾಗಿರುವರು ಎನ್ನುವುದರ ಬಗ್ಗೆ ಮಾತ್ರವಾಗಿತ್ತು. ಹಝ್ರತ್ ಈಸಾ ಮಸೀಹ್ ನಿಧನ ಹೊಂದಿದ ಬಗ್ಗೆ ಹಝ್ರತ್ ಪೈಗಂಬರರ(ಸ) ಶಿಷ್ಯರು ಒಮ್ಮತಾಭಿಪ್ರಾಯ

[*1] ನಾವು ಕೇವಲ ಹಿರಿಯ ವಿದ್ವಾಂಸರ ಹೇಳಿಕೆಗಳನ್ನು ಮಾತ್ರ ನೀಡಿದ್ದೇವೆ. ಅವರನ್ನು ಅನುಸರಿಸಿದವರು ಅವರ ಹೇಳಿಕೆಗಳನ್ನು ಬೆಂಬಲಿಸುತ್ತಿದ್ದರೆಂದು ಗಣಿಸಲಾಗುವುದು.

ಹೊಂದಿದ್ದರು. ಅನಂತರ ವಿವಿಧ ದೇಶಗಳಲ್ಲಿ ಮುಸ್ಲಿಮರ ಜನ ಸಂಖ್ಯೆ ವರ್ಧಿಸಿತು; ವಿವಿಧ ಕಡೆಗಳಲ್ಲಿ ಹಬ್ಬಿತು. ಆದುದರಿಂದ ಯಾವುದಾದರೂ ವಿಷಯದ ಕುರಿತು ಮುಸ್ಲಿಮರು ಒಮ್ಮತ ಹೊಂದಿದ್ದರು ಎಂದು ವಾದಿಸುವುದು ಸುಲಭವಾಗಿದೆ. ಆದರೆ ಅದನ್ನು ಸಾಬೀತುಗೊಳಿಸುವುದು ಅಸಾಧ್ಯವಾದುದಾಗಿದೆ. ಇದೇ ಕಾರಣದಿಂದ ಇಮಾಮ್ ಅಹ್ಮದ್ ಬಿನ್ ಹಂಬಲ್ ಹೀಗೆ ಹೇಳಿದ್ದಾರೆ: ಮುಸ್ಲಿಮರು ಒಮ್ಮತಾಭಿಪ್ರಾಯ (ಇಜ್‌ಮಾ) ಪ್ರಕಟಿಸಿರುವರೆಂದು ವಾದಿಸುವವನು ಸುಳ್ಳುಗಾರನಾಗಿದ್ದಾನೆ. ಆದರೆ ನಿಸ್ಸಂಶಯವಾಗಿಯೂ ಹಲವು ಶತಮಾನಗಳಿಂದ ಹಝ್ರತ್ ಈಸಾ[ಅ] ಜೀವಿಸಿರುವರೆಂದು ನಂಬಿಕೆ ಮುಸ್ಲಿಮರಲ್ಲಿ ಹಬ್ಬಿರುತ್ತದೆ.

ನಾನು ಹೇಳಲು ಬಯಸುವುದೇನೆಂದರೆ, ಒಂದು ತಪ್ಪು ವಿಶ್ವಾಸವು ಜಾರಿಗೊಳ್ಳುವುದು ಅಸಾಧ್ಯವೇನೂ ಅಲ್ಲ. ಇಂದಿನ ಕಾಲದಲ್ಲಿ ಮುಸ್ಲಿಮರಲ್ಲಿ ಕನಿಷ್ಠ ಎಪ್ಪತ್ತೆರಡು ಪಂಗಡಗಳಿವೆ. ಅವರೆಲ್ಲರ ನಂಬಿಕೆಗಳು ಸರಿಯಾಗಿರಲು ಸಾಧ್ಯವಿಲ್ಲ. ಅವರ ನಂಬಿಕೆಗಳು ಸರಿಯಾಗಿದ್ದರೆ ಭಿನ್ನಾಭಿಪ್ರಾಯಗಳು ಏಕೆ ಇವೆ? ಈ ಭಿನ್ನಾಭಿಪ್ರಾಯಗಳು ಸೂಚಿಸುವುದೇನೆಂದರೆ, ಕೆಲವು ತಪ್ಪು ನಂಬಿಕೆಗಳು ಮುಸ್ಲಿಮರಲ್ಲಿ ಪ್ರವೇಶಿಸಿವೆ. ಈ ತಪ್ಪು ನಂಬಿಕೆಗಳು ಎಲ್ಲಿಂದ ಬಂದವು? ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಸರಿಯಾದ ವಿಶ್ವಾಸಾದರ್ಶಗಳನ್ನೇ ವಿವರಿಸುತ್ತವೆ. ಇವುಗಳಿರುವಾಗ ತಪ್ಪು ವಿಶ್ವಾಸಗಳು ಹೇಗೆ ಪ್ರವೇಶಿಸಿದುವು? ಇದಕ್ಕೆ ನೀವು ನೀಡಬಹುದಾದ ಉತ್ತರವೇ ನಮ್ಮ ಉತ್ತರ ಎಂದು ನೀವು ಭಾವಿಸಿರಿ. ಆದರೆ ನಿಮಗೆ ಕಟುತ್ತರ ನೀಡಿ ನೀವು ಮೌನವನ್ನವಲಂಬಿಸಬೇಕೆಂದು ನಾವು ಬಯಸುವುದಿಲ್ಲ. ನನ್ನ ಉದ್ದೇಶ ನಿಮಗೆ ಸಮಾಧಾನಕರವಾದ ಜ್ಞಾನ ಲಭಿಸಲಿ ಎಂದಾಗಿದೆ.

## ಹಝ್ರತ್ ಈಸಾ ಮಸೀಹ್ ಜೀವಿಸಿರುವರೆಂಬ ನಂಬಿಕೆ ಮುಸ್ಲಿಮರೊಳಗೆ ಹೇಗೆ ಪ್ರವೇಶಿಸಿತು?

ಇಸ್ಲಾಮ್ ಅಭಿವೃದ್ಧಿ ಹೊಂದುತ್ತಾ ಇದ್ದಾಗ ಕ್ರೈಸ್ತ ಧರ್ಮ ವಿಶ್ವಾಸಿಗಳು ಗುಂಪು ಗುಂಪಾಗಿ ಇಸ್ಲಾಮ್ ಧರ್ಮವನ್ನು ಪ್ರವೇಶಿಸಿದರು. ಮನುಷ್ಯನು ತನ್ನ ಪೂರ್ವಕಾಲದ ವಿಶ್ವಾಸಗಳನ್ನು ಮೆಲ್ಲ ಮೆಲ್ಲಗೆ ಬಿಟ್ಟುಬಿಡುತ್ತಾನೆಂಬುದು ಒಂದು ಸಹಜ ಪ್ರವೃತ್ತಿಯಾಗಿದೆ. ನಮ್ಮ ದೇಶದಲ್ಲಿ ಪ್ರಸಿದ್ಧವಾದ ಒಂದು ಗಾದೆ ಹೀಗಿದೆ: **"ರಾಮ್ ಕಾ ನಾಮ್ ನಿಕಲ್ತೇ ನಿಕಲ್ತೇ ಹೀ ನಿಕ್‌ಲೇಗ ಔರ್ ಅಲ್ಲಾಹ್ ಕಾ ನಾಮ್ ದಾಖಲ್ ಹೋತೆ ಹೋತೆ ಹೀ ಹೋಗ"** – ರಾಮ್ ನಾಮ ಹೊರಡುತ್ತಾ ಹೊರಡುತ್ತಾ ಹೊರಟು ಹೋಗುವುದು ಮತ್ತು ಅಲ್ಲಾಹನ ನಾಮ ಪ್ರವೇಶ ಆಗುತ್ತಾ ಆಗುತ್ತಾ ಇರುವುದು. ಇದರ ಅರ್ಥವೇನೆಂದರೆ, ಮೊದಲು ಇದ್ದ ವಿಶ್ವಾಸ ಮೆಲ್ಲ ಮೆಲ್ಲಗೆ ಹೊರ ಹೋಗುವುದು; ಹೊಸ ವಿಶ್ವಾಸ ಮೆಲ್ಲ ಮೆಲ್ಲಗೆ ಒಳ ಸೇರುವುದು.

ಹೊಸದಾಗಿ ಇಸ್ಲಾಮ್ ಧರ್ಮಕ್ಕೆ ಸೇರಿದ ಕ್ರೈಸ್ತ ಜನರ ಸ್ಥಿತಿ ಹೀಗೆಯೇ ಆಯಿತು. ಸಾವಿರಾರು ಅಲ್ಲ, ಲಕ್ಷಗಟ್ಟಲೆ ಜನರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಅವರು ಇಸ್ಲಾಮ್ ಧರ್ಮ ಸತ್ಯವೆಂದು ಮನವರಿಕೆ ಮಾಡಿಕೊಂಡು ಮುಸ್ಲಿಮರಾದರು. ಆದರೆ ಸಹಜವಾಗಿ ಅವರ ಆಚಾರ ವಿಚಾರಗಳಲ್ಲಿ ಕೂಡಲೇ ಪೂರ್ಣ ಕ್ರಾಂತಿ ಉಂಟಾಗದ ಕಾರಣ ಅವರ ಹೃದಯದಲ್ಲಿದ್ದ ಕೆಲವು ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ವಿಶ್ವಾಸಗಳು ಕೂಡಲೇ ಹೃದಯದಿಂದ ಹೊರಟು ಹೋಗಲು ಸಾಧ್ಯವಿರಲಿಲ್ಲ. ಅವರ ಹೃದಯಗಳಲ್ಲಿ ಹಝ್ರತ್ ಈಸಾ ಮಸೀಹರ[ಅ] ಬಗ್ಗೆ ಇದ್ದ ಪ್ರೀತಿ, ಶಿರ್ಕ್ (ಬಹುದೇವಾರಾಧನೆಯ) ಸ್ಥಾನದಿಂದ ನಿಸ್ಸಂಶಯವಾಗಿ ಕೆಳಗೆ ಇಳಿದಿತ್ತು. ಆದರೆ ಅದು ಸಂಪೂರ್ಣವಾಗಿ ಹೃದಯದಿಂದ ಹೊರಟು ಹೋಗಿರಲಿಲ್ಲ. ಪವಿತ್ರ ಖುರ್‌ಆನ್ ಮತ್ತು ಹದೀಸುಗಳಲ್ಲಿ ಹಝ್ರತ್ ಈಸಾ ಮಸೀಹರ[ಅ] ಪ್ರಸ್ತಾಪ ಬಂದಾಗಲೆಲ್ಲ ಅವರು ಸಹಜವಾಗಿ ತಮಗೆ ಕಲಿಸಲಾದ ಹಳೆಯ ಕಥೆಗಳನ್ನು ಜೋಡಿಸಿ ಹೇಳಿದರು. ಮುಸ್ಲಿಮರು ಮೆಲ್ಲ ಮೆಲ್ಲಗೆ ಮೌನವಾಗಿ ಅವರ ವಿಚಾರಗಳಿಂದ ಪ್ರಭಾವಿತರಾಗಲು ತೊಡಗಿದರು.[*2]

ಹಝ್ರತ್ ಪೈಗಂಬರರ[ಸ] ಶಿಷ್ಯರಲ್ಲಿ ಬಹುತೇಕ ಜನರು ಜೀವಿಸಿರುವಾಗ ಹೀಗೆ ಪ್ರಭಾವ ಬೀರುವುದು ಅಸಾಧ್ಯವಾಗಿತ್ತು. ಆದರೆ ಅವರ ಕಾಲಘಟ್ಟದ ನಂತರ ವಂಶ ಪಾರಂಪರ್ಯವಾಗಿ ಮುಸ್ಲಿಮರಾದವರು ಸಹ ನವಮುಸ್ಲಿಮರಿಂದ ಪ್ರಭಾವಿತರಾದರು. ಈ ರೀತಿ ಕೆಲವು ತಪ್ಪು ವಿಶ್ವಾಸಗಳು ಮುಸ್ಲಿಮರಲ್ಲಿ ಜಾರಿಗೊಂಡವು.

ಉದಾಹರಣೆಗೆ, ಹಝ್ರತ್ ಈಸಾ ಮಸೀಹ್[ಅ] ಮೃತರನ್ನು ಜೀವಂತ ಗೊಳಿಸಿದರೆಂದು ಪವಿತ್ರ ಖುರ್‌ಆನಿನಲ್ಲಿದೆ. ಯಾರು ಆಧ್ಯಾತ್ಮಿಕವಾಗಿ ಮೃತರಾಗಿದ್ದರೋ ಅವರೊಳಗೆ ಹಝ್ರತ್ ಈಸಾ ಮಸೀಹ್[ಅ] ಜೀವಿತದ ಆತ್ಮವನ್ನು ಊದಿದರೆಂದು ಇದರ ಅರ್ಥವಾಗಿದೆ. ಇದು ಎಲ್ಲ ಪ್ರವಾದಿಗಳು ಮಾಡುವ ಕೆಲಸವೇ ಆಗಿದೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್[ಸ] ಬಗ್ಗೆ ಸಹ ಹೀಗೆ ಪವಿತ್ರ ಖುರ್‌ಆನ್ ಹೇಳಿದೆ: **"**ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೆ ಮತ್ತು ಸಂದೇಶವಾಹಕನಿಗೆ – ಅವರು ನಿಮ್ಮನ್ನು ಬದುಕಿಸಲಿಕ್ಕಾಗಿ ಕರೆಯುವಾಗ ಓಗೊಡಿರಿ.**"** (ಪವಿತ್ರ ಖುರ್‌ಆನ್ 8:25).

ಆದರೆ ಹಝ್ರತ್ ಈಸಾ ಮಸೀಹರ[ಅ] ಬಗ್ಗೆ ಬದುಕಿಸುವ ಶಬ್ದ ಪ್ರಯೋಗಿಸಲ್ಪಟ್ಟಾಗ ಅವರು ವಾಸ್ತವಿಕವಾಗಿ ಮೃತರಾದವರನ್ನು ಜೀವಂತಗೊಳಿಸಿದರೆಂದು ಗ್ರಹಿಸಲಾಯಿತು.

ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಈಸಾ ಮಸೀಹ್[ಅ] ಬಗ್ಗೆ ಎಲ್ಲಿಯಾದರೂ ಖಲ್‌ಖ್ (ಸೃಷ್ಟಿಸುವ) ಪದ ಪ್ರಯೋಗಿಸಲ್ಪಟ್ಟರೆ ವಾಸ್ತವಿಕವಾಗಿ ಅವರು ಸೃಷ್ಟಿಕಾರ್ಯ ಮಾಡುತ್ತಿದ್ದರು ಎಂದು ವ್ಯಾಖ್ಯಾನಿಸಲಾಯಿತು. ವಾಸ್ತವಿಕವಾಗಿ ಇಂತಹ ಪದಗಳು ಆಲಂಕಾರಿಕವಾಗಿ ಆಂತರಿಕ ಅರ್ಥದಿಂದ ಪ್ರಯೋಗಿಸಲ್ಪಡುತ್ತವೆ.

ಇದೇ ರೀತಿ ಹಝ್ರತ್ ಈಸಾ ಮಸೀಹರ[ಅ] ನುಝೂಲ್ (ಇಳಿಯುವಿಕೆ) ಬಗ್ಗೆಯೂ ಬಾಹ್ಯಾರ್ಥ ನೀಡುತ್ತಾರೆ. ಕ್ರೈಸ್ತ ಧರ್ಮದಲ್ಲಿ

[*2] ಇದೇ ಕಾರಣದಿಂದ ನಮ್ಮ ಹಿಂದಿನ ಕೆಲವು ವ್ಯಾಖ್ಯಾನಗಾರರು ಪವಿತ್ರ ಖುರ್‌ಆನಿನ ವ್ಯಾಖ್ಯಾನ ಮಾಡುವಾಗ ಅನಾವಶ್ಯಕವಾಗಿ ಇಸ್ರಾಈಲೀ (ಯಹೂದಿ) ಕಥೆಗಳನ್ನು ವಿವರಿಸುತ್ತಾ ಹೋಗುತ್ತಿದ್ದರು.

ಹಝ್ರತ್ ಈಸಾ ಮಸೀಹರ(ಅ) ಪುನರಾಗಮನದ ಪ್ರಸ್ತಾಪ ಮೊದಲಿನಿಂದಲೇ ಇತ್ತು. ಅವರ ಬಗ್ಗೆ ಎಲ್ಲ ಕ್ರೈಸ್ತರು ಸ್ವತಃ ಹಝ್ರತ್ ಈಸಾ ಮಸೀಹರೇ ಆಗಮಿಸುವರೆಂದು ನಂಬುತ್ತಿದ್ದರು. ಈ ಜನರು ಗುಂಪು ಗುಂಪಾಗಿ ಬಂದು ಮುಸ್ಲಿಮರಾದಾಗ ಅವರು ಇಸ್ಲಾಮ್ ಧರ್ಮದಲ್ಲಿಯೂ ಒಬ್ಬ ಮಸೀಹರ ಆಗಮನದ ಸಮಾಚಾರವನ್ನು ಆಲಿಸಿದರು. ಆಗ ಅವರು ಕೂಡಲೆ, ಕ್ರೈಸ್ತ ಧರ್ಮದಲ್ಲಿ ಪ್ರಸ್ತಾಪಿಸಲ್ಪಡುವ ಸಮಾಚಾರವೇ ಇದು ಎಂದು ಯೋಚಿಸಿ ಹಝ್ರತ್ ಈಸಾ ಮಸೀಹರೇ ಸ್ವತಃ ಆಗಮಿಸುವರೆಂದು ಭಾವಿಸಿದರು. ಅರಬಿ ಭಾಷೆಯಲ್ಲಿ ಪ್ರಯೋಗಿಸಲ್ಪಟ್ಟ ನುಝೂಲ್ (ಇಳಿಯುವಿಕೆ) ಎಂಬ ಪದ ಸಹ ಅವರಿಗೆ ದೊರೆತಿತು. ಆಗ ಅವರು ಹಝ್ರತ್ ಈಸಾ ಮಸೀಹರೇ ಅಂತ್ಯ ಕಾಲದಲ್ಲಿ ಸ್ವತಃ ಆಗಮಿಸುವರೆಂದು ದೃಢ ವಿಶ್ವಾಸ ಹೊಂದಿದರು. ಹಝ್ರತ್ ಈಸಾ ಮಸೀಹರ ಬಗ್ಗೆ ಅವರಿಗಿದ್ದ ಪ್ರೀತಿ ಅವರನ್ನು ಎಷ್ಟು ಪ್ರಭಾವಕ್ಕೊಳಪಡಿಸಿತೆಂದರೆ, ಪವಿತ್ರ ಖುರ್‌ಆನನ್ನು ತೆರೆದು ಈ ವಿಶ್ವಾಸ ಪವಿತ್ರ ಖುರ್‌ಆನಿಗೆ ಅನುಸಾರವಾಗಿದೆಯೋ ಇಲ್ಲವೋ ಎಂದು ನೋಡಲು ಅನುಮತಿಯನ್ನೇ ನೀಡಲಿಲ್ಲ. ಅನಂತರದ ಪೀಳಿಗೆಯ ಜನರಿಗೆ ತಮ್ಮ ಹಿರಿಯರ ವಿರುದ್ಧ ಏನಾದರೂ ಅಭಿಪ್ರಾಯ ಸೂಚಿಸುವ ಧೈರ್ಯವಾದರೂ ಇರಲಿಲ್ಲ. ಅವರು ಅಂಧರಾಗಿ ಈ ವಿಶ್ವಾಸವನ್ನು ಪ್ರಚಾರ ಮಾಡಿದರು.

ಕೆಲವು ಧೈರ್ಯಶಾಲಿಗಳು ಈ ತಪ್ಪು ವಿಶ್ವಾಸದ ಬಗ್ಗೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ನು ಪರಾಂಬರಿಸಿದಾಗ ಅವರು ಜನಸಾಮಾನ್ಯರ ವಿಶ್ವಾಸದ ವಿರುದ್ಧವಾಗಿ ಹಝ್ರತ್ ಈಸಾ ಮಸೀಹ್ ಮೃತರಾಗಿರುವರೆಂದು ಹೇಳಿದರು. ಕೆಲವರು ತಮ್ಮ ಹೃದಯಗಳಲ್ಲೇ ಸತ್ಯವನ್ನು ಬಚ್ಚಿಟ್ಟು ಇಹಲೋಕ ತ್ಯಜಿಸಿದರು.

ತಂದೆ ತಾತಂದಿರ ವಿಶ್ವಾಸವನ್ನು ಬಿಟ್ಟುಬಿಡುವುದು ಸಾಮಾನ್ಯ ಜನರಿಗೆ ಬಹಳ ಕಷ್ಟಕರವಾಗಿದೆ. ಪವಿತ್ರ ಖುರ್‌ಆನ್ ಜನ ಸಾಮಾನ್ಯರು ಹೀಗೆ ಹೇಳುತ್ತಾರೆಂದು ವಿವರಿಸಿದೆ: **ಬಲ್‌ನತ್ತಬಿವು ಮಾ ಅಲ್‌ಫೈನಾ ಅಲೈಹಿ ಆಬಾಅನಾ** – "ನಮ್ಮ ತಂದೆ ತಾತಂದಿರು ನಡೆದುದಾಗಿ ಕಂಡ ಮಾರ್ಗವನ್ನೇ ನಾವು ಅನುಸರಿಸುತ್ತೇವೆ." (2:171).

ಇದಕ್ಕೆ ಅಲ್ಲಾಹನು ಹೀಗೆ ಚೆನ್ನಾಗಿ ಉತ್ತರಿಸಿರುವನು : **ಅವಲೌಕಾನ ಆಬಾವುಹುಮ್ ಲಾಯಅ್‌ಖಿಲೂನ ಶೈಅನ್ ವಲಾ ಯಹ್‌ತದೂನ್** – "ಅವರ ಪೂರ್ವಜರು ಏನನ್ನೂ ಗ್ರಹಿಸಲು ಶಕ್ತರಲ್ಲವಾದರೂ ಸತ್ಪಥ ಅನುಸರಿಸದವರು ಆಗಿದ್ದರೂ (ಅವರನ್ನೇ ಇವರು ಸಹ ಅನುಸರಿಸುವರೋ?) (ಪವಿತ್ರ ಖುರ್‌ಆನ್ 2:171).

ನಮ್ಮ ಉತ್ತರವೂ ಇದೇ ಆಗಿದೆ. ಆದರೆ ಆಲಿಸಲು ಇಚ್ಛಿಸದ ಜನರು ಅಲ್ಲಾಹನ ಮಾತನ್ನೇ ಆಲಿಸದೆ ಇರುವಾಗ ನಮ್ಮ ಮಾತು ಯಾವ ಲೆಕ್ಕಕ್ಕಿದೆ !

## ಈಸಬ್ನು ಮರ್‌ಯಮ್ ಎಂಬ ಹೆಸರನ್ನು ಬಳಸಿದುದರ ಔಚಿತ್ಯವೇನು?

ಆಗಮಿಸಲಿರುವ ವಾಗ್ದತ್ತ ಮಸೀಹರ ಬಗ್ಗೆ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸೀಹಿಬ್ನು ಮರ್‌ಯಮ್ ಎಂಬ ಹೆಸರು ಬಳಸಿದುದೇಕೆಂದು ವಿವರಿಸದಿದ್ದರೆ ಈ ಪ್ರಬಂಧವೂ ಪೂರ್ಣವಾಗದು.

ಒಂದು ವಿಷಯವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು. ಒಬ್ಬ ಪ್ರವಾದಿ ಮುಂದೆ ಆಗಮಿಸಲಿರುವ ಪ್ರವಾದಿಯ ಹೆಸರನ್ನು ಹೇಳುವುದು ಯಾವುದಾದರೂ ಆಂತರಿಕ ವಾಸ್ತವಿಕತೆ ಬಗ್ಗೆ ಸೂಚಿಸಲಿಕ್ಕಾಗಿರುತ್ತದೆ. ಆದುದರಿಂದ ಹಾಗೆ ಸೂಚಿಸುವ ಹೆಸರುಗಳನ್ನು ಬಾಹ್ಯವಾಗಿ ಅರ್ಥವಿಸಿ ಹೇಳುವುದು ಸರಿಯಾಗದು. ಸಾಮಾನ್ಯವಾಗಿ ಹೀಗೆ ಹೇಳುವ ಹೆಸರುಗಳ ಅರ್ಥ, ಆಗಮಿಸುವ ಮಹಾನುಭಾವರು ಈ ಹೆಸರಿನೊಂದಿಗಿನ ಗುಣ ಧರ್ಮಗಳಿಗೆ ಅನುಸಾರವಾದ ಸಂಬಂಧ ಹೊಂದಿದ್ದಾರೆಂದು ಸೂಚಿಸಲಿಕ್ಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಬನೀ ಇಸ್ರಾಈಲ್ ಜನಾಂಗದ ಜನರಿಗೆ ಹೀಗೆ ವಾಗ್ದಾನ ನೀಡಲಾಗಿತ್ತು: ಈಸಾ ಮಸೀಹರ ಆಗಮನಕ್ಕೆ ಮೊದಲು ಎಲೀಯಾ ಪ್ರವಾದಿ ಪುನಃ ಆಗಮಿಸುವರು. (ಮಲಾಕಿ 4:5 ನೋಡಿರಿ). ಎಲೀಯಾ ಪ್ರವಾದಿ ಆಕಾಶಕ್ಕೆ ಎತ್ತಲ್ಪಟ್ಟರೆಂದೂ ಯಹೂದಿಯರು ನಂಬುತ್ತಿದ್ದರು. (II ಅರಸುಗಳು 2:11).

ಈ ಭವಿಷ್ಯವಾಣಿಗಳ ಪ್ರಕಾರ ಬಾಹ್ಯಾರಾಧಕರಾದ ಯಹೂದಿಯರು ಎಲೀಯಾ ಪ್ರವಾದಿ ಇಳಿದು ಬರುವರು ಎಂದು ನಂಬುತ್ತಿದ್ದರು. ಎಲೀಯಾ ಪ್ರವಾದಿ ಆಕಾಶದಿಂದ ಇಳಿದು ಬಂದ ನಂತರವೇ ಮಸೀಹ್ ಆಗಮಿಸುವರು ಎಂದು ಅವರು ನಂಬುತ್ತಾ ಇದ್ದರು. ಆದುದರಿಂದ ಹಝ್ರತ್ ಈಸಾ ಅಲೈಹಿಸ್ಸಲಾಮ್ ತಾನು ವಾಗ್ದಾನ ನೀಡಲಾದ ಮಸೀಹ್ ಎಂದು ವಾದಿಸಿದಾಗ ಯಹೂದಿಯರು ಸ್ಪಷ್ಟವಾಗಿ ಅವರ ವಾದವನ್ನು ತಿರಸ್ಕರಿಸಿ ಹೇಳಿದರು: "ಮಸೀಹರಿಗೆ ಮೊದಲು ಎಲೀಯಾ ಆಕಾಶದಿಂದ ಇಳಿದು ಬರುವರೆಂದು ನಮ್ಮ ಗ್ರಂಥಗಳಲ್ಲಿ ಬರೆದಿದೆ. ಇಷ್ಟರವರೆಗೆ ಎಲೀಯಾ ಪ್ರವಾದಿ ಆಗಮಿಸದ ಕಾರಣ ನಿಮ್ಮ ಮಸೀಹ್ ಎಂಬ ವಾದ ಸತ್ಯವಾಗಲು ಸಾಧ್ಯವಿಲ್ಲ." ಇದಕ್ಕೆ ಉತ್ತರವಾಗಿ ಹಝ್ರತ್ ಈಸಾ ಮಸೀಹ್(ಅ) ಹೀಗೆ ಹೇಳಿದರು: ಎಲೀಯಾ ಪ್ರವಾದಿ ಆಗಮಿಸುವರೆಂದು ಹೇಳಿದುದರ ಅರ್ಥ ಸ್ವತಃ ಎಲೀಯಾ ಪ್ರವಾದಿ ಆಗಮಿಸುವರು ಎಂದಲ್ಲ. ಅದು ಎಲೀಯಾ ಪ್ರವಾದಿಯ ಹಾಗೆ ಗುಣವಿಶೇಷಗಳನ್ನು ಹೊಂದಿದ ಒಬ್ಬ ಪ್ರವಾದಿಯ ಆಗಮನದ ಬಗ್ಗೆ ಆಲಂಕಾರಿಕವಾಗಿ ಹೇಳಿದ ಮಾತಾಗಿತ್ತು. ಅಂತಹ ಪ್ರವಾದಿ ಆಗಮಿಸಿದ್ದಾರೆ. ಯೋಹಾನ ಪ್ರವಾದಿ ಆಗಮಿಸಿರುತ್ತಾರೆ. ಅವರೇ ಆಗಮಿಸಲಿರುವ ಎಲೀಯಾ ಪ್ರವಾದಿ ಆಗಿದ್ದಾರೆ. ಕೇಳುವುದಕ್ಕೆ ಕಿವಿಯುಳ್ಳವನು ಕೇಳಿಕೊಳ್ಳಲಿ. (ಮತ್ತಾಯ 11: 13,14 ನೋಡಿರಿ).

ಆದರೆ ಬಾಹ್ಯಾರ್ಥವನ್ನೇ ಅವಲಂಬಿಸುತ್ತಿದ್ದ ಯಹೂದಿಯರು ತಮ್ಮ ಹಠದಲ್ಲಿಯೇ ಮುಂದುವರಿದರು. ಸ್ವತಃ ಎಲೀಯಾ ಪ್ರವಾದಿಯೇ ಇಳಿದು ಬರುವರೆಂದು ಗ್ರಂಥಗಳಲ್ಲಿ ಬರೆದಿದೆ. ಆದುದರಿಂದ ಯೋಹಾನ ಪ್ರವಾದಿಯ ಆಗಮನ ಎಲೀಯಾ ಪ್ರವಾದಿಯ ಆಗಮನಕ್ಕೆ ಸಮವಾಗಲಾರದು ಎಂದು ಯಹೂದಿಯರು ಹೇಳಿದರು. ಈ ರೀತಿ ಅವರು ಮೋಕ್ಷಗಳಿಸುವುದರಿಂದ ವಂಚಿತರಾದರು.

ಮೇಲಿನ ಉದಾಹರಣೆಯಿಂದ ಒಂದು ವಿಷಯ ಸೂರ್ಯ ಪ್ರಕಾಶದಂತೆ ಸ್ಪಷ್ಟವಾಗುತ್ತದೆ. ಭವಿಷ್ಯವಾಣಿಗಳಲ್ಲಿ ಮುಂದೆ ಆಗಮಿಸಲಿರುವ ಸುಧಾರಕರ ಹೆಸರು ಪ್ರಸ್ತಾಪಿಸಲ್ಪಡುತ್ತವೆ. ಆದರೆ ಅವುಗಳನ್ನು ಬಾಹ್ಯಾರ್ಥದಲ್ಲೇ ಯಾವಾಗಲೂ ತೆಗೆದುಕೊಳ್ಳುವುದು ನಾಶದ ಮಾರ್ಗವಾಗಿದೆ. ಸತ್ಯವಿಶ್ವಾಸಿ ಹೀಗೆ ಮಾಡುವುದರಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾದುದು ಕಡ್ಡಾಯವಾಗಿದೆ. ಎಲೀಯಾ ಪ್ರವಾದಿ ಆಕಾಶದಿಂದ ಇಳಿದು ಬರುವುದಕ್ಕೂ ಯೋಹಾನ ಪ್ರವಾದಿ ಭೂಮಿಯಲ್ಲಿ ಹುಟ್ಟಿ ಬರುವುದಕ್ಕೂ ಇರುವ ಸಂಬಂಧವಾದರೂ ಏನು? ಆದರೆ ಹಝ್ರತ್ ಈಸಾ ಮಸೀಹರು ಯೋಹಾನ ಪ್ರವಾದಿಯನ್ನೇ ಎಲೀಯಾ ಎಂದು ಹೇಳುತ್ತಾರೆ. ಏಕೆಂದರೆ ಯೋಹಾನ ಪ್ರವಾದಿ ಎಲೀಯಾ ಪ್ರವಾದಿಯ ಸಾದೃಶ್ಯ ಪುರುಷರಾಗಿ ಅವರ ಗುಣ ವಿಶೇಷಗಳನ್ನು ಹೊಂದಿ ಆಗಮಿಸಿದ್ದರು.

ಇದೇ ಪ್ರಕಾರ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಉಲ್ಲೇಖಿಸಲ್ಪಟ್ಟಿದೆ: ಹಝ್ರತ್ ಈಸಾ ಮಸೀಹ್(ಅ) ತನ್ನ ಅನಂತರ ಒಬ್ಬ ಸಂದೇಶವಾಹಕ ಆಗಮಿಸುವರು; ಅವರ ಹೆಸರು ಅಹ್ಮದ್ ಆಗಿದೆ ಎಂದು ಹೇಳಿದರು. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ಮೂಲಕ ಈ ಭವಿಷ್ಯವಾಣಿ ಈಡೇರಿದೆ ಎಂದು ನಮ್ಮ ವಿರೋಧಿಗಳಾದ ಎಲ್ಲ ಮುಸ್ಲಿಮರು ಒಮ್ಮತದ ಅಭಿಪ್ರಾಯ ಸೂಚಿಸುತ್ತಾರೆ. ಆದರೆ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರು ಅಹ್ಮದ್ ಎಂದಾಗಿತ್ತೆ? ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತಾನು ಪ್ರವಾದಿ ಎಂದು ವಾದಿಸಿದ ನಂತರ **"ನಾನು ಅಹ್ಮದ್ ಸಹ ಆಗಿರುವೆನು"** ಎಂದು ಹೇಳಿದುದು ಸತ್ಯವಾಗಿದೆ. ಆದರೆ ವಾದಿಸಿದ ನಂತರ ಆ ಹೆಸರನ್ನು ತನಗೆ ಸಂಬಂಧಿಸಿದೆ ಎಂದು ಹೇಳುವುದು ವಿರೋಧಿಗಳ ಎದುರಿಗೆ ನಿಖರ ಸಾಕ್ಷ್ಯಾಧಾರವಾಗಲಾರದು. ತನ್ನ ಹೆಸರು ಅಹ್ಮದ್ ಎಂದು ಇರಿಸಲಾಗಿತ್ತೆಂದೂ ಅಥವಾ ತನ್ನ ವಾದಕ್ಕೆ ಮೊದಲು ಅಹ್ಮದ್ ಎಂಬ ಹೆಸರಿನಿಂದ ಯಾವಾಗಲಾದರೂ ತಾನು ಕರೆಯಲ್ಪಟ್ಟಿರುವುದಾಗಿ ಸಾಬೀತುಗೊಳಿಸಿದರೆ ವಿರೋಧಿಗಳಿಗೆ ಅದು ಸಾಕ್ಷ್ಯಾಧಾರವಾಗುವುದು. ಆದರೆ ಹದೀಸುಗಳಿಂದ ಇದು ಸಾಬೀತಾಗುವುದಿಲ್ಲ. ಇದಕ್ಕೆ ನೀಡಬಹುದಾದ ಉತ್ತರ ಕೇವಲ ಹೀಗೆ: ಆಕಾಶದಲ್ಲಿ ಯಹ್‌ಯಾ ಪ್ರವಾದಿಯ ಹೆಸರು ಇಲಿಯಾಸ್ ಎಂದು ಇದ್ದ ಹಾಗೆ ಆಕಾಶದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರು ಅಹ್ಮದ್ ಎಂದು ಸಹ ಆಗಿತ್ತು.

ಮೇಲಿನ ಎರಡು ಉದಾಹರಣೆಗಳಿಂದ ಹೀಗೆ ಚೆನ್ನಾಗಿ ಸ್ಪಷ್ಟವಾಗುತ್ತದೆ : ಭವಿಷ್ಯವಾಣಿಗಳಲ್ಲಿ ಹೇಳಲ್ಪಡುವ ಹೆಸರುಗಳು ಕಡ್ಡಾಯವಾಗಿ ಬಾಹ್ಯವಾಗಿಯೂ ಕಂಡು ಬರುವುದು ಆವಶ್ಯಕವಾಗಿರುವುದಿಲ್ಲ. ಬದಲಾಗಿ, ಕೆಲವು ಸಾರಿ ಅವು ಆಂತರಿಕ ಸತ್ಯಾಂಶಗಳ ಕಡೆಗೆ ಸೂಚಿಸುವವುಗಳಾಗಿರುತ್ತವೆ.*3

ಆಗಮಿಸಲಿದ್ದ ಸುಧಾರಕರನ್ನು ಇಬ್ನು ಮರ್‌ಯಮ್ ಎಂದು ಹೆಸರಿಸಿದುವುದರ ರಹಸ್ಯವೇನು? ಎಂಬ ಪ್ರಶ್ನೆಗೆ ಉತ್ತರವಾಗಿ ಸವಿಸ್ತಾರವಾಗಿ ಬರೆಯದೆ ಕೆಲವು ಮುಖ್ಯಾಂಶಗಳನ್ನು ಓದುಗರ ಮುಂದೆ ಇರಿಸುತ್ತೇನೆ.

ಒಂದನೆಯದಾಗಿ, ಆಗಮಿಸಲಿರುವ ಮಸೀಹರು ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮರ ಸ್ವಭಾವ ಗುಣಗಳನ್ನು ಹೊಂದಿ ಆಗಮಿಸಬೇಕಾಗಿತ್ತು. ಹಝ್ರತ್ ಯಹ್‌ಯಾ ಯಾವ ರೀತಿ ಹಝ್ರತ್ ಎಲೀಯಾರ ಸ್ವಭಾವ ಗುಣಗಳನ್ನು ಹೊಂದಿ ಆಗಮಿಸಿದರೋ ಅದೇ ರೀತಿ ಹಝ್ರತ್ ಈಸಾ ಮಸೀಹ್ ಸೌಹಾರ್ದ ಮತ್ತು ಶಾಂತಿಯ ರಾಜಕುಮಾರರಾಗಿದ್ದರು. ಅವರು ಸೌಮ್ಯವಾಗಿ ಮೃದುತ್ವದೊಂದಿಗೆ ತನ್ನ ಧರ್ಮ ಪ್ರಚಾರದ ಕೆಲಸವನ್ನು ಜೀವಿತಾದ್ಯಂತ ನಡೆಸಿದರು. ವಿರೋಧಿಗಳು ಅವರೊಂದಿಗೆ ಕಠಿಣವಾಗಿ ವರ್ತಿಸಿದರೂ ಅವರು ಸಹನೆದೋರಿದರು. ಅವರು ವಿರೋಧಿಗಳನ್ನು ಎದುರಿಸಿ ವರ್ತಿಸಲಿಲ್ಲ. ಮುಸ್ಲಿಮ್ ಸಮುದಾಯದಲ್ಲಿ ಆಗಮಿಸಲಿರುವ ಮಸೀಹ್ ಸಹ ಇದೇ ಸ್ವಭಾವ ಗುಣಗಳನ್ನು ಹೊಂದಿ ಬರಬೇಕಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಾಗ್ದತ್ತ ಮಸೀಹರು ಖಡ್ಗ ಪ್ರಯೋಗಿಸುವ ಜಿಹಾದನ್ನು ಸ್ಥಗಿತಗೊಳಿಸುವರು ಎಂದು ಹೇಳಿದ್ದಾರೆ. (ಬುಖಾರಿ ಕಿತಾಬುಲ್ ಅಂಬಿಯಾ ನೋಡಿರಿ) ಅವರು ಆಗಮಿಸುವ ಕಾಲ ಖಡ್ಗ ಪ್ರಯೋಗ ನಡೆಸಿ ಜಿಹಾದ್ ಮಾಡುವ ಕಾಲವಾಗಿರದು.

ಎರಡನೆಯದಾಗಿ, ಹಝ್ರತ್ ಈಸಾ ಮಸೀಹ್ ಹಝ್ರತ್ ಮೂಸಾರ ಖಲೀಫರ ಶೃಂಖಲೆಯ ಖಾತಮುಲ್ ಖುಲಫಾ ಆಗಿದ್ದ

*3 ಕೆಲವು ಜನರು ಹೀಗೆ ಆಕ್ಷೇಪಿಸುತ್ತಾರೆ: ಮಸೀಹಿಬ್ನು ಮರ್‌ಯಮ್ ಎಂದು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ಹೇಳಿದ್ದಾರೆ. ಹೀಗಿರುವಾಗ ಈ ವಾಸ್ತವಿಕ ಹೆಸರಿಗೆ ಪರ್ಯಾಯವಾಗಿ ಬೇರೆ ಹೆಸರನ್ನು ಸೂಚಿಸುವುದನ್ನು ಸಾಬೀತುಗೊಳಿಸುವ ತನಕ ಈ ವಾಸ್ತವಿಕ ಹೆಸರನ್ನೇ ಪರಿಗಣಿಸಬೇಕು. ಇದಕ್ಕಿರುವ ಸಮಂಜಸ ಉತ್ತರ ಹೀಗೆ: ಇಸ್ರಾಈಲ್ ಜನಾಂಗಕ್ಕೋಸ್ಕರ ಆಗಮಿಸಿದ ಹಝ್ರತ್ ಈಸಾ ಮಸೀಹ್ ಮೃತಾರಾಗಿರುವರೆಂದು ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುತ್ತದೆ. ಮೃತರಾದವರು ಪುನರುಜ್ಜೀವನಗೊಂಡು ಇಹಲೋಕಕ್ಕೆ ಬರುವುದು ಇಸ್ಲಾಮ್ ತತ್ವಗಳ ಪ್ರಕಾರ ನಿಷಿದ್ಧವಾಗಿದೆ. ಇದಕ್ಕಿಂತ ದೊಡ್ಡ ಸೂಚನೆ ಬೇರೆ ಏನಿದೆ. ಇಷ್ಟು ಸ್ಪಷ್ಟವಾದ ಸೂಚನೆ ಬೇರೆ ಯಾವುದೂ ಇಲ್ಲ. ಆದರೆ ಸೂಚನೆಯನ್ನು ನಮ್ಮೊಡನೆ ಏಕೆ ಕೇಳಲಾಗುತ್ತದೆ? ಸೂಚಕಗಳನ್ನು ಹುಡುಕುವುದು ಅಹ್ಮದಿಯೇತರರ ಕರ್ತವ್ಯವಾಗಿದೆ.

ಅಲ್ಲಾಹನು ವಸ್ತುಗಳ ವಾಸ್ತವಿಕ ಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳುತ್ತಾನೆ, ಅವರ ಹೆಸರನ್ನಲ್ಲ. ಉದಾಹರಣೆಗೆ, ಒಬ್ಬನ ಹೆಸರು ಗುಲಾಮ್ ರಸೂಲ್ (ಪ್ರವಾದಿಯ ದಾಸ) ಎಂದಿದೆ ಎಂದು ಭಾವಿಸುವ. ಅವನು ಧರ್ಮತ್ಯಾಗ ಮಾಡಿದರೆ ಅಲ್ಲಾಹನ ದೃಷ್ಟಿಯಲ್ಲಿ ಅವನು ಗುಲಾಮ್ ರಸೂಲ್‌ಗೆ ಬದಲಾಗಿ ಅದುವ್ವುರ್ರಸೂಲ್ (ಪ್ರವಾದಿಯ ಶತ್ರು) ಆಗುತ್ತಾನೆ. ಅಲ್ಲಾಹನು ಅವನನ್ನು ಅದುವ್ವುರ್ರಸೂಲ್ ಎಂದೇ ಹೇಳುವನು.

ಇದೇ ರೀತಿ ಅಲ್ಲಾಹನು ಆಗಮಿಸುವವರ ಹೆಸರನ್ನು ಇಬ್ನು ಮರ್‌ಯಮ್ ಎಂದು ಇರಿಸಿದುದು ಅವರು ಹಿಂದೆ ಆಗಮಿಸಿದ ಇಬ್ನು ಮರ್‌ಯಮ್ ಜೊತೆಗೆ ವಿಶಿಷ್ಟ ಗುಣಗಳಲ್ಲಿ ಸಾಮ್ಯತೆ ಹೊಂದಿದುದರಿಂದಾಗಿದೆ. ಸೌಮ್ಯರೂಪದಲ್ಲಿ ಸುಧಾರಣೆ ಮಾಡುವವ ಮತ್ತು ಒಂದು ಶೃಂಖಲೆಯ ಕೊನೆಯ ಖಲೀಫ ಎಂಬ ಅರ್ಥದಲ್ಲಾಗಿದೆ. ಅಲ್ಲಾಹನು ಇಬ್ನು ಮರ್‌ಯಮ್ ಎಂದು ನಾಮಕರಣ ಮಾಡಿದುದು ಈ ವಾಸ್ತವಿಕತೆಯನ್ನು ಪ್ರಕಟಿಸಲಿಕ್ಕಾಗಿದೆ. ಇಬ್ನು ಮರ್‌ಯಮ್ ಎಂಬ ಹೆಸರಿನಿಂದ ಅಲ್ಲಾಹನು ಉದ್ದೇಶಿಸಿದುದು ಹಿಂದೆ ಆಗಮಿಸಿದ ಇಬ್ನು ಮರ್‌ಯಮ್‌ಗೆ ಸಾದೃಶ್ಯ ಹೊಂದಿದವರು ಬರುವರೆಂದಾಗಿದೆ. ನಮ್ಮ ವಾದ ಅಲ್ಲಾಹನ ನಡೆವಳಿಕೆಗೆ ಅನುಸಾರವಾಗಿದೆ. ಅಲ್ಲಾಹನು ತಾನು ನಿಗದಿಪಡಿಸಿದ ನಿಯಮಗಳ ಪ್ರಕಾರ ಇಬ್ನು ಮರ್‌ಯಮ್ ಎಂಬ ಹೆಸರನ್ನು ಅದರ ವಾಸ್ತವಿಕ ಅರ್ಥದಲ್ಲಿ ಬಳಸಿದ್ದಾನೆ.

ಹಾಗೆ ವಾಗ್ದತ್ತ ಮಸೀಹರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಖರೀ ಖಲೀಫ (ಕೊನೆಯ ಖಲೀಫ) ಮತ್ತು ಖಾತಮುಲ್ ಖುಲಫಾ(ಖಲೀಫರುಗಳಲ್ಲಿ ಶ್ರೇಷ್ಠರು) ಆಗಲಿದ್ದರು. ಆದರೆ ನೆನಪಿಡಬೇಕಾದುದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಆಖರೀ ಖಲೀಫ ಎಂದು ಹೇಳಿದುದರ ಅರ್ಥ ಕೊನೆಯ ಮುಸ್ತಖಿಲ್ (ಶ್ರೇಷ್ಠ) ಖಲೀಫ ಎಂದು ಮಾತ್ರವಾಗಿದೆ. ಎಲ್ಲ ವಿಧಗಳ ಖಲೀಫರಲ್ಲಿ ಕೊನೆಯವರು ಎಂದು ಇದರ ಅರ್ಥವಲ್ಲ. ಹಝ್ರತ್ ಮಸೀಹ್ ಮೌಊದ್[ಅ] ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೊನೆಯ ಶ್ರೇಷ್ಠ ಖಲೀಫರಾಗಿರುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಂತರ ಬರುವ ಖಲೀಫರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಖಲೀಫರಾಗುವರು. ಆದರೆ ಅದರ ಮೂಲಕ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಲೀಫರೆಂದು ಕರೆಯಲ್ಪಡುವರು. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಿಲಾಫತ್ ಶೃಂಖಲೆ ಪುನರುತ್ಥಾನ ದಿನದ ತನಕ ಮುಂದುವರಿಯುವುದು.

ಮೂರನೆಯದಾಗಿ, ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಆಖರೀ ಝಮಾನದಲ್ಲಿ (ಲೋಕದ ಅಂತಿಮ ಕಾಲದಲ್ಲಿ) ಕ್ರೈಸ್ತ ಧರ್ಮ ಬಲಿಷ್ಠವಾಗುವ ಬಗ್ಗೆ ಎಂದರೆ ಶಿಲುಬೆಯ ಧರ್ಮ ಬಹಳ ಜಯಶಾಲಿಯಾಗುವ ಬಗ್ಗೆ ಪ್ರಸ್ತಾಪಿಸಿವೆ. ಆದುದರಿಂದ ಬರಲಿರುವ ಮಸೀಹರ ದೊಡ್ಡ ಕೆಲಸ ಅವರು ಶಿಲುಬೆಯನ್ನು ತುಂಡರಿಸುವರು (ಯಕ್‌ಸಿರುಸ್ಸಲೀಬ) ಎಂದು ಪ್ರಸ್ತಾಪಿಸಲಾಗಿದೆ. ಬರಲಿರುವ ಮಸೀಹರು ಶಿಲುಬೆಯ ಧರ್ಮದ ಪ್ರಾಬಲ್ಯವನ್ನು ಕುಂದಿಸುವರು ಎಂದು ಇದರ ಅರ್ಥವಾಗಿದೆ. ಇದರಲ್ಲಿ ಅಡಕವಾದ ರಹಸ್ಯ ತತ್ವ ಏನೆಂದರೆ ಒಬ್ಬ ಪ್ರವಾದಿಯ ಸಮುದಾಯದಲ್ಲಿ ಕೇಡು ಉಂಟಾದರೆ ಅದನ್ನು ಅದೇ ಪ್ರವಾದಿ ದೂರೀಕರಿಸುವುದು ಆ ಪ್ರವಾದಿಯ ಧಾರ್ಮಿಕ ಕರ್ತವ್ಯವಾಗಿರುತ್ತದೆ. ಯಾವುದಾದರೂ ದೇಶದಲ್ಲಿ ಕಲಹ ಉಂಟಾದರೆ ಹೊರದೇಶಗಳ ಸರಕಾರಗಳಿಗೆ ಆ ಕಲಹವನ್ನು ನಿವಾರಿಸುವ ಕರ್ತವ್ಯ ಇರುವುದಿಲ್ಲ. ಆದರೆ ಅದೇ ದೇಶದ ಸರಕಾರ ಆ ಕಲಹವನ್ನು ದೂರೀಕರಿಸಬೇಕಾದುದು ಅದರ ಕರ್ತವ್ಯವಾಗಿರುತ್ತದೆ. ಲೋಕದ ಅಂತಿಮ ಕಾಲಘಟ್ಟದ ಬಗ್ಗೆ ಅದು ಜಗತ್ತಿನಾದ್ಯಂತ ವ್ಯಾಪಿಸುವ ಕೇಡಿನ ಕಾಲವೆಂದು ಭವಿಷ್ಯ ನುಡಿಯಲಾಗಿದೆ. ಎಲ್ಲ ಸಮುದಾಯಗಳಲ್ಲಿಯೂ ಕೆಡುಕುಗಳು ತಲೆದೋರುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಅಂತಹ ಕಾಲಘಟ್ಟದಲ್ಲಿ ಎಲ್ಲ ಸಮುದಾಯಗಳಲ್ಲಿ ಆಯಾ ಸಮುದಾಯಗಳ ಸ್ಥಾಪಕರಿಗೆ ಹೋಲಿಕೆ ಹೊಂದಿದ ಮಹಾಪುರುಷರು ಪ್ರತಿಯೊಂದು ಸಮುದಾಯದಲ್ಲಿ ಆಗಮಿಸಿ ಸುಧಾರಣೆಯ ಕೆಲಸವನ್ನು ತಮ್ಮ ತಮ್ಮ ಸಮುದಾಯಗಳಲ್ಲಿ ಮಾಡುವ ಆವಶ್ಯಕತೆ ಇತ್ತು. ಆದರೆ ಇಸ್ಲಾಮ್ ಧರ್ಮದ ಮತ್ತು ಖಾತಮುನ್ನಬಿಯ್ಯೀನ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಎಲ್ಲ ವಿಧಗಳ ಆಧ್ಯಾತ್ಮಿಕ ಜಲವನ್ನು ಇಸ್ಲಾಮ್ ಧರ್ಮವು ತನ್ನೊಳಗೆ ಹೀರಿಕೊಂಡಿತು. ಇಸ್ಲಾಮ್ ಧರ್ಮದ ಹೊರಗೆ ಯಾವುದೇ ಸುಧಾರಕ ಆಗಮಿಸುವುದು ಅಸಾಧ್ಯವಾಯಿತು. ಆದುದರಿಂದ ಎಲ್ಲ ಪ್ರವಾದಿಗಳಿಗೆ ಸಾದೃಶ್ಯ ಪುರುಷನಾಗಿ ಒಬ್ಬನೇ ಸುಧಾರಕನನ್ನು ಇಸ್ಲಾಮ್ ಧರ್ಮದಲ್ಲಿ ಕಳುಹಿಸುವುದು ಆವಶ್ಯಕವಾಯಿತು. ಈ ಸುಧಾರಕರ ಕೆಲಸ ಎಲ್ಲ ಸಮುದಾಯಗಳ ಸುಧಾರಣೆ ಮಾಡುವುದಾಗಿದೆ. ಅವರ ಕೆಲಸವನ್ನು ಎರಡು ಭಾಗಗಳಾಗಿ ವಿಭಜಿಸಲಾಯಿತು. ಒಂದು ಮುಸ್ಲಿಮ್ ಸಮುದಾಯದ ಸುಧಾರಣೆ. ಎರಡನೆಯದು ಮುಸ್ಲಿಮೇತ ಸಮುದಾಯಗಳ ಸುಧಾರಣೆ. ಅನ್ಯ ಸಮುದಾಯಗಳ ಸುಧಾರಣೆಯ ಪೈಕಿ ಅತ್ಯಂತ ದೊಡ್ಡ ಕೆಲಸ ಹಝ್ರತ್ ಈಸಾ ಮಸೀಹರ ಸಮುದಾಯದ ಸುಧಾರಣೆ ಆಗಿರುತ್ತದೆ. ಹದೀಸಿನಲ್ಲಿ **"ಯಕ್‌ಸಿರುಸ್ಸಲೀಬ"** (ಅವರು ಶಿಲುಬೆಯನ್ನು ಮುರಿದು ಹಾಕುವರು) ಎಂದು ಹೇಳಿ ಇದನ್ನು ಸ್ಪಷ್ಟಪಡಿಸಲಾಗಿದೆ. ಇದೇ ಕಾರಣದಿಂದ ಆಗಮಿಸಲಿರುವ ಸುಧಾರಕರನ್ನು ಈಸಬ್ನು ಮರ್‌ಯಮ್ ಎಂದು ಹೆಸರಿಸಲಾಯಿತು.

ಇತರ ಸಮುದಾಯಗಳ ಸುಧಾರಣೆಯ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **ವ ಇಝರ್ರುಸುಲು ಉಖ್ಖಿತತ್** – ಲೋಕದ ಅಂತಿಮ ಕಾಲಘಟ್ಟದಲ್ಲಿ ಎಲ್ಲ ಪ್ರವಾದಿಗಳು (ಸಾದೃಶ್ಯ ರೂಪದಲ್ಲಿ ಒಬ್ಬ ಮಹಾನುಭಾವರಲ್ಲಿ) ಜಮಾಯಿಸಲ್ಪಡುವರು. (77: 12).

ಇದರೊಂದಿಗೆ ಮುಸ್ಲಿಮ್ ಸಮುದಾಯದ ಸುಧಾರಣೆ ಸಹ ಅತ್ಯಂತ ಮಹತ್ವಪೂರ್ಣವಾದ ಕೆಲಸವಾಗಿತ್ತು. ಇದನ್ನು ಸೂಚಿಸಲಿಕ್ಕಾಗಿ ಬರಲಿರುವ ಸುಧಾರಕ ಮಹ್‌ದೀ ಎಂದು ಹೆಸರಿಸಲಾಯಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು – **ಅಲ್‌ಖುಲಫಾಯಿ ರ್‍ರಾಶಿದೀನ ಮಹ್‌ದಿಯ್ಯಯೀನ್**. "ನನ್ನ ಖಲೀಫರು ನೇರಮಾರ್ಗದಲ್ಲಿ ಸಾಗುವ ಮಹ್‌ದಿಗಳಾಗಿರುವರು" ಎಂದು ಹೇಳಿರುವರು. (ಅಬೂದಾವೂದ್ ಮತ್ತು ತಿರ್‌ಮಿಧೀ).

ವಾಗ್ದತ್ತ ಇಮಾಮರಾಗಿ ಮುಸ್ಲಿಮರ ಸುಧಾರಕರಾಗಿ ಅಗಮಿಸುವವರು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಎಲ್ಲರಿಗಿಂತಲೂ ಶ್ರೇಷ್ಠ ಖಲೀಫ ಆಗಲಿಕ್ಕಿತ್ತು.*4 ಈಸಬ್ನು ಮರ್‌ಯಮ್ ಎಂಬ ಹೆಸರಿನಲ್ಲಿ ಬೇರೆ ಕೆಲವು ರಹಸ್ಯ ಸೂಚನೆಗಳೂ ಇವೆ. ಆದರೆ ನಿರ್ಮಲ ಹೃದಯರಿಗೆ ಇಷ್ಟರವರೆಗೆ ನೀಡಿದ ವಿವರಣೆ ಸಾಕಷ್ಟಾಗಿರುವುದು.

*

---

*4ಮಹ್‌ದೀ ಮತ್ತು ಮಸೀಹ್ ಒಬ್ಬರ ಎರಡು ಹೆಸರುಗಳಾಗಿವೆ. ಇದರ ಬಗ್ಗೆ ಓದುಗರು ಹೀಗೆ ಯೋಚಿಸಬಹುದು – ಮಹ್‌ದೀ ಬೇರೆ ಮಸೀಹ್ ಬೇರೆ ಎಂದು ನಾವು ಇಷ್ಟರವರೆಗೆ ತಿಳಿದುಕೊಂಡಿದ್ದೆವು. ಅವರಿಬ್ಬರೂ ಒಬ್ಬರಾಗುವುದು ಹೇಗೆ? ಇದಕ್ಕೆ ಉತ್ತರವಾಗಿ ಹೇಳುವುದೇನೆಂದರೆ, ಲೋಕದ ಅಂತಿಮ ಕಾಲಘಟ್ಟದಲ್ಲಿ ಆಗಮಿಸುವ ಸುಧಾರಕರಿಗೆ ಅವರ ಎರಡು ವಿಭಿನ್ನ ಪದವಿಗಳ ಕಾರಣ ಎರಡು ಹೆಸರುಗಳನ್ನು ನೀಡಲಾಗಿದೆ. ಒಂದೇ ಕಾಲದಲ್ಲಿ ಇಬ್ಬರು ಬರುವರೆಂದು ಸಾಮಾನ್ಯ ಮುಸ್ಲಿಮರು ನಂಬುತ್ತಾರೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ "ಲಲ್ ಮಹ್‌ದೀ ಇಲ್ಲಾ ಈಸಾ" – ಈಸಾ ಹೊರತು ಅನ್ಯ ಮಹ್‌ದೀ ಇಲ್ಲ ಎಂದು ಹೇಳಿ ಮಹ್‌ದೀ ಮತ್ತು ಮಸೀಹ್ ಒಬ್ಬರೇ ಎಂದು ಸೂಚಿಸಿರುವರು. ಆದರೆ ಖೇದಕರವೇನೆಂದರೆ ನಮ್ಮ ಮುಸ್ಲಿಮ್ ಸಹೋದರರು ಮುಗ್ಗರಿಸಿ ಬೀಳುವುದರಿಂದ ರಕ್ಷಿಸಲ್ಪಡಲಿಲ್ಲ.

ಅಹ್ಮದಿಯಾ ಮುಸ್ಲಿಮ್ ಜಮಾಅತ್

# ಶಾಂತಿಯ ಹಾದಿ



ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್

ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ

**ಶಾಂತಿರಹಿತ ಲೋಕ:**

ಇಂದು ಲೋಕದಲ್ಲಿ ನಾವು ಬಹಳ ಸಂಘರ್ಷ, ಅಸಮಾಧಾನ ಮತ್ತು ಅಸ್ತವ್ಯಸ್ತತೆಯನ್ನು ಕಾಣುತ್ತಿದ್ದೇವೆ. ಕೆಲವು ದೇಶಗಳಲ್ಲಿ ಜನರು ಪರಸ್ಪರ ಹೋರಾಟ ನಡೆಸುತ್ತಿದ್ದಾರೆ. ಕೆಲವು ದೇಶಗಳಲ್ಲಿ ಜನರು ತಮ್ಮ ಸರಕಾರದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ ಅಥವಾ ತದ್ವಿರುದ್ಧವಾಗಿ ಸರಕಾರ ನಡೆಸುತ್ತಿರುವವರು ತಮ್ಮದೇ ಜನರನ್ನು ಸದೆಬಡಿಯುತ್ತಿದ್ದಾರೆ. ಭೀಕರ ಸಂಘಟನೆಗಳು ತಮ್ಮ ಸ್ವಾರ್ಥಾಭಿಲಾಷೆಗಳನ್ನು ಈಡೇರಿಸಲು ದೇಶಗಳಲ್ಲಿ ಅಸ್ತವ್ಯಸ್ತತೆಯನ್ನೂ ಅರಾಜಕತೆಯನ್ನೂ ಉತ್ತೇಜಿಸುತ್ತಾ ನಿರಪರಾಧಿಗಳಾದ ಮಹಿಳೆಯರನ್ನೂ ಮಕ್ಕಳನ್ನೂ ವೃದ್ಧರನ್ನೂ ಕೊಲ್ಲುತ್ತಿವೆ. ಕೆಲವು ದೇಶಗಳಲ್ಲಿ ರಾಜಕೀಯ ಪಕ್ಷಗಳು ದೇಶದ ಹಿತಕ್ಕೋಸ್ಕರ ಪರಸ್ಪರ ಹೋರಾಡುತ್ತಿವೆ. ಕೆಲವು ದೇಶಗಳು ಅನ್ಯ ದೇಶಗಳ ಸಂಪನ್ಮೂಲಗಳ ಕಡೆಗೆ ಅಸೂಯೆಯಿಂದ ನೋಡುತ್ತಿರುವುದನ್ನೂ ನಾವು ಕಾಣುತ್ತಾ ಇದ್ದೇವೆ. ಲೋಕದ ಮಹಾ ಶಕ್ತಿಶಾಲಿ ದೇಶಗಳು ತಮ್ಮ ಪರಮಾಧಿಕಾರವನ್ನು ಸ್ಥಾಪಿಸಲು ಯಾವ ಕೆಲಸ ಮಾಡಲಿಕ್ಕೂ ಹಿಂಜರಿಯದೆ ಅದಕ್ಕೋಸ್ಕರ ಸ್ಥಿರ ಪ್ರಯತ್ನ ಮುಂದುವರಿಸುತ್ತವೆ.

ಈ ಪರಿಸ್ಥಿತಿಯನ್ನು ಗಮನಿಸಿದ ಬಹಳ ಜನರು ಲೋಕದಲ್ಲಿ ಶಾಂತಿಯು ಸ್ಥಾಪಿತವಾಗಬೇಕೆಂದು ಅಭಿಲಾಷೆ ಹೊಂದಿದವರಾಗಿದ್ದಾರೆ. ಎಲ್ಲ ಧರ್ಮಗಳ ಮಧ್ಯೆ, ಎಲ್ಲ ಜನಾಂಗಗಳ ಮಧ್ಯೆ, ಎಲ್ಲ ದೇಶಗಳ ಮಧ್ಯೆ ಮತ್ತು ಎಲ್ಲ ಜನರ ಮಧ್ಯೆ ಪ್ರೀತಿ, ಕರುಣೆ ಮತ್ತು ಸಹೋದರತೆ ಸ್ಥಾಪಿತವಾಗಬೇಕೆಂದು ಅವರು ತಮ್ಮ ಭಾವನೆಗಳನ್ನೂ ಅಭಿಪ್ರಾಯಗಳನ್ನೂ ಪ್ರಕಟಿಸುತ್ತಾ ಇದ್ದಾರೆ.

**ಲೋಕದ ಬಹುತೇಕ ಜನರು ಶಾಂತಿ ಮತ್ತು ಸಮಾಧಾನ ಸ್ಥಾಪನೆಯಾಗಬೇಕೆಂದು ಅಭಿಲಾಷೆ ಹೊಂದಿರುವರಾದರೂ ಅದಕ್ಕಿರುವ ಪರಿಹಾರ ಮಾರ್ಗವೇನೆಂದು ತಿಳಿದುಕೊಳ್ಳಲು ಆಸಕ್ತಿಯನ್ನು ಹೊಂದಿಲ್ಲ. ಅಥವಾ ಜನರು ಪರಿಹಾರ ಮಾರ್ಗವನ್ನು ಅರಿತು ಸಮಾಧಾನ ಹೊಂದಲು ಬಯಸಿದರೂ ಅವರು ಶಾಂತಿ ಸ್ಥಾಪನೆಗೋಸ್ಕರ ಅವಶ್ಯಕವಾಗಿರುವ ಪ್ರಾಯೋಗಿಕ ಮಾರ್ಗಗಳನ್ನು ಅವಲಂಬಿಸಲು ಸಿದ್ಧರಾಗಿರುವುದಿಲ್ಲ.**

**ದೇವನ ಮಾರ್ಗದರ್ಶನಗಳೇ ಶಾಂತಿ ಸ್ಥಾಪನೆ ಮಾಡಬಲ್ಲವು:**

ಯಾವಾಗಲೂ ಬಹಳ ಮುಖ್ಯವಾಗಿ ಮನವರಿಕೆ ಮಾಡಿಕೊಳ್ಳಬೇಕಾದ ವಿಷಯವೇನೆಂದರೆ, ಮನುಷ್ಯನ ಜ್ಞಾನ ಮತ್ತು ಬುದ್ಧಿಶಕ್ತಿ ಪರಿಪೂರ್ಣವಾಗಿರುವುದಿಲ್ಲ. ವಾಸ್ತವದಲ್ಲಿ ಅವು ಸೀಮಿತವಾಗಿವೆ. ಆದುದರಿಂದ ಮನುಷ್ಯರು ನಿರ್ಧಾರ ಮಾಡುವಾಗ ಅಥವಾ ಯಾವುದಾದರೂ ಯೋಚನೆ ಮಾಡುವಾಗ ಅಧಿಕ ಸಂದರ್ಭಗಳಲ್ಲಿ ಕೆಲವು ಸ್ವಾರ್ಥ ವಿಚಾರಗಳು ಮನುಷ್ಯರ ಮನಸ್ಸನ್ನು ಪ್ರಭಾವಿಸುತ್ತವೆ. ಅವು ಅವನ ನಿರ್ಧಾರಗಳನ್ನು ಆವರಿಸುತ್ತವೆ ಮತ್ತು ಅವನು ತನ್ನ ಸ್ವಾರ್ಥ ಸಾಧನೆಗೋಸ್ಕರ ಪ್ರಯತ್ನಿಸುತ್ತಾನೆ. ಇದರ ಪರಿಣಾಮವಾಗಿ ಪರರಿಗೆ ಅನ್ಯಾಯವುಂಟುಮಾಡುವ ತೀರ್ಮಾನಗಳು ಮಾಡಲ್ಪಡುತ್ತವೆ. ಆದರೆ ದೇವ ನಿಯಮಗಳು ಪರಿಪೂರ್ಣವಾಗಿವೆ. ಸ್ವಾರ್ಥ ಲಾಭ ಮತ್ತು ಅನ್ಯಾಯಕ್ಕೆ ಅದರಲ್ಲಿ ಎಡೆ ಇರುವುದಿಲ್ಲ. ಇದು ಹೀಗೆ ಇರುವುದು ಏಕೆಂದರೆ ದೇವನು ತನ್ನ ಸೃಷ್ಟಿಗಳ ಹಿತವನ್ನು ಮಾತ್ರ ಬಯಸುತ್ತಾನೆ. ದೇವ ನಿಯಮಗಳು ಸಂಪೂರ್ಣವಾಗಿ ನ್ಯಾಯದ ಅಸ್ತಿಭಾರವನ್ನು ಹೊಂದಿವೆ.

**ಲೋಕದ ಜನರು ಈ ಮುಖ್ಯ ಸತ್ಯಾಂಶವನ್ನು ಮನವರಿಕೆ ಮಾಡಿಕೊಳ್ಳುವಾಗ ಲೋಕದಲ್ಲಿ ಸತ್ಯವಾದ ಶಾಶ್ವತ ಶಾಂತಿ ಸ್ಥಾಪನೆಯ ಅಸ್ತಿಭಾರ ಹಾಕಲ್ಪಡುವುದು. ಹೀಗೆ ಮಾಡದಿದ್ದರೆ ಲೋಕದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಗಳನ್ನು ಮಾಡುವುದನ್ನು ನಿರಂತರವಾಗಿ ಮುಂದುವರಿಸಿದರೂ ಅವುಗಳಿಂದ ಯಾವುದಾದರೂ ಪ್ರಯೋಜನಕರವಾದ ಪರಿಣಾಮವು ಉಂಟಾಗಲಾರದು.**

**ಶಾಂತಿಯ ಕಲ್ಪನೆ:**

ವಿವಿಧ ದಾರ್ಶನಿಕ ಚಿಂತನೆಗಳಲ್ಲಿ ಶಾಂತಿಯ ಬಗ್ಗೆ ವಿವಿಧ ಕಲ್ಪನೆಗಳು ಇವೆ. ಆದರೆ ದೇವ ನಿರ್ದೇಶಿತ ಮುಖ್ಯ ಧರ್ಮಗಳಲ್ಲಿ ಶಾಂತಿ ಎಂದರೆ ಕೇವಲ ವೈಯಕ್ತಿಕ ಶಾಂತಿ ಅಲ್ಲ. ಶಾಂತಿ ಅಂದರೆ ಮೊದಲನೆಯದಾಗಿ ಮನುಷ್ಯನು ತನ್ನ ಆಶೆ ಮತ್ತು ಅಭಿಲಾಷೆಗಳನ್ನು ಸಮತೋಲನ ಸ್ಥಿತಿಯಲ್ಲಿ ಇರಿಸಿ ಅನಂತರ ಎರಡನೆಯದಾಗಿ ತನ್ನ ಸುತ್ತಮುತ್ತಲಿನ ಜನರೊಂದಿಗೆ ಶಾಂತಿಯಿಂದ ವರ್ತಿಸಿ ತನ್ನಿಂದ ಅನ್ಯರಿಗೆ ಯಾವುದೇ ಅಪಾಯ ಉಂಟಾಗಲಾರದು ಎಂದು ಖಾತರಿ ನೀಡುವುದಾಗಿದೆ. ಮುಖ್ಯ ಧರ್ಮಗಳಲ್ಲಿ ಶಾಂತಿಯ ಬಗ್ಗೆ ಈ ಕಲ್ಪನೆಯನ್ನು ನೀವು ಕಾಣುವಿರಿ. ಈ ಕಲ್ಪನೆ ಪ್ರಕಾರ ಮನುಷ್ಯನು ತನ್ನ ನೆರೆಹೊರೆಯವನ ಮತ್ತು ಇತರರ ಜೊತೆಗೆ ಶಾಂತಿ ಸಂಬಂಧವನ್ನು ಸ್ಥಾಪಿಸುವ ತನಕ ತಾನು ಸ್ವತಃ ಶಾಂತಿ ಸಮಾಧಾನಗಳನ್ನು ಗಳಿಸಲಾರನು. ಇದು ಇಸ್ಲಾಮ್ ಧರ್ಮ ನೀಡುವ ಸದುಪದೇಶವೂ ಆಗಿದೆ.

**ಶಾಂತಿ ಸ್ಥಾಪನೆ ಬಗ್ಗೆ ಇಸ್ಲಾಮಿನ ಉಪದೇಶಗಳು:**

ಇಸ್ಲಾಮ್ ಶಾಂತಿ ಸ್ಥಾಪನೆಯ ಎರಡು ಭಾಗಗಳನ್ನು ವಿವರಿಸುತ್ತದೆ. ಮೊದನೆಯದಾಗಿ, ಮನುಷ್ಯನು ಸೃಷ್ಟಿಕರ್ತನಾದ ದೇವನೊಂದಿಗೆ ಶಾಂತಿ ಸಂಬಂಧ ಹೊಂದಬೇಕು. ಎರಡನೆಯದಾಗಿ, ಮನುಷ್ಯನು ತನ್ನೊಂದಿಗೆ ಮತ್ತು ಲೋಕದಲ್ಲಿರುವ ಇತರರೊಂದಿಗೆ ಶಾಂತಿ ಸಂಬಂಧ ಸ್ಥಾಪಿಸಬೇಕು. ಪವಿತ್ರ ಖುರ್‌ಆನ್ ಪ್ರಕಾರ ಕೇವಲ ಮನುಷ್ಯನು ಯೋಚಿಸಿ ಮಾಡುವ ಪ್ರಯತ್ನದಿಂದ ಭೂಮಿಯಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಿಲ್ಲ. ಸೃಷ್ಟಿಕರ್ತನಾದ ದೇವನ ಅಸ್ತಿತ್ವವನ್ನು ಮನವರಿಕೆ ಮಾಡಿಕೊಂಡು ಅವನ ಕೈ ಜಗತ್ತಿನ ನಿಸರ್ಗದಲ್ಲಿ ಕಾರ್ಯನಿರತವಾಗಿದೆ ಎಂದು ಗುರುತಿಸುವ ತನಕ ಸೈದ್ಧಾಂತಿಕವಾಗಿ ಕೂಡ ಶಾಂತಿಯ ಕಲ್ಪನೆ ಮಾಡಲು ಸಾಧ್ಯವಾಗದು. ಆದುದರಿಂದ ಮನುಷ್ಯನು ತನ್ನ ಸೃಷ್ಟಿಕರ್ತನನ್ನು ಗುರುತಿಸಿದಾಗ ಅವನು ಇಡುವ ಮೊದಲ ಹೆಜ್ಜೆ ತನ್ನ ಸೃಷ್ಟಿಕರ್ತನೊಂದಿಗೆ ಶಾಂತಿ ಸಂಬಂಧ ಸ್ಥಾಪಿಸುವುದಾಗಿದೆ. ಇದಕ್ಕೆ ಎರಡು ಅರ್ಥಗಳಿವೆ. ಒಂದನೆಯದಾಗಿ, ಮನುಷ್ಯನು ಮತ್ತು ಮನುಷ್ಯನ ಸೃಷ್ಟಿಕರ್ತನ ಮಧ್ಯೆ ಸಂಬಂಧವು ದೂರವಾಗುವಂತಹ ಯಾವುದೇ ಕೆಲಸವನ್ನು ಮನುಷ್ಯನು ಮಾಡಬಾರದು. ಎರಡನೆಯದಾಗಿ, ದೇವನಿಗೆ ಸಂಪೂರ್ಣವಾಗಿ ವಿಧೇಯನಾಗುವುದು. ಆಗ ಎರಡು ಅರ್ಥಗಳು ಒಗ್ಗೂಡುತ್ತವೆ.

**ದೇವನ ಇಚ್ಛೆಗೆ ವಿಧೇಯನಾಗುವುದರ ಮೂಲಕ ಮಾತ್ರ ಮನುಷ್ಯನು ವೈಯಕ್ತಿಕ ಶಾಂತಿಯನ್ನು ಗಳಿಸಬಲ್ಲನು ಎಂಬುದು ಅನುಭವದಿಂದ ವೇದ್ಯವಾದ ಸತ್ಯಾಂಶವಾಗಿದೆ. ಲೋಕದಲ್ಲೆಲ್ಲ ಮನುಷ್ಯರು ಅನುಭವಿಸಿ ಮನವರಿಕೆ ಮಾಡಿಕೊಂಡ ಮಹತ್ತರವಾದ ವಿಚಾರವು ಇದಾಗಿದೆ. ಮಕ್ಕಳು ತಮ್ಮ ತಂದೆ ತಾಯಿಯರೊಂದಿಗೆ ಶಾಂತಮಯ ಸಂಬಂಧ ಹೊಂದಿದ್ದರೆ ಅವರು ತಮ್ಮ ಹೆತ್ತವರ ಆಜ್ಞೆಗಳನ್ನು ತಿರಸ್ಕರಿಸುವುದು ಅಸಾಧ್ಯವಾಗುತ್ತದೆ. ಆದುದರಿಂದ ನೀವು ಶಾಂತಿಯ ಅರ್ಥದ ಬಗ್ಗೆ ತಳಸ್ಪರ್ಶಿಯಾಗಿ ಚಿಂತಿಸುವಿರಾದರೆ, ಶಾಂತಿ ಎಂದರೆ ದೇವೇಚ್ಛೆಗೆ ವಿಧೇಯತೆಯಾಗಿದೆ ಎಂದು ನಿಮಗೆ ತಿಳಿಯುವುದು.**

**ಮಾನವರೆಲ್ಲರೂ ಸಮಾನರು:**

ಎಲ್ಲ ಜನರು ಸಮಾನರಾಗಿ ಜನಿಸಿರುವರು ಎಂದು ಇಸ್ಲಾಮ್ ಧರ್ಮ ಸ್ಪಷ್ಟವಾಗಿ ಹೇಳುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಅವರ ಜೀವಿತ ಕಾಲದ ಕೊನೆಯ ಹಜ್ಜ್ ಸಂದರ್ಭದಲ್ಲಿ ನೀಡಿದ ಪ್ರವಚನದಲ್ಲಿ ಹೀಗೆ ಹೇಳಿದರು. "ಒಬ್ಬ ಅರಬಿ ಅರಬಿಯೇತರನಾದೊಬ್ಬನಿಗಿಂತ ಶ್ರೇಷ್ಠನಲ್ಲ. ಒಬ್ಬ ಅರಬಿಯೇತರನು ಅರಬಿಯಾದವನಿಗಿಂತ ಶ್ರೇಷ್ಠನೂ ಅಲ್ಲ. ಬಿಳಿ ವರ್ಣದವನು ಕಪ್ಪು ವರ್ಣದವನಿಗಿಂತ ಮತ್ತು ಕಪ್ಪು ವರ್ಣದವನು ಬಿಳಿ ವರ್ಣದವನಿಗಿಂತ ಶ್ರೇಷ್ಠನಲ್ಲ."

ಇಸ್ಲಾಮಿನ ತತ್ತ್ವೋಪದೇಶಗಳ ಪ್ರಕಾರ ಎಲ್ಲ ಜನಾಂಗಗಳ ಮತ್ತು ಎಲ್ಲ ಬುಡಕಟ್ಟುಗಳ ಜನರು ಸಮಾನರಾಗಿದ್ದಾರೆ. ಯಾವುದೇ ತಾರತಮ್ಯ ಭಾವನೆ ಮತ್ತು ಪೂರ್ವಗ್ರಹವಿಲ್ಲದೆ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಬೇಕು.

**ವಿವಿಧ ಗುಂಪುಗಳು ಮತ್ತು ಜನಾಂಗಗಳ ಮಧ್ಯೆ ಸೌಹಾರ್ದ ಸಂಬಂಧ ಮತ್ತು ಶಾಂತಿ ಸ್ಥಾಪಿಸಲು ಇದೊಂದು ಕೀಲಿಕೈ ಮತ್ತು ಸುವರ್ಣ ತತ್ತ್ವವಾಗಿದೆ.**

### ಪ್ರವಾದಿಗಳಿಗೆ ಸಮಾನ ಗೌರವ:

ಪವಿತ್ರ ಖುರ್‌ಆನ್ ಪ್ರಕಾರ ಎಲ್ಲ ಪ್ರವಾದಿಗಳು ಸಮಾನರಾಗಿದ್ದಾರೆ. ವಿವಿಧ ಧರ್ಮಗಳ ಮಧ್ಯೆ ಶಾಂತಿ ಸೌಹಾರ್ದ ಸ್ಥಾಪನೆಗೆ ಇದು ಅತ್ಯಾವಶ್ಯಕವಾದ ತತ್ವವಾಗಿದೆ.

**ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ಮಾತ್ರವಲ್ಲ, ಎಲ್ಲ ಪ್ರವಾದಿಗಳನ್ನೂ ನಂಬಲು ಮತ್ತು ಸಂತರಿಗೆ ಗೌರವ ನೀಡಲು ಇಸ್ಲಾಮ್ ಉಪದೇಶಿಸುತ್ತದೆ. ದೇವನ ಪ್ರವಾದಿಗಳು ಮತ್ತು ಸಂತರಲ್ಲಿ ಆದಮ್, ನೂಹ್, ಇಬ್ರಾಹೀಮ್, ಮೂಸಾ, ಯೇಸು, ಶ್ರೀಕೃಷ್ಣ, ಶ್ರೀರಾಮ, ಶ್ರೀಬುದ್ಧ, ಶ್ರೀಮಹಾವೀರ, ಕನ್‌ಫ್ಯೂಶಿಯಸ್, ಝೋರಾಷ್ಟರ್ ಮತ್ತು ಬಾಬಾ ನಾನಕರು ಸೇರಿದ್ದಾರೆ** (ಅವರೆಲ್ಲರ ಮೇಲೆ ಶಾಂತಿ ಸುರಿಯಲ್ಪಡಲಿ).

### ಮಾನವರ ಸೇವೆ:

**ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: "ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ** (ಪರರಿಗೂ) **ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ ದುಷ್ಕೃತ್ಯವನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ."** (ಅಧ್ಯಾಯ 16: ವಚನ 91).

ಪವಿತ್ರ ಖುರ್‌ಆನಿನ ಮೇಲಿನ ವಚನ ಮೂರು ಒಳ್ಳೆಯ ಕೆಲಸಗಳನ್ನೂ ಮೂರು ಕೆಟ್ಟ ಕೆಲಸಗಳನ್ನೂ ಪ್ರಸ್ತಾಪಿಸುತ್ತದೆ.

### ಮೂರು ಒಳ್ಳೆಯ ಕೆಲಸಗಳು:

1) ನ್ಯಾಯ ನಿಷ್ಠೆಗೆ ಬದ್ಧರಾಗಬೇಕು.
2) ಅನ್ಯರಿಗೆ ಔದಾರ್ಯ ತೋರಿಸಬೇಕು.
3) ನಿಕಟ ಬಂಧುಗಳ ಹಾಗೆ ಗಣಿಸಿ ಸಹಾಯ ಪರರಿಗೂ ನೀಡಬೇಕು.

### ಮೂರು ಕೆಟ್ಟ ಕೆಲಸಗಳು:

1) ಅಸಭ್ಯವಾಗಿ ವರ್ತಿಸುವುದು.
2) ದುಷ್ಕೃತ್ಯಗಳನ್ನು ಮಾಡುವುದು.
3) ನಿಯಮೋಲ್ಲಂಘನೆ ನಡೆಸುವುದು.

ಈ ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನು ಸವಿವರವಾಗಿ ಮನವರಿಕೆ ಮಾಡುವಾಗ ನಮಗೆ ತಿಳಿಯುವುದೇನೆಂದರೆ, ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಒಳ್ಳೆಯ ಕೆಲಸಗಳು ಮೂಲಾಧಾರಗಳಾಗಿವೆ. ಕೆಟ್ಟ ಕೆಲಸಗಳು ಸಮಾಜದಲ್ಲಿ ನಾಶ ಮತ್ತು ಶಾಂತಿಭಂಗಕ್ಕೆ ಅಸ್ತಿಭಾರ ಹಾಕುತ್ತವೆ.

ಆದುದರಿಂದ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ನಾವು ಬಯಸುವರಾದರೆ, ನಾವು ಎಲ್ಲ ಕೆಟ್ಟ ಕೆಲಸಗಳನ್ನು ವರ್ಜಿಸಬೇಕು; ಒಳ್ಳೆಯ ಕೆಲಸಗಳನ್ನು ಪ್ರೋತ್ಸಾಹಿಸಬೇಕು ಮತ್ತು ನಿಸ್ವಾರ್ಥತೆಯಿಂದ ವರ್ತಿಸಿ ಅನ್ಯರ ಹಕ್ಕುಗಳನ್ನು ಈಡೇರಿಸಬೇಕು. ಮೇಲರಿಮೆಯ ವಿಷವನ್ನು ತ್ಯಜಿಸಬೇಕು. ಶಕ್ತಿಶಾಲಿ ದೇಶಗಳ ಮತ್ತು ಬಡ ಅಭಿವೃದ್ಧಿಶೀಲ ದೇಶಗಳ ಮಧ್ಯೆ ಇರುವ ತಾರತಮ್ಯವನ್ನು ಅಳಿಸಿಬಿಡಬೇಕು. ಎಲ್ಲ ರೀತಿಯ ಜನಾಂಗೀಯ ಮತ್ತು ವಂಶೀಯ ಪೂರ್ವಗ್ರಹಗಳನ್ನು ಬಿಟ್ಟುಬಿಡಬೇಕು.

**ಈ ನಿಟ್ಟಿನಲ್ಲಿ, ಮಾನವರು ಪರಸ್ಪರ ಒಳಿತನ್ನು ಮಾಡುವುದರಲ್ಲಿ ಮುಂದುವರಿಯುವಂತೆ ಮಾಡಲು ಎಲ್ಲ ಪೂರ್ವಗ್ರಹಗಳನ್ನು ತ್ಯಜಿಸಿ ಉನ್ನತ ನೈತಿಕ ಗುರಿಯನ್ನು ತಲುಪಲು ಪ್ರಯತ್ನಿಸಬೇಕು.**

### ನಿಮ್ಮ ಸೃಷ್ಟಿಕರ್ತನನ್ನು ಗುರುತಿಸಿರಿ:

ಇಂದು ಲೋಕವು ಒಂದು ಜಾಗತಿಕ ಗ್ರಾಮವಾಗಿ ಪರಿಣಮಿಸಿದೆ. ಮಾನವರೆಲ್ಲರೂ ಬಹಳ ಸಮೀಪವಾಗಿ ಹೆಣೆಯಲ್ಪಟ್ಟಿರುವರು. ಎಲ್ಲ ಜನಾಂಗಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಸಂಸ್ಕೃತಿಗಳ ಜನರು ಪ್ರತಿಯೊಂದು ದೇಶದಲ್ಲೂ ಇದ್ದಾರೆ. ಆದುದರಿಂದ ಪ್ರತಿಯೊಂದು ದೇಶದ ನಾಯಕರು ಮತ್ತು ನಾಗರಿಕರು ತಮ್ಮ ದೇಶದಲ್ಲಿರುವ ಎಲ್ಲ ಜನರ ಭಾವನೆಗಳನ್ನು ಗೌರವಿಸಬೇಕು. ರಾಜಕೀಯ ನಾಯಕರು ಮತ್ತು ಅವರ ಸರಕಾರಗಳು ಸತ್ಯ ಮತ್ತು ನ್ಯಾಯವನ್ನು ಸ್ಥಾಪಿಸುವ ವಾತಾವರಣವನ್ನು ಸೃಷ್ಟಿಸಿ ಅವುಗಳಿಗೆ ಅನುಸಾರವಾಗಿ ನಿಯಮಗಳನ್ನು ರೂಪಿಸಬೇಕು. ಜನರಿಗೆ ಕಿರುಕುಳ ಮತ್ತು ಕಷ್ಟ ನೀಡುವ ನಿಯಮಗಳನ್ನು ಜಾರಿಗೊಳಿಸಬಾರದು. ಅನ್ಯಾಯ ಮತ್ತು ದೌರ್ಜನ್ಯಗಳನ್ನು ಕೊನೆಗೊಳಿಸಬೇಕು ಮತ್ತು ನೈಜ ನ್ಯಾಯಪಾಲನೆಗೆ ಪ್ರಯತ್ನಿಸಬೇಕು.

**ಉತ್ತಮವಾದ ರೀತಿಯಲ್ಲಿ ಮೇಲಿನಂತೆ ಮಾಡಲು ಲೋಕವು ತನ್ನ ಸೃಷ್ಟಿಕರ್ತನನ್ನು ಗುರುತಿಸಬೇಕು. ಪ್ರತಿಯೊಂದು ರೀತಿಯ ನಿಷ್ಠೆಯು ದೇವಭಕ್ತಿಗೆ ಸಂಬಂಧಿಸಿರಬೇಕು. ಹೀಗೆ ಸಂಭವಿಸುವುದಾದರೆ, ಅತ್ಯಂತ ಉನ್ನತ ಮಟ್ಟದ ನಿಷ್ಠೆಯನ್ನು ಎಲ್ಲ ದೇಶಗಳ ಜನರು ಹೊಂದಿರುವುದಾಗಿ ನಾವು ನಮ್ಮ ಕಣ್ಣುಗಳಿಂದಲೇ ಕಾಣುವೆವು. ಶಾಂತಿ ಮತ್ತು ಭದ್ರತೆಗೆ ಕೊಂಡೊಯ್ಯುವ ಹೊಸದಾರಿಗಳು ಜಗತ್ತಿನಾದ್ಯಂತ ನಮಗೆ ಕಾಣಿಸುವುವು.**

### ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರ ವಾದ:

ಮಾನವರು ಸೃಷ್ಟಿಕರ್ತನನ್ನು ಮರೆತುಬಿಡುವಾಗ ಸರ್ವಶಕ್ತನಾದ ದೇವನು ತನ್ನ ಪ್ರವಾದಿಗಳನ್ನೂ ಸುಧಾರಕರನ್ನೂ ಕಳುಹಿಸುತ್ತಾ ಇರುವುದು ಸರ್ವಶಕ್ತನಾದ ದೇವನ ನಡೆವಳಿಕೆಯಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಮತ್ತು ಇತರ ಜಾಗತಿಕ ಧರ್ಮಗುರುಗಳು ಅಂತಹ ಒಬ್ಬ ಸುಧಾರಕ ಆಗಮಿಸುವ ಬಗ್ಗೆ ಭವಿಷ್ಯ ನುಡಿದಿದ್ದರು. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ತಾನು ಆ ವಾಗ್ದತ್ತ ಸುಧಾರಕನೆಂದು ವಾದಿಸಿದರು. ತನ್ನ ಆಗಮನದ ಉದ್ದೇಶದ ಬಗ್ಗೆ ಅವರು ಹೀಗೆ ಹೇಳಿರುವರು:

**"ದೇವನು ನನ್ನನ್ನು ಲೋಕಕ್ಕೆ ಕಳುಹಿಸಿದ್ದು ನಮ್ರತೆ, ಪ್ರೀತಿ ಮತ್ತು ದಯೆ ಮೂಲಕ ದಾರಿತಪ್ಪಿದ ಜನರನ್ನು ದೇವನ ಕಡೆಗೂ ಅವನ ಪರಿಶುದ್ಧ ಮಾರ್ಗದರ್ಶನದ ಕಡೆಗೂ ಒಯ್ಯಲು ಮತ್ತು ನನಗೆ ದಯಪಾಲಿಸಲಾದ ದಿವ್ಯ ಪ್ರಕಾಶದ ಮೂಲಕ ಅವರು ನೇರಮಾರ್ಗದಲ್ಲಿ ಚಲಿಸುವಂತೆ ಮಾಡಲಿಕ್ಕಾಗಿದೆ. ದೇವನ ಅಸ್ತಿತ್ವವನ್ನು ದೃಢವಾಗಿ ನಂಬುವಂತೆ ಮಾಡುವಂತಹ ಸಾಕ್ಷ್ಯಾಧಾರಗಳು ಮಾನವನಿಗೆ ಆವಶ್ಯಕವಾಗಿವೆ. ಸರ್ವಶಕ್ತನಾದ ದೇವನ ಅಸ್ತಿತ್ವದಲ್ಲಿ ಮತ್ತು ಅವನು ಅವತೀರ್ಣಗೊಳಿಸಿದ ಮಾರ್ಗದರ್ಶನದಲ್ಲಿ ವಿಶ್ವಾಸವನ್ನು ಹೊಂದದ ಕಾರಣ ಲೋಕದ ಬಹಳ ದೊಡ್ಡದಾದೊಂದು ಭಾಗವು ನಾಶದ ಕಡೆಗೆ ಒಯ್ಯಲ್ಪಡುತ್ತಾ ಇದೆ."** (ದಿ ಎಸ್ಸೆನ್ಸ್ ಆಫ್ ಇಸ್ಲಾಮ್: ಸಂಪುಟ 4, ಪುಟ 111–112)

### ನಮ್ಮ ಆಹ್ವಾನ:

ಅಹ್ಮದಿಯಾ ಜಮಾಅತಿನ ಸ್ಥಾಪಕರು ಬರೆದ ಗ್ರಂಥಗಳನ್ನು ನಮ್ಮ ವೆಬ್‌ಸೈಟಿನಲ್ಲಿ (www.alislam.org) ಸಂದರ್ಶಿಸಿ ಓದಲು ನಾವು ಆಹ್ವಾನಿಸುತ್ತೇವೆ. ಓದುಗರು ಇವುಗಳಿಂದ ಖಂಡಿತ ಪ್ರಯೋಜನ ಪಡೆಯುವರು ಎಂದು ನಾವು ವಾಗ್ದಾನ ನೀಡುತ್ತೇವೆ. ಅವರು ಮಾಡುವ ಅಧ್ಯಯನ ಒಡೆಯನೂ ಸೃಷ್ಟಿಕರ್ತನೂ ಸರ್ವಲೋಕಗಳ ಅಧಿಪತಿಯೂ ಆಗಿರುವ ದೇವನ ಸನ್ನಿಧಿಗೆ ಪ್ರವೇಶಿಸುವಂತೆ ಮಾಡುವುದು.

**ಎಲ್ಲರೊಂದಿಗೆ ಪ್ರೀತಿ**
**ಯಾರೊಂದಿಗೂ ದ್ವೇಷವಿಲ್ಲ**

# ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕಿರು ಪರಿಚಯ:




ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ 213 ದೇಶಗಳಲ್ಲಿ ಶಾಖೆಗಳನ್ನು ಹೊಂದಿರುವ ಧಾರ್ಮಿಕ ಸಂಸ್ಥೆಯಾಗಿದೆ. ಇಸ್ಲಾಮಿನ ಪಂಗಡಗಳಲ್ಲಿ ಅತ್ಯಂತ ಕ್ರಿಯಾಶೀಲವಾದ ಈ ಸಂಘಟನೆ ಅಂದಾಜು 160 ಮಿಲಿಯ ಸದಸ್ಯರನ್ನು ಜಗತ್ತಿನಾದ್ಯಂತ ಹೊಂದಿದೆ. **ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**[ಅ] (1835–1908), 1889ರಲ್ಲಿ ಈ ಜಮಾಅತನ್ನು ಸ್ಥಾಪಿಸಿದರು. ಪಂಜಾಬಿನ ಖಾದಿಯಾನ್ ಎಂಬ ಗ್ರಾಮದಲ್ಲಿ ಜನಿಸಿದ ಅವರು ತಾನು ವಾಗ್ದತ್ತ ಮಹದೀ ಮಸೀಹ್ ಎಂದೂ ವಿವಿಧ ಧರ್ಮಗಳ ಜನರು ಪ್ರತೀಕ್ಷಿಸಿದ್ದ, ಲೋಕದ ಅಂತಿಮ ಕಾಲಘಟ್ಟದ ಉದ್ಧಾರಕನೆಂದೂ ಘೋಷಿಸಿದರು. ಅವರು ಸ್ಥಾಪಿಸಿದ ಜಮಾಅತ್ ಪರಿಶುದ್ಧ ಇಸ್ಲಾಮ್ ಧರ್ಮದ ಮಾದರಿಯಾಗಿದ್ದು ಅದರ ಮೂಲಕ ಶಾಂತಿ, ಜಾಗತಿಕ ಭ್ರಾತೃತ್ವ ಮತ್ತು ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ದೇವನ ಅಸ್ತಿತ್ವದ ಬಗ್ಗೆ ವಿಶ್ವಾಸವನ್ನು ಪ್ರಚಾರಗೊಳಿಸಲಾಗುತ್ತಿದೆ. ಈ ವಿಶ್ವಾಸಾದರ್ಶಗಳೊಂದಿಗೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಜಾಗತಿಕವಾಗಿ ವಿಸ್ತಾರಗೊಳ್ಳುತ್ತಾ ಇದೆ. ಇಸ್ಲಾಮಿನ ಶಾಂತಿ ಸಂದೇಶವನ್ನು ಪ್ರಚಾರಗೊಳಿಸುತ್ತಾ ಇರುವ ಈ ಜಮಾಅತ್ ಮಿಲಿಯಗಟ್ಟಲೆ ರೂಪಾಯಿಗಳನ್ನು ದಾನವಾಗಿ ತನ್ನ ಸದಸ್ಯರಿಂದಲೇ ಪಡೆದು ಸಂತ್ರಸ್ತರ ಸೇವೆಗೋಸ್ಕರ, ಶಾಲೆಗಳ ಮತ್ತು ಆಸ್ಪತ್ರೆಗಳ ನಿರ್ಮಾಣಕ್ಕೋಸ್ಕರ ಖರ್ಚು ಮಾಡುತ್ತಿದೆ. ಶಾಲೆ, ಆಸ್ಪತ್ರೆಗಳಿಗೆ ಪ್ರವೇಶ ಎಲ್ಲರಿಗೂ ಮುಕ್ತವಾಗಿದೆ. ವಿವಿಧ ಧರ್ಮಗಳ ಜನರ ಮಧ್ಯೆ ಸಂವಾದ ಏರ್ಪಡಿಸಿ ಜ್ಞಾನವೃದ್ಧಿಗೂ ಪ್ರಯತ್ನ ನಡೆಸಲಾಗುತ್ತಿದೆ.

# ಖಲೀಫ – ಶಾಂತಿಯ ಪ್ರತಿಪಾದಕ:




ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಐದನೆಯ ಖಲೀಫರಾಗಿ 2003ರಲ್ಲಿ ಆಯ್ಕೆಗೊಂಡರು. ಅವರ ಜೀವಿತವು ಸೇವಾರ್ಪಣೆ, ಸ್ಥಿರತೆ, ಪ್ರಾರ್ಥನೆ ಮತ್ತು ಜಯದ ಪ್ರತಿಬಿಂಬವಾಗಿವೆ. ಏಕ ದೇವನೊಂದಿಗೆ ನಿಕಟ ಸಂಬಂಧ ಸ್ಥಾಪಿಸಿರುವ ಅವರು ಜಮಾಅತಿನ ಜನರು ಯಾವಾಗಲೂ ದೇವನನ್ನು ಸ್ಮರಿಸಬೇಕೆಂದೂ ಎಂದಿಗೂ ನಿರಾಶೆ ಹೊಂದಬಾರದೆಂದೂ ಉಪದೇಶಿಸುತ್ತಾ ಇರುತ್ತಾರೆ. ಅವರು ಪ್ರಾರ್ಥನೆ ಬಗ್ಗೆ ಒತ್ತಿ ಹೇಳಿತ್ತಿರುವುದು ಮತ್ತು ಅವರ ಪ್ರಾರ್ಥನೆಗಳು ಸ್ವೀಕೃತವಾದುದು ಅವರ ಭಕ್ತಿಗೆ ಸಾಕ್ಷ್ಯಗಳಾಗಿವೆ. ಅವರು ಮಾನವರ ಬಗ್ಗೆ ಹೊಂದಿರುವ ಸಹಾನುಭೂತಿ ಅವರನ್ನು ಮತ್ತು ಜಮಾಅತನ್ನು ಆದಿಕಾಲೀನ ಮುಸ್ಲಿಮರ ಹಾಗೆ ಬಡಜನರ ಸೇವೆಗೆ ಸನ್ನದ್ಧರನ್ನಾಗಿ ಮಾಡುತ್ತದೆ. ಅವರ ತ್ಯಾಗಗಳು ಇಸ್ಲಾಮಿನಲ್ಲಿ ಅಂತರ್ಗತವಾಗಿರುವ ತ್ಯಾಗಗಳನ್ನು ಪ್ರತಿಬಿಂಬಿಸುತ್ತವೆ. ಅವರು ಮಾಡುತ್ತಿರುವ ತ್ಯಾಗಭರಿತ ಸೇವೆಯು ಇಸ್ಲಾಮ್, ಪವಿತ್ರ ಖುರ್‌ಆನ್, ಮುಹಮ್ಮದ್ ಪೈಗಂಬರ್[ಸ], ವಾಗ್ದತ್ತ ಮಸೀಹ್[ಅ] ಮತ್ತು ಮಾನವರ ಸೇವೆ ಬಗ್ಗೆ ಅವರಿಗಿರುವ ಹೊಣೆಗಾರಿಕೆಯನ್ನು ಯಾವಾಗಲೂ ಅವರು ಜ್ಞಾಪಕದಲ್ಲಿಟ್ಟಿರುವುದನ್ನು ಪ್ರತಿಬಿಂಬಿಸುತ್ತದೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಅವರು ವಿವಿಧ ಧಾರ್ಮಿಕ ನಾಯಕರಿಗೆ ಮತ್ತು ರಾಜಕೀಯ ನಾಯಕರಿಗೆ ಪತ್ರಗಳನ್ನು ಬರೆದಿದ್ದಾರೆ. ಪೋಪ್ ಬೆನಡಿಕ್ಟ್ – XVI, ಯು.ಎಸ್.ಎ., ಇರಾನ್ ಮತ್ತು ಫ್ರಾನ್ಸಿನ ಪ್ರೆಸಿಡೆಂಟರಿಗೆ, ಕೆನಡ, ಯು. ಕೆ., ಇಸ್ರಾಯೇಲ್, ಚೈನ ಇವುಗಳ ಪ್ರಧಾನಮಂತ್ರಿಗಳಿಗೆ, ಜರ್ಮನಿಯ ಚಾನ್ಸಿಲರ್‌ಗೆ ಮತ್ತು ಸೌದಿ ಅರೇಬಿಯಾದ ದೊರೆಗೆ ಅವರು ಪತ್ರ ಬರೆದಿದ್ದಾರೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ದೇವಸ್ಮರಣೆಯಲ್ಲಿ ಮತ್ತು ಮಾನವರ ಸೇವೆಯಲ್ಲಿ ಖಲೀಫರ ಜೊತೆ ಒಂದುಗೂಡಿದೆ.

## ದೇಶಭಕ್ತಿ ಸ್ವಾತಂತ್ರ್ಯ ಸಮಾನತೆ ಗೌರವ ಶಾಂತಿ

**Contact Details: Ahmadiyya Muslim Jama'at India**

**Head Office**

Shoba Noor-ul-Islam

Qadian, Distt. Gurdaspur, Punjab, Pin:143516

**Branch Office:**

| | |
|---|---|
| No1 3rd Cross, Wilson Garden, Bangalore-560027 | Darussalam, Near Railway Level Crossing Pandeshwar, Mangalore -575001 |

**www.alislam.org /www.ahmadiyyamuslimjamaat.in**

Feedback **www.ahmadiyyamuslimjamaat.in/feedback**

/islaminind /islaminind /+islaminindia /islaminindia /c/islaminindia

official blog: www.lightofislam.in

**National Toll Free Number: 1800 103 2131 (9:00AM to 10:30PM)**

**MUSLIM TELEVISION AHMADIYYA INTERNATIONAL**

**www.mta.tv**

Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna

EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna

# ನೀನು ಮಾಡು – ಮಾಡಬೇಡ

♦ ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)

**ಇಸ್ಲಾಮ್ ಧರ್ಮ ಮಾಡಬೇಕೆಂದು ಹೇಳುವ ಆಜ್ಞೆಗಳನ್ನೂ ಮಾಡಬಾರದೆಂದು ಹೇಳುವ ಆಜ್ಞೆಗಳನ್ನೂ ಚಿಕ್ಕ ವಾಕ್ಯಗಳಲ್ಲಿ ಬರೆಯಲಾಗಿದ್ದು ಸಾಮಾನ್ಯ ವಿದ್ಯಾಭ್ಯಾಸ ಗಳಿಸಿದ ವ್ಯಕ್ತಿ ಅಥವಾ ಐದನೆಯ ಕ್ಲಾಸಿನ ವಿದ್ಯಾರ್ಥಿ ಕೂಡ ಜೀವಿತದ ಬಗ್ಗೆ ಇಸ್ಲಾಮಿನ ಆಜ್ಞೆಗಳನ್ನು ಎಂದರೆ, ಆರೋಗ್ಯ ಪರಿಪಾಲನೆ, ಶಿಷ್ಟಾಚಾರ, ವ್ಯವಹಾರ, ನೈತಿಕ ಗುಣಗಳು ಮತ್ತು ಧಾರ್ಮಿಕ ಕಾರ್ಯಗಳನ್ನು ಸುಲಭವಾಗಿ ಅರಿತುಕೊಳ್ಳಲು ಇದು ಸಹಾಯಕವಾಗಿದೆ. ಇದು 1903ರಲ್ಲಿ ಬರೆದುದಾಗಿದೆ.**

## 1. ಶರೀರ ಮತ್ತು ಆರೋಗ್ಯ ಸಂರಕ್ಷಣೆ

1. ನೀನು ನಿನ್ನ ಶರೀರವನ್ನು ಯಾವಾಗಲೂ ಸ್ವಚ್ಛವಾಗಿಡು.
2. ನೀನು ಮೂತ್ರ ಮತ್ತು ಮಲ ವಿಸರ್ಜನೆಯ ನಂತರ ಯಾವಾಗಲೂ ನೀರಿನಿಂದ ಸ್ವಚ್ಛ ಮಾಡು.
3. ನೀನು ಪ್ರತಿದಿನ ಹಲ್ಲುಜ್ಜು.
4. ನೀನು ನಿನ್ನ ತಲೆಗೂದಲನ್ನು ಕ್ರಮಬದ್ಧವಾಗಿ ಕತ್ತರಿಸು.
5. ನೀನು ನಿನ್ನ ಉಗುರುಗಳನ್ನು ಕತ್ತರಿಸು.
6. ನೀನು ನಿನ್ನ ಮೀಸೆಯನ್ನು ಕತ್ತರಿಸಿ ಅದು ನೀನು ಕುಡಿಯುವ ಪಾನೀಯಗಳಿಗೆ ಸ್ಪರ್ಶಿಸದಂತೆ ಜಾಗ್ರತೆ ವಹಿಸು.
7. ನೀನು ನಿನ್ನ ಅಂಗಾಂಗಗಳನ್ನು ಅನಾವಶ್ಯಕವಾಗಿ ಚಲಾಯಿಸಬೇಡ.
8. ನೀನು ಶುಕ್ರವಾರ ದಿನ ಕಡ್ಡಾಯವಾಗಿ ಸ್ನಾನ ಮಾಡು. ಸಾಧ್ಯವಿದ್ದರೆ ಪ್ರತಿದಿನ ಸ್ನಾನ ಮಾಡು.
9. ನೀನು ನಿನ್ನ ಗಂಡು ಮಕ್ಕಳ ಸುನತಿ ಕರ್ಮ (ಖತ್ನ) ಮಾಡಿಸು.
10. ನೀನು ವ್ಯಾಯಾಮ ಮಾಡುವ ಅಭ್ಯಾಸ ಮಾಡಿಕೊಳ್ಳು.
11. ನೀನು ನಿನ್ನ ಆರೋಗ್ಯದ ಬಗ್ಗೆ ಕಾಳಜಿ ವಹಿಸು. ಸತ್ಯವಿಶ್ವಾಸದ ನಂತರ ಎಲ್ಲದಕ್ಕಿಂತಲೂ ದೊಡ್ಡ ಅನುಗ್ರಹ ಆರೋಗ್ಯವಾಗಿದೆ.
12. ನೀನು ತಲೆಗೂದಲನ್ನು ಬಾಚಣಿಗೆ ಬಳಸಿ ಸರಿಪಡಿಸು.
13. ನೀನು ರೈಲು ಮಾರ್ಗವನ್ನು ದಾಟುವಾಗ ಎರಡು ಭಾಗಗಳಲ್ಲೂ ನೋಡಿ ಯಾವುದೇ ರೈಲುಬಂಡಿ ಬರುತ್ತಾ ಇಲ್ಲ ಎಂದು ಜಾಗ್ರತೆ ವಹಿಸು.
14. ನೀನು ಯಾವಾಗಲೂ ಚುರುಕಾಗಿರು.
15. ನೀನು ಮಾರ್ಗವನ್ನು ದಾಟುವಾಗ ಯಾವುದೇ ವಾಹನ ಬರುತ್ತಾ ಇಲ್ಲ ಎಂದು ನೋಡಿಕೊಳ್ಳು.
16. ನೀನು ಯಾರನ್ನಾದರೂ ಶಿಕ್ಷಿಸುವಾಗ ಮುಖಕ್ಕೆ ಹೊಡೆಯಬೇಡ.
17. ನೀನು ದುರ್ವಾಸನೆಯಿಂದ ನಿನ್ನನ್ನು ರಕ್ಷಿಸಿಕೊಳ್ಳು. ಏಕೆಂದರೆ ಅದು ಶರೀರಕ್ಕೂ ಆತ್ಮಕ್ಕೂ ಹಾನಿಕರವಾಗಿದೆ.
18. ನೀನು ಓದುವಾಗ ಒಂದು ಅಡಿಗಿಂತ ಹತ್ತಿರವಾಗಿ ನಿನ್ನ ಕಣ್ಣಿನ ಸಮೀಪ ಪುಸ್ತಕ ಹಿಡಿಯಬೇಡ.
19. ನೀನು ಪೇಟೆಯಲ್ಲಿ ನಡೆಯುವಾಗ ಕೊಡೆಯನ್ನು ಅತ್ತಿತ್ತ ತಿರುಗಿಸುತ್ತಾ ನಡೆಯಬೇಡ. ನೀನು ಹಾಗೆ ಮಾಡಿದರೆ ಯಾರಿಗಾದರೂ ಗಾಯ ಆಗಬಹುದು.
20. ನೀನು ಮಾರ್ಗದಲ್ಲಿ ಹಣ್ಣುಗಳ ಸಿಪ್ಪೆ ಮೊದಲಾದುವುಗಳನ್ನು ಎಸೆಯಬೇಡ. ಅದರ ಮೇಲೆ ಕಾಲು ಹಾಕಿ ಜನರು ಜಾರಿ ಬೀಳುವುದನ್ನು ತಪ್ಪಿಸು.
21. ನೀನು ಕಣ್ಣು ಕುಕ್ಕುವ ಪ್ರಕಾಶದ ಕಡೆಗೆ ನೋಡಬೇಡ.
22. ನೀನು ಪ್ರತಿದಿನ ಬೆಳಗ್ಗೆ ಕ್ರಮಬದ್ಧವಾಗಿ ನಡೆದು ನಿನ್ನ ಆರೋಗ್ಯವನ್ನು ವರ್ಧಿಸು.
23. ಮೂತ್ರ ಮಲ ವಿಸರ್ಜನೆ ಮಾಡುವುದನ್ನು ಅನಿವಾರ್ಯವಾಗಿ ಹೊರತು ತಡೆದಿಡಬೇಡ.
24. ನಿನಗೆ ಈಜು ಬಾರದಿದ್ದರೆ ಆಳವಾದ ನೀರಿಗೆ ಇಳಿಯಬೇಡ.

25. ನೀನು ಬೆಂಕಿ ಮತ್ತು ಪಟಾಕಿ ಬಳಸಿ ಆಡಬೇಡ.

26. ನೀನು ರೈಲು ಬಂಡಿ ಮತ್ತು ಬಸ್ಸುಗಳ ಕಿಟಕಿಯಿಂದ ತಲೆ ಹೊರಗೆ ಹಾಕಿ ಕುಳಿತುಕೊಳ್ಳಬೇಡ.

27. ನೀನು ಬಗ್ಗಿ ಕುಳಿತುಕೊಳ್ಳಬೇಡ. ಬಗ್ಗಿ ಬರೆಯಲೂ ಬೇಡ.

28. ನೀನು ಪೇಟೆಗಳಲ್ಲಿ ಮುಂದೆ ನೋಡುತ್ತಾ ನಡೆ.

29. ನೀನು ಕುರ್ಚಿಯಲ್ಲಿ ಮತ್ತು ಬೆಂಚಿನಲ್ಲಿ ಕುಳಿತು ಕಾಲುಗಳನ್ನು ಅಲ್ಲಾಡಿಸುವ ಸ್ವಭಾವ ಹೊಂದಬೇಡ.

30. ನಿನ್ನ ಬಾಯಿಯಿಂದ ದುರ್ವಾಸನೆ ಬರುತ್ತಾ ಇಲ್ಲ ಎಂದು ನೋಡಿಕೊಳ್ಳು.

31. ಜನರು ಮೂತ್ರ ವಿಸರ್ಜನೆ ಮಾಡುವ ಸ್ಥಳದಲ್ಲಿ ವುಝು ಮಾಡಬೇಡ.

32. ನಿನ್ನ ಗಡ್ಡ ಮತ್ತು ಮೀಸೆ ಸ್ವಚ್ಛವಾಗಿರಿಸು. ಅವು ಕೆದರಿ ಹೋಗದಂತೆ ನೋಡಿಕೊಳ್ಳು.

33. ನೀನು ರೈಲು ಬಂಡಿಯಲ್ಲಿ ಸಂಚರಿಸುವಾಗ ನಿನ್ನ ಮುಖವನ್ನು ಕಿಟಕಿಯಿಂದ ಇಂಜಿನ್ ಕಡೆಗೆ ತಿರುಗಿಸಿ ನೋಡಬೇಡ. ಹಾಗೆ ಮಾಡಿದರೆ ಇಂಜಿನಿನಿಂದ ಕಲ್ಲಿದ್ದಲು ಹುಡಿ ನಿನ್ನ ಕಣ್ಣಿಗೆ ಬೀಳಬಹುದು.

34. ನೀನು ರೋಗಿಯಾದರೆ ಚಿಕಿತ್ಸೆ ಮಾಡು. ಆರೋಗ್ಯ ಸಿಗುವ ತನಕ ಚಿಕಿತ್ಸೆ ಮುಂದುವರಿಸು.

35. ನೀನು ಸ್ಲೇಟಿನ ಕಡ್ಡಿ, ಗೋಳಿ, ನಾಣ್ಯ, ಕವಡೆ ಮೊದಲಾದುವುಗಳನ್ನು ಬಾಯಿಗೆ ಹಾಕುವುದನ್ನು ಬಿಟ್ಟುಬಿಡು.

36. ಹೇ ಹುಡುಗಿ, ನೀನು ನಿನ್ನ ಸೂಜಿಯನ್ನು ಅಲ್ಲಲ್ಲಿ ಸಿಕ್ಕಿಸಿ ಇಡುವುದನ್ನು ಬಿಡು.

37. ನೀನು ಬೇರೆಯವರು ಉಪಯೋಗಿಸಿದ ಸುರ್ಮದ ಕಡ್ಡಿ ಬಳಸಬೇಡ.

38. ನೀನು ಬೇರೆಯವರು ಹಲ್ಲುಜ್ಜಲು ಉಪಯೋಗಿಸಿದ ಬ್ರಶನ್ನು ಬಳಸಬೇಡ.

39. ನೀನು ಮುಖವನ್ನು ಸ್ವಚ್ಛವಾಗಿಡುವ ಹಾಗೆ ಕೊರಳು ಮತ್ತು ಪಾದಗಳನ್ನು ಸ್ವಚ್ಛವಾಗಿರಿಸು.

40. ನೀನು ಬಾಯಿಯಿಂದ ಶ್ವಾಸೋಚ್ಛ್ವಾಸ ಮಾಡಬೇಡ. ಮೂಗಿನಿಂದ ಶ್ವಾಸೋಚ್ಛ್ವಾಸ ಮಾಡು.

41. ನಿನಗೆ ಸಾಂಕ್ರಾಮಿಕ ರೋಗ ತಗಲಿದರೆ ಅನ್ಯರಿಗೆ ಅದು ಹರಡದ ಹಾಗೆ ಜಾಗ್ರತೆ ವಹಿಸು.

42. ನಿನ್ನ ಬಾಯಿಯೊಳಗೆ ತುತ್ತು ಇದ್ದರೆ ಆಗ ನೀನು ಮಾತನಾಡಬೇಡ.

43. ಹೇ ಅಧ್ಯಾಪಕ! ನಾಯಿಕೆಮ್ಮು, ದಡಾರ, ಚಿಕನ್‌ಫೋಕ್ಸ್, ತುರಿಕೆ ಇರುವ ವಿದ್ಯಾರ್ಥಿಗಳನ್ನು ಅವರು ಆರೋಗ್ಯ ಹೊಂದುವ ತನಕ ಶಾಲೆಗೆ ಬರಲು ಬಿಡಬೇಡ.

44. ಯಾವುದೇ ಮಾದಕ ಪದಾರ್ಥದ ಅಭ್ಯಾಸ ಮಾಡಬೇಡ.

45. ಹೇ ವಿದ್ಯಾರ್ಥಿ, ನಿನಗೆ ಶಾಲೆಯ ಬೋರ್ಡಿನಲ್ಲಿ ಬರೆದುದು ಸರಿಯಾಗಿ ಕಾಣುವುದಿಲ್ಲವಾದರೆ ನೇತ್ರ ತಜ್ಞರನ್ನು ಕಾಣು.

46. ನೀನು ಉಚ್ಚಸ್ವರದಲ್ಲಿ ಓದುವುದನ್ನು ಬಿಟ್ಟುಬಿಡು. ಹೀಗೆ ಮಾಡದಿದ್ದರೆ ನಿನ್ನ ತಲೆಖಾಲಿ ಮತ್ತು ಜನರ ಕಿವಿ ಕಿವುಡು ಆಗುವುದು.

47. ನೀನು ಕಿವಿಯೊಳಗೆ ಪೆನ್ಸಿಲ್, ಪೆನ್ ಅಥವಾ ಗರಿಗಳನ್ನು ಕಿವಿಯನ್ನು ತುರಿಸಲು ಅಥವಾ ಕಿವಿಯಿಂದ ಕೊಳೆಯನ್ನು ತೆಗೆಯಲು ಬಳಸಬೇಡ.

48. ಓದುವಾಗ ತಲೆನೋವುಂಟಾಗುವುದಾದರೆ ಕನ್ನಡಕ ಧರಿಸಲು ಯೋಚಿಸು.

49. ಫಲ ವಸ್ತುಗಳನ್ನೂ ತರಕಾರಿಗಳನ್ನೂ ಪೇಟೆಯಿಂದ ಖರೀದಿಸಿದ ನಂತರ ತೊಳೆಯಲು ಸಾಧ್ಯವಿದ್ದರೆ ತೊಳೆದು ಉಪಯೋಗಿಸು.

50. ನೀನು ನಿನ್ನ ಬಟ್ಟೆಗಳನ್ನು ಮೂತ್ರ ಮತ್ತು ಕೊಳೆಯ ಹನಿಗಳಿಂದ ರಕ್ಷಿಸು.

51. ನೀನು ಸಭೆಗಳಿಗೆ ಹೋಗುವಾಗ ಸುವಾಸನೆ ದ್ರವ್ಯ ಬಳಸು.

52. ನೀನು ಶೂ ಧರಿಸುವಾಗ ಅದನ್ನು ಕೊಡವಿ ಬಳಸು.

53. ನೀನು ನಿನ್ನ ಬಟ್ಟೆಗಳನ್ನು ಬಿಳಿಯಾಗಿಯೂ ಸ್ವಚ್ಛವಾಗಿಯೂ ಇರಿಸು.

54. ನೀನು ನಿನ್ನ ಶೂ ಬಿಸಿಲಿನಲ್ಲಿಡಬೇಡ. ಅದು ಕುಗ್ಗಿ ಬಳಸಲು ಕಷ್ಟವಾಗುವುದು.

55. ನೀನು ಕಣ್ಣಿನ ರವೆರೋಗಿ ಉಪಯೋಗಿಸುವ ಬಟ್ಟೆಗಳನ್ನು ಬಳಸಬೇಡ.

56. ನೀನು ಬೇಸಗೆ ಕಾಲದಲ್ಲಿ ಬರಿತಲೆಯಲ್ಲಿ ನಡೆಯಬೇಡ.

57. ನೀನು ದುರ್ವಾಸನೆ ಹೊರಡಿಸುವ ವಸ್ತುಗಳನ್ನು ತಿಂದು ಸಭೆಗಳಿಗೆ ಹೋಗಬೇಡ. ನೀರುಳ್ಳಿ, ಬೆಳ್ಳುಳ್ಳಿ, ಮೂಲಂಗಿ, ಹಿಂಗು ಮೊದಲಾದುವುಗಳು ಇವುಗಳಲ್ಲಿ ಸೇರಿವೆ.

58. ನೀನು ಊಟ ಮಾಡುವ ಮೊದಲು ಕೈ ತೊಳೆದುಕೊಳ್ಳು.

59. ನೀನು ಊಟ ಮಾಡಿದ ಮೇಲೆ ಕೈ ತೊಳೆದುಕೊಳ್ಳು, ಬಾಯಿ ಮುಕ್ಕಳಿಸಿ ಮುಖವನ್ನು ಸ್ವಚ್ಛವಾಗಿರಿಸು.

60. ನೀನು ರೋಗಿಯಾಗಿರುವಾಗ ಪಥ್ಯ ಮಾಡು. ಹಾಗೆ ಮಾಡಿದರೆ ಬೇಗ ಆರೋಗ್ಯವಂತನಾಗುವೆ.

61. ನೀನು ಯಾವಾಗಲೂ ಬಲಗೈಯಿಂದ ತಿನ್ನು, ನಿನ್ನ ಮುಂಭಾಗದಿಂದ ತಿನ್ನು.

62. ನೀನು ಹುಕ್ಕ, ಬೀಡಿ, ಸಿಗರೇಟು, ತಂಬಾಕು, ಭಂಗಿ, ಗಾಂಜ, ಅಫೀಮು, ಕಳ್ಳು, ಸರಾಯಿ ಮೊದಲಾದುವುಗಳನ್ನು ಎಂದೂ ಉಪಯೋಗಿಸಬೇಡ.

63. ನೀನು ಮದ್ಯವನ್ನು ನಿಷಿದ್ಧವೆಂದು ತಿಳಿದುಕೊಳ್ಳು.

64. ನೀನು ಯಾವಾಗಲೂ ಕೇವಲ ದುಬಾರಿ ಆಹಾರವನ್ನೇ ತಿನ್ನಬೇಡ.

65. ನೀನು ಮಾಂಸಾಹಾರ ಹೆಚ್ಚು ಹೆಚ್ಚಾಗಿ ತಿನ್ನಬೇಡ.

66. ನೀನು ಸಿಹಿ ಪದಾರ್ಥ ಹೆಚ್ಚು ಹೆಚ್ಚಾಗಿ ತಿನ್ನಬೇಡ.

67. ನೀನು ಹುಳಿ ಪದಾರ್ಥ ಹೆಚ್ಚು ಹೆಚ್ಚಾಗಿ ತಿನ್ನಬೇಡ.

68. ನೀನು ಮೆಣಸು ಮತ್ತು ಗರಮ್ ಮಸಾಲೆ ಹೆಚ್ಚು ಹೆಚ್ಚಾಗಿ ಬಳಸಬೇಡ.

69. ನೀನು ಬಹಳ ಬಿಸಿಯಾದ ಆಹಾರ ಪದಾರ್ಥ ತಿನ್ನಬೇಡ. ಬಹಳ ಬಿಸಿಯಾದ ಚಹಾ ಅಥವಾ ಹಾಲು ಕುಡಿಯಬೇಡ.

70. ನೀನು ಚಹಾದ ಅಭ್ಯಾಸ ಮಾಡದೆ ನಿನಗೆ ಸಾಧ್ಯವಿದ್ದರೆ ಹಾಲನ್ನು ಕುಡಿ.

71. ನೀನು ಐಸ್ ಮತ್ತು ಬಹಳ ತಂಪಾದ ನೀರನ್ನು ಆಗಾಗ ಬಳಸಬೇಡ. ಅತ್ಯಂತ ಆವಶ್ಯಕವಾದಾಗ ಬಳಸಬಹುದು.

72. ನೀನು ನೀರು ಕುಡಿಯುವಾಗ ಮೂರು ಸಾರಿ ತಡೆದು ಕುಡಿ. ಕುಳಿತುಕೊಂಡು ಕುಡಿ.

73. ನೀನು ಕತ್ತಲಲ್ಲಿ ತಿನ್ನಬೇಡ, ಕುಡಿಯಬೇಡ.

74. ಬೇಸಗೆ ಕಾಲದಲ್ಲಿ ಮಧ್ಯಾಹ್ನ ಹೊರಗಡೆಯಿಂದ ಬಂದು ಕೂಡಲೇ ನೀರು ಕುಡಿಯಬೇಡ.

75. ನೀನು ನಿನ್ನ ಶರೀರಕ್ಕೆ ಆವಶ್ಯವಿರುವಷ್ಟು ಮಾತ್ರ ತಿನ್ನು.

76. ನೀನು ಮಕ್ಕಳು ಮಣ್ಣನ್ನು ತಿನ್ನುವುದರಿಂದ ತಡೆ.

77. ನೀನು ಹೊಟ್ಟೆ ತುಂಬಾ ತಿನ್ನಬೇಡ.

78. ನೀನು ಆಹಾರ ಪದಾರ್ಥಗಳ ಮೇಲೆ ಊದಬೇಡ. ನೊಣಗಳು ಅದರ ಮೇಲೆ ಕುಳಿತುಕೊಳ್ಳಲು ಬಿಡಬೇಡ.

79. ನೀನು ಕೊಳೆತ ಆಹಾರ ತಿನ್ನಬೇಡ.

80. ನೀನು ಹಣ್ಣಾಗದ ಮತ್ತು ಕೊಳೆತ ಫಲ ವಸ್ತುಗಳನ್ನು ತಿನ್ನಬೇಡ.

81. ನೀನು ಆಹಾರ ಬೇಯಿಸುವ ತಾಮ್ರದ ಪಾತ್ರೆಗಳಿಗೆ ಕಳಾಯಿ ಹಾಕದೆ ಬಳಸಬಾರದು.

82. ನೀನು ನೀರು ತುಂಬಿಸಿಡುವ ಪಾತ್ರೆಯನ್ನು ಶುದ್ಧವಾಗಿರಿಸಬೇಕು.

83. ನೀನು ಆಹಾರವನ್ನು ನಿಧಾನವಾಗಿ ಜಗಿದು ತಿನ್ನಬೇಕು.

84. ನೀನು ಹಸಿವೆಯಿಲ್ಲದಿರುವಾಗ ತಿನ್ನಬೇಡ.

85. ನೀನು ಹಗಲು ರಾತ್ರಿ ಎಂಟು ಗಂಟೆಗಳಿಗಿಂತ ಹೆಚ್ಚು ಕಾಲ ನಿದ್ರಿಸಬೇಡ.

86. ನೀನು ರಾತ್ರಿ ಬೇಗನೆ ನಿದ್ರಿಸು, ಬೆಳಿಗ್ಗೆ ಬೇಗನೆ ಎದ್ದೇಳು.

87. ನೀನು ಬೆನ್ನು ಮೇಲೆ ಮಾಡಿಕೊಂಡು ಮಲಗಬೇಡ.

88. ನೀನು ಮುಖವನ್ನು ಬಟ್ಟೆಯಿಂದ ಮುಚ್ಚಿ ನಿದ್ರಿಸಬೇಡ.

89. ನೀನು ನಿದ್ರಿಸುವ ಮೊದಲು ಮೂತ್ರ ವಿಸರ್ಜನೆ ಮಾಡು.

90. ಮಕ್ಕಳು ಹಾಸಿಗೆಯಲ್ಲಿ ಮೂತ್ರ ವಿಸರ್ಜನೆ ಮಾಡುವ ಅಭ್ಯಾಸ ಮಾಡಿಕೊಳ್ಳದಂತೆ ನೀನು ಜಾಗ್ರತೆ ವಹಿಸು.

91. ನೀನು ನಿನ್ನ ಕೋಣೆಯನ್ನೂ ಮನೆಯನ್ನೂ ಉಪಯೋಗಿಸುವ ವಸ್ತುಗಳನ್ನೂ ಯಾವಾಗಲೂ ಸ್ವಚ್ಛವಾಗಿರಿಸು.

92. ನೀನು ಅಲುಗಾಡುತ್ತಾ ಓದಬೇಡ.

93. ನೀನು ಸುತ್ತುಗೋಡೆ ಇಲ್ಲದ ಎತ್ತರದ ಸ್ಥಳದಲ್ಲಿ ನಿದ್ರಿಸಬೇಡ.

94. ನೀನು ಧೂಳು ಹರಡುವ ಸ್ಥಳದಲ್ಲಿ ಕುಳಿತುಕೊಳ್ಳಬೇಡ.

95. ನೀನು ಅಂಗಳ ಗುಡಿಸುವಾಗ ನೀರು ಚೆಲ್ಲಿ ಧೂಳು ಏಳದಂತೆ ನೋಡಿಕೊಳ್ಳು.

96. ನೀನು ಛಾವಣಿಯ ಮೇಲಿನ ತಡೆಗೋಡೆ ಮೇಲೆ ಕುಳಿತುಕೊಳ್ಳಬೇಡ.

97. ನೀನು ಮಾರ್ಗದಲ್ಲಿ ಮಾಲಿನ್ಯ ಎಸೆಯಬಾರದು. ಮಲಮೂತ್ರ ವಿಸರ್ಜನೆ ಮಾಡಬಾರದು.

98. ನೀನು ಸಂಕುಚಿತ ಶೂ ಬಳಸಬೇಡ.

99. ನೀನು ಕ್ಷಯರೋಗಿ ವಾಸಿಸಿದ ಮನೆಯನ್ನು ಬಾಡಿಗೆಗೆ ಪಡೆಯಬೇಡ.

100. ನೀನು ಗಾಳಿ ಬೆಳಕು ಇಲ್ಲದ, ದುರ್ವಾಸನೆ ಬರುತ್ತಿರುವ ಮತ್ತು ತೇವಭರಿತ ಮನೆಯಲ್ಲಿರಬೇಡ.

101. ಹೇ ಮಹಿಳೆ, ರೈಲುಬಂಡಿ ಮತ್ತು ಮೆಟ್ಟಿಲು ಏರುವಾಗ ಕಷ್ಟವಾಗದ ರೀತಿಯಲ್ಲಿ ಬುರ್ಖಾ ಹೊಲಿಸು.

102. ನೀನು ಚಲಿಸುವ ರೈಲುಬಂಡಿಯನ್ನು ಏರಲು ಪ್ರಯತ್ನಿಸಬೇಡ.

103. ನೀನು ಮಾರ್ಗದಲ್ಲಿ ನಡೆಯುವಾಗ ಪುಸ್ತಕ, ಪತ್ರಿಕೆಗಳನ್ನು ಓದಬೇಡ.

104. ನೀನು ಬರಿತಲೆಯಲ್ಲಿ ನಡೆಯದಿರಲು ಆದಷ್ಟು ಪ್ರಯತ್ನ ಮಾಡು.

105. ನೀನು ಒದ್ದೆ ಬಟ್ಟೆ ಧರಿಸಬೇಡ.

106. ನೀನು ಎಲ್ಲ ಕೆಟ್ಟ ಕೆಲಸಗಳಿಂದ ದೂರವಿರು. ನೀನು ಕೆಟ್ಟ ಕೆಲಸ ಮಾಡಿದರೆ ಆರೋಗ್ಯಕ್ಕೆ ಹಾನಿಕರವಾಗುವುದು.

107. ಹೇ ವಿದ್ಯಾರ್ಥಿ, ನೀನು ಬುದ್ಧಿಯಲ್ಲಿ ಮತ್ತು ವರ್ತನೆಯಲ್ಲಿ ಚಾರಿತ್ರ್ಯವನ್ನು ಕಾಪಾಡು, ಹಾಗೆ ಮಾಡದಿದ್ದರೆ ನಿನ್ನ ನೆನಪಿನ ಶಕ್ತಿ ಮತ್ತು ವಿದ್ಯೆ ಗಳಿಸುವ ಶಕ್ತಿ ನಾಶವಾಗುವುದು.

108. ನೀನು ಅಶ್ಲೀಲ ಸಾಹಿತ್ಯ ಓದಬೇಡ. ಅದು ನಿನ್ನ ಆರೋಗ್ಯವನ್ನು ಕೆಡಿಸುವುದು.

109. ನೀನು ನಿನ್ನ ಶರೀರದ ಮೇಲೆ ಅದರ ಶಕ್ತಿಗಿಂತ ಹೆಚ್ಚು ಭಾರ ಹೊರಿಸಬೇಡ.

110. ನೀನು ಔಷಧಿಯ ಸೀಸೆಯನ್ನು ಲೇಬಲ್ ಹಾಕದೆ ಇಡಬೇಡ.

111. ನೀನು ಗಲ್ಲಿಗಳಲ್ಲೂ ಬಜಾರುಗಳಲ್ಲಿಯೂ ಗೋಡೆಗಳಿಗೆ ಮೈತಾಗಿಸಿಕೊಂಡು ನಡೆಯಬೇಡ. ಎಲ್ಲಿಯಾದರೂ ಕೊಳಕು ನೀರು ಹರಿದು ಬಂದು ನಿನ್ನ ಬಟ್ಟೆಯನ್ನು ಕೊಳೆಯಾಗಿಸಬಹುದು.

112. ನೀನು ನಿನ್ನ ಬಟ್ಟೆ ಬರೆಗಳೊಂದಿಗೆ ನಿನ್ನ ಶೂವನ್ನು ಸಹ ಸ್ವಚ್ಛವಾಗಿಡಬೇಕು. ಏಕೆಂದರೆ ಅದು ನಿನ್ನ ಪೋಷಾಕಿನಲ್ಲಿ ಸೇರಿದೆ.

113. ನೀನು ಮುಚ್ಚಿದ ಕೋಣೆಯಲ್ಲಿ ಅಥವಾ ಸ್ನಾನದ ಕೋಣೆಯಲ್ಲಿ ಬೆಂಕಿ ಉರಿಸಬೇಡ. ಅಲ್ಲಿಂದ ಗ್ಯಾಸ್ ಹೋಗಲು ವ್ಯವಸ್ಥೆ ಇದ್ದರೆ ಮಾತ್ರ ಹಾಗೆ ಮಾಡಬಹುದು.

114. ಹೇ ಮಹಿಳೆ, ನೀನು ಎತ್ತರದ ಹಿಮ್ಮಡಿವುಳ್ಳ ಪಾದರಕ್ಷೆ ಧರಿಸಬೇಡ. ಅದು ಹಾನಿಕರವಾಗಿದೆ.

115. ನೀನು ರೈಲುಬಂಡಿ, ಬಸ್ಸು, ಕಾರು ಮೊದಲಾದುವುಗಳು ನಿಲ್ಲುವ ತನಕ ಕೆಳಗಿಳಿಯಬೇಡ.

116. ನೀನು ರೈಲುಬಂಡಿಯ ಕೆಳಗಡೆಯಿಂದ ಎಂದೂ ದಾಟಿ ಹೋಗಬೇಡ.

* * * * *

# ಅಹ್ಮದಿಯಾ ಜಮಾಅತಿನ ಪ್ರಗತಿ

♦ಪಾಕಿಸ್ತಾನವನ್ನು ಹೊರತು ಪಡಿಸಿ ಲೋಕದಲ್ಲೆಡೆ 288 ಹೊಸ ಜಮಾಅತ್‌ಗಳು ಸ್ಥಾಪಿಸಲ್ಪಟ್ಟಿವೆ.

♦ಹೊಸ 1040 ಸ್ಥಳಗಳಲ್ಲಿ ಅಹ್ಮದಿಯಾ ಬೀಜಗಳು ಬಿತ್ತಲ್ಪಟ್ಟಿವೆ.

♦ಹೊಸ ಜಮಾಅತ್ ಸ್ಥಾಪಿಸಲ್ಪಟ್ಟದ್ದರಲ್ಲಿ ಸಿರ್ರಾಲಿಯೋನ್ ಪ್ರಥಮ ಸ್ಥಾನದಲ್ಲಿದೆ. ಅಲ್ಲಿ 40 ಘಟಕಗಳು ಸ್ಥಾಪಿಸಲ್ಪಟ್ಟಿವೆ.

♦ ನಾಲ್ಕು ಭೂಖಂಡಗಳಲ್ಲಿ ಈ ವರ್ಷ 217 ಮಸೀದಿಗಳು ಸ್ಥಾಪಿಸಲ್ಪಟ್ಟಿವೆ. ಅದರಲ್ಲಿ 124 ಮಸೀದಿಗಳು ಹೊಸದಾಗಿ ನಿರ್ಮಿಸಲ್ಪಟ್ಟವು. 93 ಮಸೀದಿಗಳು ನಮ್ಮ ಸ್ವಾಧೀನಕ್ಕೆ ಬಂದವು. ಹೊಸದಾಗಿ ನಿರ್ಮಿಸಲ್ಪಟ್ಟ ಮಸೀದಿಗಳು ಯು.ಕೆ., ಫ್ರಾನ್ಸ್, ಜರ್ಮನಿ, ನೈಜೀರಿಯಾ, ಇಂಡೋನೇಶಿಯಾ, ಇಂಡಿಯಾ, ಘಾನಾ, ಬೆನಿನ್, ಬುರ್ಕಿನಾಫಾಸೋ, ಐವರಿಕೋಸ್ಟ್, ತಾನ್ಝಾನಿಯಾ, ಉಗಾಂಡಾ, ಕ್ಯಾಮರೂನ್, ಸೆನೆಗಲ್, ಟೋಗೋ, ಝಾಂಬಿಯಾ ಮೊದಲಾದ ದೇಶಗಳಲ್ಲಾಗಿದೆ.

♦ ನಾರ್ವೆಯಲ್ಲಿ ಒಂದು ಚರ್ಚ್‌ನವರು ನಮ್ಮ ಮಸೀದಿ ನಿರ್ಮಾಣವನ್ನು ವಿರೋಧಿಸಿದ್ದರು. ಆದರೆ ಅವರು ಈಗ ತಮ್ಮ ಚರ್ಚ್ ಕಟ್ಟಡವನ್ನು ಅಹ್ಮದಿಯಾ ಜಮಾಅತಿಗೆ ಮಾರಾಟ ಮಾಡಿದ್ದಾರೆ. ಹಾಗೆ ಅದು ಈಗ ಮಸೀದಿಯಾಗಿ ಪರಿವರ್ತಿತವಾಗಿದೆ.

♦ ಜಗತ್ತಿನೆಲ್ಲೆಡೆ 22.7 ಮಿಲಿಯನ್ ಜನರಿಗೆ ಇಸ್ಲಾಮಿನ ಸಂದೇಶವನ್ನು ತಲಪಿಸಲಾಯಿತು. 93,57,000 ಕಿರು ಹೊತ್ತಗೆಗಳನ್ನು ಹಂಚಲಾಯಿತು.

♦93 ದೇಶಗಳಲ್ಲಿ 407 ಪುಸ್ತಕಗಳನ್ನು 42 ಭಾಷೆಗಳಲ್ಲಿ 42,56,659 ಪ್ರತಿಗಳನ್ನು ಪ್ರಕಟಿಸಲಾಯಿತು.

♦24 ಭಾಷೆಗಳಲ್ಲಿರುವ 1,90,000 ಪುಸ್ತಕಗಳನ್ನು ವಿವಿಧ ದೇಶಗಳಿಗೆ ಕಳುಹಿಸಲಾಗಿದೆ.

♦ಯು.ಕೆ.ಯಲ್ಲಿ ರಾಕಿಮ್ ಪ್ರೆಸ್ ಮೂಲಕ 3,60,240 ಪುಸ್ತಕಗಳನ್ನು ಮುದ್ರಿಸಲಾಗಿದೆ.

♦ ಎಂಟು ಆಫ್ರಿಕನ್ ದೇಶಗಳಲ್ಲಿ ಸ್ಥಾಪಿಸಲಾಗಿರುವ ಪ್ರೆಸ್‌ಗಳು 6,12,000 ಪುಸ್ತಕಗಳನ್ನು ಮುದ್ರಿಸಿವೆ.

♦ ಲೋಕದಲ್ಲೆಡೆ 97 ಹೊಸ ಮಿಷನ್ ಹೌಸ್‌ಗಳು ಸ್ಥಾಪಿಸಲ್ಪಟ್ಟಿವೆ.

♦ಮೆಕ್ಸಿಕೋದಲ್ಲಿ ಪ್ರಥಮ ಅಹ್ಮದಿ ಮಸ್ಜಿದ್ ಬೈತುಲ್ ಆಫಿಯತ್ ಸ್ಥಾಪಿಸಲ್ಪಟ್ಟಿದೆ.

♦ ಮಾಲವಿ (**Malavi**)ಯಲ್ಲಿ ಪ್ರಥಮ ಅಹ್ಮದಿ ಮಸ್ಜಿದ್ ಸ್ಥಾಪಿಸಲ್ಪಟ್ಟಿದೆ.

♦ 114 ದೇಶಗಳಲ್ಲಿ 41,111 ಸ್ವಯಂ ಸೇವಕರು ಸೇವೆ ಸಲ್ಲಿಸಿ 52,13,000 ಡಾಲರ್ ಮೊತ್ತವನ್ನು ಉಳಿಸಿದ್ದಾರೆ.

♦ 407 ಪುಸ್ತಕಗಳನ್ನೂ ಕಿರುಹೊತ್ತಗೆಗಳನ್ನೂ 42 ಭಾಷೆಗಳಲ್ಲಿ ರಚಿಸಲಾಗಿದೆ.

♦7540 ಖುರ್‌ಆನ್ ಎಕ್ಸಿಬಿಷನ್ ಮೂಲಕ 3,43,000 ಮಂದಿಗೆ ಸಂದೇಶನ್ನು ತಲಪಿಸಲಾಗಿದೆ.

♦ಹಝ್ರತ್ ವಾಗ್ದತ್ತ ಮಸೀಹರ 16 ಪುಸ್ತಕಗಳ ಹಿಂದಿ ಭಾಷಾಂತರಗಳು ಪ್ರಕಟಿಸಲ್ಪಟ್ಟಿವೆ.

♦ ಅರಬಿಕ್ ಡೆಸ್ಕ್ 145 ಪುಸ್ತಕಗಳನ್ನೂ ಕಿರುಹೊತ್ತಗೆಗಳನ್ನೂ ಪ್ರಕಟಿಸಿದೆ.

♦ವಕ್ಫೆ ನೌ ಯೋಜನೆಯಲ್ಲಿ ಈ ವರ್ಷ 3994 ಮಕ್ಕಳು ಸೇರಿದ್ದಾರೆ. ವಕ್ಫೆ ನೌ ಒಟ್ಟು ಮಕ್ಕಳ ಸಂಖ್ಯೆ 72.932.

♦ ರಿವ್ಯೂ ಆಫ್ ರಿಲೀಜನ್ಸ್ ಈಗ ಫ್ರೆಂಚ್, ಜರ್ಮನ್, ಸ್ಪಾನಿಶ್ ಬಾಷೆಗಳಲ್ಲೂ ಪ್ರಕಟಿಸಲ್ಪಡುತ್ತಿದೆ. ಆ ಮೂಲಕ ಸುಮಾರು 50 ಲಕ್ಷ ಮಂದಿಗೆ ಜಮಾಅತಿನ ಸಂದೇಶ ತಲಪಿದೆ.

♦ಅಲ್‌ಫಝ್ಲ್ ಇಂಟರ್‌ನ್ಯಾಶನಲ್ ವಾರಪತ್ರಿಕೆ ಈಗ ವಾರದಲ್ಲಿ ಎರಡು ಸಲ ಪ್ರಕಟಗೊಳ್ಳುತ್ತಿದೆ.

♦ಕಳೆದ ವರ್ಷ ಸ್ಥಾಪಿತವಾದ 2 ರೇಡಿಯೋ ಸ್ಟೇಶನ್ ಸಹಿತ ಈಗ ಜಮಾಅತಿಗೆ ಲೋಕದಲ್ಲೆಡೆ 27 ರೇಡಿಯೋ ಸ್ಟೇಶನ್‌ಗಳಿವೆ.

♦ 44 ದೇಶಗಳಲ್ಲಿ 11063 ಟಿ.ವಿ ಕಾರ್ಯಕ್ರಮಗಳು (6842 ಗಂಟೆಗಳ ಕಾಲ) ಮತ್ತು 22167 ರೇಡಿಯೋ ಕಾರ್ಯಕ್ರಮಗಳು (18400 ಗಂಟೆಗಳ ಕಾಲ) ಬಿತ್ತರಿಸಲ್ಪಟ್ಟವು.

♦26 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಹ್ಯುಮ್ಯಾನಿಟಿ ಫಸ್ಟ್ ಸಂಸ್ಥೆ 54 ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

♦ಎಂ.ಟಿ.ಎ. ಇಂಟರ್‌ನ್ಯಾಶನಲ್‌ನ 16 ವಿಭಾಗಗಳಲ್ಲಿ ಕಾರ್ಯನಿರತರಾಗಿರುವ 496 ಮಂದಿಯಲ್ಲಿ 275 ಪುರುಷರು ಮತ್ತು 142 ಸ್ತ್ರೀಯರು ಸ್ವಯಂ ಸೇವಕರಾಗಿದ್ದಾರೆ. 24 ಗಂಟೆಗಳ ಕಾಲ ಪ್ರತಿದಿನ 10 ಭಾಷೆಗಳಲ್ಲಿ 8 ಚಾನೆಲ್ ಮೂಲಕ ವಿವಿಧ ಕಾರ್ಯಕ್ರಮ ಬಿತ್ತರಿಸಲ್ಪಡುತ್ತದೆ.

(ಹಝ್ರತ್ ಖಲೀಫತುಲ್ ಮಸೀಹ್ V 7–8–2020ರಂದು ಮಾಡಿದ ಜುಮುಅ ಖುತ್‌ಬ ಮತ್ತು 9–8–2020ರಂದು ಮಾಡಿದ ಯು.ಕೆ. ಜಲ್ಸಾ ಸಾಲಾನ ಭಾಷಣದಿಂದ ಸಂಗ್ರಹಿತ – ಆಧಾರ: ಅಲ್‌ಹಕಮ್ ವಾರಪತ್ರಿಕೆ 14–8–2020).

# ಹಿಂದೂ ಮುಸ್ಲಿಮರ ಭಾವೈಕ್ಯ ಸಮಾವೇಶ

ದಿನಾಂಕ 20–08–2020 ರಂದು ಗದಗ್ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ರಾಜೂರ ಗ್ರಾಮದಲ್ಲಿ ಹಿಂದೂ ಮುಸ್ಲಿಮರ ಭಾವೈಕ್ಯ ಸಮಾವೇಶ ಜರಗಿತು. ಈ ಸಮಾರಂಭದ ಸಾನ್ನಿಧ್ಯವನ್ನು ಶ್ರೀ ವಿಜಯ ಮಹಾಂತೀಶ ಮಹಾ ಸ್ವಾಮಿಗಳು ಸಂಸ್ಥಾನ ಮಠ ಮೈಸೂರು ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಇಸ್ಲಾಂ ಧರ್ಮದ ಪ್ರಾತಿನಿಧ್ಯವನ್ನು ವಹಿಸಿದ ಖಾಜ಼ಿ ಉಸ್ಮಾನ್ ಪಾಷಾ ಸಿಂಧನೂರು ಅಹ್ಮದಿಯಾ ಮುಸ್ಲಿಂ ಜಮಾಅತಿನ ಕರ್ನಾಟಕ ರಾಜ್ಯದ 15 ಜಿಲ್ಲೆಗಳ ಪ್ರಚಾರಕರು ಆಗಿರುವರು.

ಶ್ರೀಗಳು ದೇವನೊಬ್ಬನಿದ್ದಾನೆ, ಸರ್ವಲೋಕಗಳ ಪರಿಪಾಲಕನಾಗಿದ್ದಾನೆ. ನಾವೆಲ್ಲರೂ ಅವನ ಸೃಷ್ಟಿಗಳು. ನಾವೆಲ್ಲರೂ ಪರಸ್ಪರ ಸಹೋದರರಾಗಿರಬೇಕು, ಪರಸ್ಪರ ದ್ವೇಷಿಸಬಾರದು ಎಂದು ಹೇಳಿದರು.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಚಾರಕರಾದ ಖಾಜ಼ಿ ಉಸ್ಮಾನ್ ಪಾಷ ಸಿಂಧನೂರು – ಯಥಾರ್ಥ ಇಸ್ಲಾಂ ಧರ್ಮದ ಪರಿಚಯವನ್ನು ಮಾಡಿಸುತ್ತಾ, ಇಡೀ ವಿಶ್ವದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಸೇವೆಯನ್ನು ವಿವರಿಸುತ್ತಾ ದೇವನೊಬ್ಬ, ನಾಮ ಹಲವು ನಾವೆಲ್ಲರೂ ಅವನ ಸೃಷ್ಟಿಗಳು; ನಾವೆಲ್ಲರೂ ಪರಸ್ಪರ ಸಹೋದರರು; ದೇಶಪ್ರೇಮ ವಿಶ್ವಾಸದ ಒಂದು ಭಾಗ ಎಂದು ಹೇಳಿದರು. ಬುದ್ಧ, ಬಸವ, ಪ್ರವಾದಿ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳ ಪ್ರಕಾರ ನಾವೆಲ್ಲರೂ ಮಾನವರು, ವಸುದೈವ ಕುಟಂಬಕಂ, ಸರ್ವಜನ ಸುಖಿನೋಭವಂತು ಎಂದು ಸಾರಿದರು.

ಇದಲ್ಲದೆ ಬಸವ ತತ್ವದ ಸ್ವಾಮಿಜಿಗಳು, ಇತರ ಸಮಾಜದ ಮುಖಂಡರು ಮತ್ತು ಸುತ್ತ ಮುತ್ತಲಿನ ಗ್ರಾಮಸ್ಥರು ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುತ್ತಾ ಸರಿಸುಮಾರು ಐದುನೂರಕ್ಕಿಂತ ಹೆಚ್ಚಿನ ಜನರು ಹಿಂದೂ ಮುಸ್ಲಿಂ ಭಾವೈಕ್ಯತೆ ಸಮಾವೇಶದಲ್ಲಿ ಭಾಗವಹಿಸಿದ್ದರು. ಅದಲ್ಲದೆ ಬೇರೆ ನಾಲ್ಕು ಜನ ಸ್ವಾಮೀಜಿಗಳು, ಅಲ್ಲಿಯ ಕುರುಬ ಸಮಾಜದ ಸ್ವಾಮಿಜಿಗಳು ಮತ್ತು ಇತರ ಧರ್ಮದ ಸ್ವಾಮೀಜಿಗಳು ಮತ್ತು ಇತರ ಮುಸ್ಲಿಂ ಸಮಾಜದ ಓರ್ವ ಮೌಲ್ವಿ ಸಹ ಅದರಲ್ಲಿ ಭಾಗವಹಿಸಿದ್ದರು.

ಅಲ್‌ಹಮ್ದುಲಿಲ್ಲಾಹ್, ಈ ಹಿಂದೂ ಮುಸ್ಲಿಂ ಭಾವೈಕ್ಯ ಸಮಾವೇಶವು ಅತೀ ವಿಜೃಂಭಣೆಯಿಂದ ಜರಗಿತು. **(ವರದಿ: ಉಸ್ಮಾನ್ ಪಾಷ)**

================================================

**“ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ.”**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

**ಯುಗರಶ್ಮಿಗೆ ಚಂದಾದಾರರಾಗಿರಿ**

ವಾರ್ಷಿಕ ಚಂದಾ : ರೂ. 60/–

ಅಂಚೆ ಮೂಲಕ : ರೂ. 70/–

ಸಂಪರ್ಕಿಸಿರಿ : **99 00 410 789**

ನಿಧನ ವಾರ್ತೆ

# ಜನಾಬ್ ಎಸ್.ಎಂ. ಜಲ್‌ಫರ್ ಸಾದಿಖ್ ಸಾಹಿಬ್



ಶಿವಮೊಗ್ಗದ ನಿವಾಸಿಯಾದ ಜನಾಬ್ ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬ್‌ರವರು 87ನೇ ವಯಸ್ಸಿನಲ್ಲಿ ಆಗಸ್ಟ್ ದಿನಾಂಕ 18ರಂದು ಸಂಜೆ 6:30ಕ್ಕೆ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. 19 ಆಗಸ್ಟ್ ಝುಹರ್ ನಮಾಝ್ ನಂತರ ಅಹ್ಮದಿಯಾ ಖಬರ್ ಸ್ಥಾನದಲ್ಲಿ ದಫನ್‌ಮಾಡಲಾಯಿತು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆ ಜನಾಬ್ ಅಲ್‌ಹಾಜ್ ಮೀರ್ ಕಲೀಮುಲ್ಲಾಹ್ ಸಾಹಿಬ್‌ರವರ ಮೂಲಕ ಪ್ರವೇಶಿಸಿತು. ಜನಾಬ್ ಮೀರ್ ಕಲೀಮುಲ್ಲಾಹ್ ಸಾಹಿಬ್‌ರವರು ಶಿವಮೊಗ್ಗ ಜಮಾಅತಿನ ಮೊದಲ ಅಹ್ಮದಿ ಆಗಿದ್ದರು. ಹೀಗೆ ಅವರು (ಎಸ್. ಎಂ. ಜಲ್‌ಫರ್ ಸಾದಿಖ್ ಸಾಹಿಬ್) ಹುಟ್ಟಿನಿಂದಲೇ ಅಹ್ಮದಿ ಆಗಿದ್ದರು. ಜನಾಬ್ ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬರು 11–06–1933ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಅವರ ತಂದೆಯ ಹೆಸರು ಅಲ್‌ಹಾಜ್ ಮೀರ್ ಕಲೀಮುಲ್ಲಾಹ್ ಸಾಹಿಬ್ ಮತ್ತು ತಾಯಿಯ ಹೆಸರು ಸಫಿಯಾ ಬೀ ಆಗಿತ್ತು. ಅಲ್‌ಹಾಜ್ ಮೀರ್ ಕಲೀಮುಲ್ಲಾಹ್ ಸಾಹಿಬರು ಶಿವಮೊಗ್ಗದಲ್ಲಿ ಠೇಕೆದಾರ್ ಎಂದು ಪ್ರಸಿದ್ಧರಾಗಿದ್ದರು. ಅವರು ಅಹ್ಮದಿಯಾರಾದಾಗ ಕಠಿಣ ವಿರೋಧ ಎದುರಿಸಬೇಕಾಯಿತು.

ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬರು ಮೀರ್ ಕಲೀಮುಲ್ಲಾಹ್ ಸಾಹಿಬರ ಕಿರಿ ಮಗ ಆಗಿದ್ದರು. ಅವರು ಬಹಳ ದೊಡ್ಡ ವಿದ್ವಾಂಸರಾಗಿದ್ದರು. ಮುತ್ತಖಿಯೂ, ನಮಾಝ್, ಉಪವಾಸಗಳನ್ನು ನಿಷ್ಠೆಯಿಂದ ನಿರ್ವಹಿಸುವವರಾಗಿದ್ದರು. ತಹಜ್ಜುದ್ ನಮಾಝ್ ನಿರ್ವಹಿಸುವವರೂ ಪ್ರಾರ್ಥಿಸುವವರೂ ಆಗಿದ್ದರು. ಪವಿತ್ರ ಖುರ್‌ಆನ್, ಹದೀಸ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರವರ ಮತ್ತು ಖಲೀಫರೆಲ್ಲರ ಗ್ರಂಥಗಳನ್ನು ಗಾಢವಾಗಿ ಅಧ್ಯಯನ ಮಾಡಿದವರಾಗಿದ್ದರು. ಅದಲ್ಲದೆ ಅನೇಕ ಅಹ್ಮದಿಯೇತರರ ಗ್ರಂಥಗಳನ್ನು ಅಧ್ಯಯನ ಮಾಡಿದ್ದರು. ಅವರ ಸ್ವಂತ ಲೈಬ್ರರಿಯಲ್ಲಿ ಅಸಂಖ್ಯಾತ ಅಪೂರ್ವ ಗ್ರಂಥಗಳಿದ್ದುವು. ಅನೇಕ ಮುಸ್ಲಿಮ್ ಹಾಗೂ ಹಿಂದೂ ವಿದ್ವಾಂಸರೊಂದಿಗೆ ವಾದ ಪ್ರತಿವಾದ ಮಾಡುತ್ತಿದ್ದರು. ಅವರು ಉತ್ತಮ ಭಾಷಣಗಾರರೂ ವಾದವಿವಾದ ನಿಪುಣರೂ ಆಗಿದ್ದರು. ಶಿವಮೊಗ್ಗದ ಅನೇಕ ಜಮಾಅತಿನ ಸದಸ್ಯರು ಅವರಿಂದ ಬಹಳಷ್ಟು ವಿಷಯಗಳನ್ನು ತಿಳಿದುಕೊಂಡಿದ್ದರು. ಜಮಾಅತಿನ ತರಬೇತಿಗಾಗಿ ಸದಾ ಪ್ರಯತ್ನಿಸುವವರಾಗಿದ್ದರು.

ಅವರು ಜಮಾಅತಿನ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಶಿವಮೊಗ್ಗದ ಮೊದಲ ಖಾಯಿದ್ (ಯುವಜನ ಅಧ್ಯಕ್ಷ) ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾ ಆಗಿದ್ದರು. ಸೆಕ್ರೆಟರಿ ತಲ್‌ಲೀಮ್ ವ ತರ್‌ಬಿಯ್ಯತ್, ಸೆಕ್ರೆಟರಿ ಉಮೂರೆ ಆಮ ಆದ ನಂತರ 1977ರಲ್ಲಿ ಜನಾಬ್ ಸಯ್ಯದ್ ಮದಾರ್ ಸಾಹಿಬ್‌ರವರು ನಿಧನ ಹೊಂದಿದ ನಂತರ ಅವರು ಜಮಾಅತ್ ಅಹ್ಮದಿಯಾ ಶಿವಮೊಗ್ಗದ ಸದರ್ ಆದರು. 1976ರಿಂದ 2003ರವರೆಗೆ 27 ವರ್ಷಗಳ ಸುದೀರ್ಘ ಕಾಲ ಶಿವಮೊಗ್ಗ ಜಮಾಅತಿನ ಸದರ್ (ಅಧ್ಯಕ್ಷ) ಆಗಿ ಸೇವೆ ಸಲ್ಲಿಸಿದರು. ಈ ಸುದೀರ್ಘ ಕಾಲದ ಸೇವೆಯಲ್ಲಿ ಶಿವಮೊಗ್ಗ ಜಮಾಅತಿನಲ್ಲಿ ಅನೇಕ ವಿದ್ವಾಂಸರು ಮೌಲವಿಗಳಾಗಿ ಆಗಮಿಸಿದ್ದರು. ಅವರ ಅಧ್ಯಕ್ಷತೆಯ ಕಾಲದಲ್ಲಿ ಬಹಳಷ್ಟು ಜನರಿಗೆ ತಬ್‌ಲೀಗ್ ಮಾಡುತ್ತಿದ್ದರು. ಜಮಾಅತಿನ ಸದಸ್ಯರ ತರಬೇತಿಯ ಕೆಲಸಗಳನ್ನು ಮಾಡಿದ್ದಾರೆ. ಮರ್‌ಕಝ್‌ನಿಂದ ಆಗಮಿಸುವ ಎಲ್ಲ ವಿದ್ವಾಂಸರೊಂದಿಗೆ ಅವರು ಉತ್ತಮ ಸಂಬಂಧ ಹೊಂದಿದ್ದರು. ವಿಶೇಷವಾಗಿ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹಿಬ್ ಅವರೊಂದಿಗೆ ಆತ್ಮೀಯ ಸಂಬಂಧ ಹೊಂದಿದ್ದರು. ಮಿಯಾಂ ಸಾಹಿಬರು ಶಿವಮೊಗ್ಗಕ್ಕೆ ಆಗಮಿಸಿದಾಗ ಅವರೊಂದಿಗೆ ಬಹಳಷ್ಟು ಸಮಯ ಕಳೆಯುತ್ತಿದ್ದರು. ಅಂದಿನ ಕಾಲದಲ್ಲಿ ಮಿಯಾಂ ಸಾಹಿಬ್ ಆಗಮಿಸಿದಾಗ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು.

ಎಸ್.ಎಂ ಜಲ್‌ಫರ್ ಸಾದಿಖ್ ಸಾಹಿಬರು ಓರ್ವ ಪತ್ನಿ, 10 ಪುತ್ರರು, 2 ಪುತ್ರಿಯರನ್ನು ಮತ್ತು ಮೊಮ್ಮಕ್ಕಳನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಅವರ ಸಂತಾನದಲ್ಲಿ ಅನೇಕರು ಜಮಾಅತಿನ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ ಅವರ ಓರ್ವ ಮೊಮ್ಮಗ ಮೌಲವಿ ತಾರಿಖ್ ಅಹ್ಮದ್ ಇದ್ರೀಸ್ ಸಾಹಿಬರು ಮುಬಲ್ಲಿಗ್ ಆಗಿ ಈಗ ಬದರ್ ಕನ್ನಡ ವಾರಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಇನ್ನೊಬ್ಬ ಮೊಮ್ಮಗ ಜನಾಬ್ ಮೀರ್ ಅಝೀಮ್ ಝಿಕ್ರಿಯ ಸಾಹಿಬರು ಭಾರತದ ನಾಯಿಬ್ ಸದರ್ ಮಜ್‌ಲಿಸ್ ಖುದ್ದಾಮುಲ್ ಅಹ್ಮದಿಯಾ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಹಿರಿಯ ಸೊಸೆ ಅಮತುಲ್ ರಹೀಮ್ ಸಾಹಿಬರವರು ಲಜ್ನಾ ಇಮಾಇಲ್ಲಾಹದ ಜಿಲ್ಲಾಧ್ಯಕ್ಷರಾಗಿದ್ದಾರೆ. ಅವರ ಇನ್ನೋರ್ವ ಮಗ ಮೀರ್ ಅನ್ಸಾರುಲ್ಲಾಹ್ ಸಾಹಿಬರು ಮಜ್ಲಿಸ್ ಅನ್ಸಾರುಲ್ಲಾದ ಜಿಲ್ಲಾ ನಾಝಿಮ್ ಆಗಿದ್ದಾರೆ. ಮತ್ತೋರ್ವ ಮೊಮ್ಮಗ ಮೀರ್ ಮಸೀಉರ್‌ರ್ರಹ್ಮಾನ್ ಸಾಹಿಬರು ಜಿಲ್ಲಾ ಖಾಯಿದ್ ಆಗಿ ಜಮಾಅತಿನ ಸೇವೆ ಸಲ್ಲಿಸುತ್ತಿದ್ದಾರೆ.

ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು, ಮೊಮ್ಮಕ್ಕಳು ಅವರ ಹೆಜ್ಜೆ ಗುರುತಲ್ಲಿ ಚಲಿಸುವ ಭಾಗ್ಯ ಗಳಿಸಲಿ. ಸಾತ್ವಿಕರೂ ಧರ್ಮಕ್ಕೆ ಸೇವೆ ಮಾಡುವವರೂ ಖಿಲಾಫತ್‌ನೊಂದಿಗೆ ಯಾವಾಗಲೂ ನಿಷ್ಠಾವಂತ ಸಂಬಂಧ ಸ್ಥಾಪಿಸುವವರೂ ಆಗಲಿ – ಆಮೀನ್.

**– ಮೌಲವಿ ತಾರಿಖ್ ಅಹ್ಮದ್ ಇದ್ರೀಸ್**

ಓದಿದ್ದು

# ಭೂಮಿಯನ್ನು ಹೋಲುವ ಮತ್ತೊಂದು ಗ್ರಹ ಪತ್ತೆ

**♦3,000 ಜ್ಯೋತಿರ್ವರ್ಷ ಭೂಮಿಗೂ, ಹೊಸ ಗ್ರಹಕ್ಕೂ ಇರುವ ದೂರ**

**♦ 365 ದಿನ ಸೂರ್ಯನ ಒಂದು ಪ್ರದಕ್ಷಿಣೆಗೆ ಭೂಮಿ ತೆಗೆದುಕೊಳ್ಳುವ ಅವಧಿ**

**♦378 ಸೂರ್ಯನನ್ನು ಒಂದು ಸುತ್ತು ಹಾಕಲು ಪ್ಲಾನೆಟ್ ಕೆಒಐ–456.04 ತೆಗೆದುಕೊಳ್ಳುವ ಸಮಯ**

**ಭೂಮಿಯನ್ನು ಹೋಲುವ ಅನ್ಯ ಗ್ರಹಗಳ ಹುಡುಕಾಟದಲ್ಲಿರುವ ಖಗೋಳ ವಿಜ್ಞಾನಿಗಳು, ಇತ್ತೀಚೆಗೆ ಭೂಮಿಯ ವಾತಾವರಣವನ್ನೇ ಹೊಂದಿರುವ ಹೊಸ ಗ್ರಹವೊಂದನ್ನು ಪತ್ತೆ ಮಾಡಿದ್ದಾರೆ. ಅದಕ್ಕೆ 'ಪ್ಲಾನೆಟ್ ಕೆಒಐ–456.04' ಎಂದು ಹೆಸರಿಡಲಾಗಿದೆ. ಇದು ನಾವು ವಾಸಿಸಿರುವ ಭೂಮಿಯಷ್ಟೇ ದೊಡ್ಡದಾಗಿದ್ದು, ಭೂಮಿಯಿಂದ 3,000 ಜ್ಯೋತಿರ್ವರ್ಷಗಳಷ್ಟು ದೂರವಿದೆ.**

### ಏನಿದರ ವಿಶೇಷ?

ಸದ್ಯಕ್ಕೆ ಲಭ್ಯವಿರುವ ಮಾಹಿತಿಯ ಪ್ರಕಾರ, 'ಪ್ಲಾನೆಟ್ ಕೆಒಐ–456.04' ಮತ್ತು ನಮ್ಮ ಭೂಮಿ, ಸೂರ್ಯನಿಂದ ಒಂದೇ ಅಂತರದಲ್ಲಿವೆ. ಆದರೂ, ಸೂರ್ಯನನ್ನು ಒಂದು ಸುತ್ತು ಹಾಕಲು ನಮ್ಮ ಭೂಮಿ 365 ದಿನ ತೆಗೆದುಕೊಂಡರೆ, 'ಪ್ಲಾನೆಟ್ ಕೆಒಐ–456.04' ಗ್ರಹವು 378 ದಿನ ತೆಗೆದುಕೊಳ್ಳುತ್ತದೆ. ಆ ಗ್ರಹವೂ ಕೂಡ ಭೂಮಿಯಂತೆಯೇ, ಸೂರ್ಯನಿಂದ ಬರುವ ಬೆಳಕಿನ ಶೇ.93ರಷ್ಟನ್ನು ಪಡೆದುಕೊಳ್ಳುತ್ತದೆ. ಅದರೆ ಅದರ ಮೇಲಿನ ವಾತಾವರಣ ಭೂಮಿಯನ್ನು ಹೋಲುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ. 2026ರಲ್ಲಿ ಉಡಾವಣೆಗೊಳ್ಳಲಿರುವ ನಾಸಾದ ಜೇಮ್ಸ್ ವೆಬ್ ಸ್ಪೇಸ್ ಟೆಲಿಸ್ಕೋಪ್ ಹಾಗೂ ಇಎಸ್ಎ ಪ್ಲಾಟೋ ಸ್ಪೇಸ್ ಟೆಲಿಸ್ಕೋಪ್‌ಗಳಿಂದ ಹೆಚ್ಚಿನ ಅಧ್ಯಯನ ಸಾಧ್ಯವಾಗಬಹುದು.

### ನಾಲ್ಕನೇ ಗ್ರಹ

ಇತ್ತೀಚೆಗೆ, ಭೂಮಿಯಷ್ಟೇ ದೊಡ್ಡದಾಗಿರುವ ಸೂಪರ್ ಅರ್ತ್, ಕೆಪ್ಲರ್–452ಬಿ ಎಂಬ ಗ್ರಹಗಳನ್ನು ಪತ್ತೆ ಹಚ್ಚಲಾಗಿತ್ತು. ಅದರ ಬೆನ್ನಲ್ಲೇ ಪೋಕ್ಸಿಮಾ ಬಿ ಎಂಬ ಮತ್ತೊಂದು ಗ್ರಹ ಪತ್ತೆಯಾಗಿತ್ತು. ಈಗ, 'ಪ್ಲಾನೆಟ್ ಕೆಒಐ–456.04' ಗ್ರಹವನ್ನು ಪತ್ತೆ ಹಚ್ಚಲಾಗಿದೆ.

**(ಉದಯವಾಣಿ 9–6–2020)**

=======================================================

# ಖಗೋಳಾಸಕ್ತರಿಗೆ ಹಬ್ಬ

### 20 ದಿನ ನಿಯೋವೈಸ್ ಧೂಮಕೇತುವಿನ ದರ್ಶನ

ಭಾರತದ ಖಗೋಳಾಸಕ್ತರಿಗೆ ಮುಂದಿನ ಕೆಲವು ದಿನಗಳು ಕಣ್ಣಿಗೆ ಹಬ್ಬ. ಏಕೆಂದರೆ ಇದೇ ಮಂಗಳವಾರದಿಂದ 20 ದಿನಗಳ ಕಾಲ ನಿಯೋವೈಸ್ ಧೂಮಕೇತುವನ್ನು (ಸಿ/2020 ಎಫ್ 3) ಕಣ್ತುಂಬಿಕೊಳ್ಳುವ ಅವಕಾಶ ಸಿಕ್ಕಿದೆ. ಪ್ರತಿ ದಿನ ಸುಮಾರು 20 ನಿಮಿಷಗಳ ಕಾಲ ಈ ಅದ್ಭುತ ಆಕಾಶಕಾಯವು ಗೋಚರಿಸಲಿದ್ದು, ಬರಿಗಣ್ಣಿನಿಂದಲೇ ಇದನ್ನು ವೀಕ್ಷಿಸಲು ಸಾಧ್ಯವಿದೆ.

### ಭಾರತದಲ್ಲಿ ಗೋಚರ

ಆಗಸದ ವಾಯವ್ಯ ಭಾಗದಲ್ಲಿ ಜು. 14ರಿಂದ ಮುಂದಿನ 20 ದಿನಗಳವರೆಗೆ ಇದು ಗೋಚರಿಸಲಿದೆ. ಸೂರ್ಯಾಸ್ತವಾದ ಬಳಿಕ ಸುಮಾರು 20 ನಿಮಿಷಗಳ ಕಾಲ ಇದು ಕಾಣಿಸಲಿದ್ದು, ಬರಿಗಣ್ಣಿನಿಂದಲೇ ವೀಕ್ಷಿಸಬಹುದು. ಜುಲೈ 22–23ರಂದು ಭೂಮಿಯ ಅತ್ಯಂತ ಸಮೀಪಕ್ಕೆ ಧೂಮಕೇತು ಬರಲಿದೆ ಎಂದು ಒಡಿಶಾ ಪ್ಲಾನೆಟೋರಿಯಂನ ಉಪ ನಿರ್ದೇಶಕ ಡಾ। ಸುಭೇಂದು ಪಾಟ್ನಾಯಕ್ ಹೇಳಿದ್ದಾರೆ.

### ಪತ್ತೆಯಾಗಿದ್ದು ಯಾವಾಗ?

ನಾಸಾದ ನಿಯೋವೈಸ್ (ನಿಯರ್ ಅರ್ಥ್ ವೈಡ್‌ಫೀಲ್ಡ್ ಇನ್‌ಫ್ರಾರೆಡ್ ಸರ್ವೇ ಎಕ್ಸ್‌ಪ್ಲೋರರ್) ಟೆಲಿಸ್ಕೋಪ್ ಕಳೆದ ಮಾರ್ಚ್ 27ರಂದು ಈ ಧೂಮಕೇತುವನ್ನು ಪತ್ತೆಹಚ್ಚಿತ್ತು.

### ಆಗಸ್ಟ್‌ನಲ್ಲಿ ಕಣ್ಮರೆ

ಆಗಸ್ಟ್ ತಿಂಗಳು ಸಮೀಪಿಸಿದಂತೆ ಧೂಮಕೇತು ಕಣ್ಮರೆಯಾಗಲಿದ್ದು, ಅನಂತರ ಅದು ಬರಿಗಣ್ಣಿಗೆ ಕಾಣ ಸಿಗುವುದಿಲ್ಲ. ಬೈನಾಕ್ಯುಲರ್ ಅಥವಾ ದೂರದರ್ಶಕದ ಮೂಲಕ ಇದು ಸ್ವಲ್ಪ ಮಟ್ಟಿಗೆ ಗೋಚರಿಸಬಹುದು.

### ಈಗ ಎಲ್ಲಿದೆ?

ಪ್ರಸ್ತುತ ಈ ಧೂಮಕೇತು ಭೂಮಿಯಿಂದ 20 ಕೋಟಿ ಕಿ.ಮೀ. ದೂರದಲ್ಲಿ ಪರಿಭ್ರಮಿಸುತ್ತಿದೆ. ಜು. 22ರಂದು ಅದು ಭೂಮಿಯ ಸಮೀಪಕ್ಕೆ ಅಂದರೆ 10.30 ಕೋಟಿ ಕಿ.ಮೀ.ಗಳ ಹತ್ತಿರಕ್ಕೆ ಆಗಮಿಸಲಿದ್ದು, ಆಗ ಅದು ಸ್ಪಷ್ಟವಾಗಿ ಗೋಚರಿಸಲಿದೆ.

| | |
|---|---|
| **♦ ಯಾವಾಗ ಗೋಚರ** | **ಜು. 14ರಿಂದ 20 ದಿನಗಳ ಕಾಲ** |
| **♦ ಎಷ್ಟು ನಿಮಿಷ ಕಾಣಿಸುತ್ತೆ?** | **20 ನಿಮಿಷ** |
| **♦ ಮುಂದೆ ಈ ಧೂಮಕೇತುವಿನ ದರ್ಶನ** | **6,800 ವರ್ಷಗಳ ನಂತರ** |

**(ಉದಯವಾಣಿ 13–7–2020)**

## ನಕ್ಷತ್ರಪುಂಜದಿಂದ ಹೊಮ್ಮಿದ ಬೆಳಕು

**♦ ಆ್ಯಸ್ಟ್ರೋಸ್ಯಾಟ್ ಭಾರತದ ಮೊದಲ ಬಹು-ತರಂಗಾಂತರ ಉಪಗ್ರಹ ♦ ಇದರಲ್ಲಿ 5 ವಿಶಿಷ್ಟವಾದ ಎಕ್ಸ್‌ರೇ ಮತ್ತು ಅಲ್ಟ್ರಾವಯಲೆಟ್ ದೂರದರ್ಶಕಗಳಿವೆ ♦ ತಾರಾಪುಂಜದಿಂದ ಹೊರಸೂಸುವ ಅತಿನೇರಳೆ ಕಿರಣಗಳನ್ನು ಇದು ಪತ್ತೆ ಹಚ್ಚಿದೆ ♦ ಭೂಮಿಯಿಂದ 9.3 ಶತಕೋಟಿ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದೆ ಈ ನಕ್ಷತ್ರಪುಂಜ ♦ 2016ರ ಅಕ್ಟೋಬರ್‌ನಲ್ಲಿ ನಡೆದಿತ್ತು ಬೆಳವಣಿಗೆ. 28 ಗಂಟೆಗಳಿಗೂ ಹೆಚ್ಚು ಕಾಲ ಅತಿನೇರಳೆ ಕಿರಣ ಹೊರ ಸೂಸುತ್ತಿದ್ದ ತಾರಾಪುಂಜ.**

**'ಈ ಬ್ರಹ್ಮಾಂಡದ ಕಗ್ಗತ್ತಲ ಯುಗ ಅಂತ್ಯವಾದದ್ದು ಯಾವಾಗ ಮತ್ತು ಅಲ್ಲಿ ಬೆಳಕಿನ ಕಿರಣ ಮೂಡಿದ್ದು ಯಾವಾಗ ಎಂಬುದರ ಸುಳಿವು ನೀಡುವಲ್ಲಿ ಈ ಆವಿಷ್ಕಾರವು ನೆರವಾಗಲಿದೆ. ಬೆಳಕಿನ ಆರಂಭಿಕ ಮೂಲವನ್ನು ಪತ್ತೆಹಚ್ಚುವುದು ಕಷ್ಟವಾದರೂ ಇಂಥದ್ದೊಂದು ಮಹತ್ವದ ಸಾಧನೆ ಮಾಡಿದವರನ್ನು ಅಭಿನಂದಿಸುತ್ತೇನೆ.**

**ಡಾ। ಸೋಮಕ್ ರಾಯ್ ಚೌಧರಿ, ಐಯುಸಿಎಎ ನಿರ್ದೇಶಕ**

### ಆ್ಯಸ್ಟ್ರೋಸ್ಯಾಟ್‌ನಿಂದ ಅಪರೂಪದ ಆವಿಷ್ಕಾರ

ಭಾರತದ ಮೊದಲ ಬಹು-ತರಂಗಾಂತರ ಉಪಗ್ರಹವಾದ ಆ್ಯಸ್ಟ್ರೋಸ್ಯಾಟ್, ಭೂಮಿಯಿಂದ 9.3 ಶತಕೋಟಿ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿರುವ ತಾರಾಪುಂಜವೊಂದರಲ್ಲಿ ಅತಿನೇರಳೆ ಕಿರಣಗಳು ಹೊರಹೊಮ್ಮುತ್ತಿರುವುದನ್ನು ಪತ್ತೆ ಹಚ್ಚಿದೆ. ಈ ಮೂಲಕ ಚೆನ್ನೈಯ ಇಂಟರ್ – ಯುನಿವರ್ಸಿಟಿ ಸೆಂಟರ್ ಫಾರ್ ಆಸ್ಟ್ರಾನಮಿ ಆ್ಯಂಡ್ ಆ್ಯಸ್ಟ್ರೋಫಿಸಿಕ್ಸ್ (ಐಯುಸಿಎಎ) ಹೊಸ ಮೈಲುಗಲ್ಲು ಸಾಧಿಸಿದೆ.

### ಬೆಳಕಿನ ಪುಂಜ

ಎಯುಡಿಎಫ್‌ಎಸ್01 ಎಂಬ ನಕ್ಷತ್ರ ಪುಂಜದಿಂದ ಭಾರೀ ಪ್ರಮಾಣದಲ್ಲಿ ಅತಿನೇರಳೆ ಕಿರಣಗಳು ಹೊರಹೊಮ್ಮುತ್ತಿರುವುದನ್ನು ಈ ಉಪಗ್ರಹ ಪತ್ತೆಹಚ್ಚಿದೆ. ಈ ನಕ್ಷತ್ರ ಪುಂಜವು ಭೂಮಿಯಿಂದ 9.3 ಶತಕೋಟಿ ಜ್ಯೋತಿರ್ವರ್ಷಗಳಷ್ಟು ದೂರದಲ್ಲಿದೆ. ಐಯುಸಿಎಎ ಸಂಸ್ಥೆಯ ಸಹಾಯಕ ಪ್ರೊಫೆಸರ್ ಡಾ। ಕನಕ್ ಸಾಹಾ ನೇತೃತ್ವದ ತಂಡವು ಈ ಸಾಧನೆ ಮಾಡಿದ್ದು, ತಂಡದಲ್ಲಿ ಭಾರತ, ಫ್ರಾನ್ಸ್, ಸ್ವಿಜರ್ಲೆಂಡ್, ಯುಎಸ್‌ಎ, ಜಪಾನ್ ಮತ್ತು ನೆದರ್ಲೆಂಡ್‌ನ ವಿಜ್ಞಾನಿಗಳಿದ್ದಾರೆ.

### 2 ವರ್ಷ ಬೇಕಾಯಿತು

2016ರ ಅಕ್ಟೋಬರ್ ತಿಂಗಳಲ್ಲೇ ವಿಜ್ಞಾನಿಗಳ ತಂಡವು ಇದನ್ನು ಪತ್ತೆ ಹಚ್ಚಿತಾದರೂ ಈ ಕಿರಣಗಳು ಹೊರಬರುತ್ತಿರುವುದು ಅದೇ ನಕ್ಷತ್ರಪುಂಜದಿಂದ ಎಂಬುದನ್ನು ಸಾಬೀತುಪಡಿಸಲು 2 ವರ್ಷಗಳು ಹಿಡಿದವು. ಭೂಮಿಯ ವಾತಾವರಣವು ಅತಿನೇರಳೆ ವಿಕಿರಣಗಳನ್ನು ಹೀರಿಕೊಳ್ಳುವ ಕಾರಣ, ಬಾಹ್ಯಾಕಾಶದಿಂದಲೇ ಅದನ್ನು ಅವಲೋಕಿಸುವ ಅಗತ್ಯವಿತ್ತು. ಅಲ್ಲದೆ, ಈ ಹಿಂದೆ ನಾಸಾದ ಹಬಲ್ ಟೆಲಿಸ್ಕೋಪ್ ಕೂಡ ಇದೇ ತಾರಾಪುಂಜದಿಂದ ವಿಕಿರಣ ಹೊರಸೂಸುತ್ತದೆಯೇ ಎಂಬುದನ್ನು ತಿಳಿಯಲು ಪ್ರಯತ್ನಿಸಿ, ವಿಫಲವಾಗಿತ್ತು. ಹೀಗಾಗಿ, ಆ್ಯಸ್ಟ್ರೋಸ್ಯಾಟ್ ಇಂಥದ್ದೊಂದು ಸಾಧನೆ ಮಾಡಿದೆ ಎಂಬುದನ್ನು ಅಂತಾರಾಷ್ಟ್ರೀಯ ಸಮುದಾಯಕ್ಕೆ ಮನವರಿಕೆ ಮಾಡಲು ಸ್ವಲ್ಪ ಸಮಯ ತಗಲಿತು ಎಂದು ಸಾಹಾ ಹೇಳಿದ್ದಾರೆ. **(ಉದಯವಾಣಿ 26-8-2020)**

==========================================================

## ಅಂತ್ಯಸಂಸ್ಕಾರದ ಬೆನ್ನಲ್ಲೇ ಸಮಾಧಿಯಿಂದ ಹೆಣ್ಣುಮಗುವಿನ ಮೃತದೇಹ ಕಿತ್ತು ರಸ್ತೆಗೆಸೆದ ಧರ್ಮಾಂಧರು!

ಢಾಕಾ: ಮುಸ್ಲಿಂ ಧರ್ಮದ ಕೆಲ ಮತಾಂಧರು ಹೆಣ್ಣು ಮಗುವಿನ ಮೃತದೇಹವನ್ನು ಸಮಾಧಿಯಿಂದ ತೆಗೆದು ರಸ್ತೆ ಬದಿಯಲ್ಲಿ ಬಿಸಾಡಿರುವ ಅಮಾನವೀಯ ಘಟನೆ ಬಾಂಗ್ಲಾದೇಶದಲ್ಲಿ ಬೆಳಕಿಗೆ ಬಂದಿದೆ.

ಮೂರು ದಿನದ ಮಗು ಅಹ್ಮದಿ ಮುಸ್ಲಿಂ ಆಗಿದ್ದು, ಬಾಂಗ್ಲಾದೇಶದ ಬ್ರಹ್ಮನ್‌ಬೇರಿಯಾದ ಪೂರ್ವ ಜಿಲ್ಲೆಯ ಘತುರಾದ ಸ್ಮಶಾನದಲ್ಲಿ ಕೆಲವೇ ಗಂಟೆಗಳ ಕಾಲ ಸಮಾಧಿ ಮಾಡಲಾಗಿತ್ತು. ಇದರ ಬೆನ್ನಲ್ಲೇ ಮತಾಂಧರು ಮೃತದೇಹ ಹೊರತೆಗೆದಿದ್ದಾರೆ.

ಪ್ರಮುಖ ಮುಸ್ಲಿಂ ನಾಯಕರು ಅಹ್ಮದಿ ಮುಸ್ಲಿಂರನ್ನು ನಾಸ್ತಿಕರು ಎಂದು ಪರಿಗಣಿಸಿದ್ದಾರೆ. ಏಕೆಂದರೆ ಅಹ್ಮದಿಯರು ಮುಸ್ಲಿಂ ಸಂಸ್ಥಾಪಕನನ್ನು ಕೇವಲ ಪ್ರವಾದಿ ಎಂದು ನೋಡುತ್ತಾರೆ ಎಂಬುದು ಅವರ ನಂಬಿಕೆ.

ಈ ಬಗ್ಗೆ ಮಾತನಾಡಿರುವ ಸ್ಥಳಿಯ ಆಹ್ಮದಿ ನಾಯಕ ಎಸ್.ಎಂ. ಸೆಲಿಮ್, ಮುಖ್ಯವಾಹಿನಿಯ ಮುಸ್ಲಿಂ ಮತಾಂಧರು ಮಗುವಿನ ಮೃತದೇಹವನ್ನು ಸಮಾಧಿಯಿಂದ ಹೊರತೆಗೆದರು ಎಂದು ಆರೋಪಿಸಿದ್ದಾರೆ.

ಮಗು ಮಾಡಿದ ತಪ್ಪೇನೆಂದರೆ ಅವಳು ಅಹ್ಮದಿ ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ್ದು ಎಂದು ಸೆಲೀಮ್ ತಿಳಿಸಿದ್ದಾರೆ. ಚಾಪೆಯ ಮೇಲೆ ಬಿದ್ದಿರುವ ಮಗುವಿನ ಮೃತದೇಹದ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಪ್ರಕರಣ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ. ಆದಾಗ್ಯೂ ಪ್ರಕರಣವನ್ನು ಶಾಂತಿಯುತವಾಗಿ ಬಗೆಹರಿಸಲಾಗಿದೆ ಎಂದು ಸ್ಥಳೀಯ ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ಮಗುವಿನ ಮೃತದೇಹವನ್ನು 16 ಕಿ.ಮೀ ದೂರದಲ್ಲಿ ಸಮಾಧಿ ಮಾಡಲಾಯಿತು ಎಂದಿದ್ದಾರೆ.

ಮುಸ್ಲಿಮರ ಸ್ಥಳದಲ್ಲಿ ನಾಸ್ತಿಕರನ್ನು ಸಮಾಧಿ ಮಾಡುವುದು ಶರಿಯಾಗೆ ವಿರುದ್ಧವಾದದ್ದು ಎಂದು ಕೆಲ ಮತಾಂಧರು ಕ್ಯಾತೆ ತೆಗೆದಿದ್ದರು. ಆದಾಗ್ಯೂ ಕೆಲವರ ಬೆಂಬಲದೊಂದಿಗೆ ಮಗುವಿನ ಅಂತ್ಯಸಂಸ್ಕಾರ ಮಾಡಲಾಗಿತ್ತು. ಇದಾದ ಕೆಲವೇ ಕ್ಷಣಗಳಲ್ಲಿ ಮಗುವಿನ ಮೃತದೇಹವನ್ನು ಸಮಾಧಿಯಿಂದ ಹೊರಕಿತ್ತು ಬಿಸಾಡಲಾಗಿದೆ. **(ಏಜೆನ್ಸೀಸ್)**

===

## ಶಾಂತಿಯ ಪ್ರತಿಭಟನಕಾರರು ದೇಶದ್ರೋಹಿಗಳಲ್ಲ

ಔರಂಗಾಬಾದ್, ಫೆ 15: ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿರುವವರನ್ನು ದೇಶದ್ರೋಹಿಗಳು ಅಥವಾ ರಾಷ್ಟ್ರ ವಿರೋಧಿಗಳು ಎಂದು ಕರೆಯಲು ಸಾಧ್ಯವಿಲ್ಲ ಎಂದು ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠ ಹೇಳಿದೆ. ಸಿಎಎ ವಿರೋಧಿಸಿ ಪ್ರತಿಭಟನೆ ನಡೆಸಲು ಅನುಮತಿ ಕೋರಿದ್ದರೂ ಜಿಲ್ಲಾಡಳಿತ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತವಾಗಿದೆ. ಜನರು ಶಾಂತಿಯುತವಾಗಿ ಪ್ರತಿಭಟನೆ ಮಾಡುವುದಿದ್ದರೆ ಅದನ್ನು ಗೌರವಿಸಬೇಕಾಗುತ್ತದೆ ಮತ್ತು ಅನುಮತಿ ನೀಡಬೇಕಾಗುತ್ತದೆ. ಪ್ರತಿಭಟನೆ ನಡೆಸುವುದರಿಂದ ಸಿಎಎ ಅಥವಾ ಅದರಲ್ಲಿನ ಅಂಶಗಳ ಬಗ್ಗೆ ವಿರೋಧ ವ್ಯಕ್ತಪಡಿಸಿದಂತಾಗುವುದಿಲ್ಲ. ಹೀಗಾಗಿ ಈ ನ್ಯಾಯಪೀಠ ಅಂಥವರನ್ನು ದೇಶದ್ರೋಹಿಗಳು, ರಾಷ್ಟ್ರ ವಿರೋಧಿಗಳು ಎಂದು ಕರೆಯಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸುತ್ತದೆ. ನ್ಯಾ। ಟಿ.ವಿ. ನಲವಾಡೆ ಮತ್ತು ನ್ಯಾ। ಎಂ.ಜಿ. ಸುಲಿಕರ್ ಅವರನ್ನೊಳಗೊಂಡ ಪೀಠ ಹೇಳಿದೆ. ಅನುಮತಿ ನೀಡದೇ ಇರುವ ಬಗ್ಗೆ ಹೆಚ್ಚುವರಿ ಜಿಲ್ಲಾಧಿಕಾರಿಯ ವರದಿಯೂ ಸಮರ್ಪಕವಾಗಿಲ್ಲ ಎಂದಿದೆ. **(ಉದಯವಾಣಿ 16–2–2020)**

===

## ವೋಟರ್ ಐಡಿ ಸಾಕು

ಭಾರತದ ಚುನಾವಣಾ ಆಯೋಗ ನೀಡುವ ಮತದಾರರ ಗುರುತಿನ ಚೀಟಿಯನ್ನು ಪೌರತ್ವದ ದಾಖಲೆಯನ್ನಾಗಿ ಬಳಸಬಹುದು. ಆಧಾರ್ ಕಾರ್ಡ್ ಈ ನಿಟ್ಟಿನಲ್ಲಿ ಬಳಕೆ ಮಾಡಲು ಸಾಧ್ಯವಿಲ್ಲ ಎಂದು ಮುಂಬಯಿನ ಸ್ಥಳೀಯ ಕೋರ್ಟ್ ತೀರ್ಪು ನೀಡಿದೆ. ಅಕ್ರಮವಾಗಿ ನೆಲೆಸಿದ್ದರು ಎಂದು ಹೇಳಲಾಗಿರುವ ದಂಪತಿ ವಿರುದ್ಧದ ಪ್ರಕರಣದ ವಿಚಾರಣೆ ವೇಳೆ ಈ ತೀರ್ಪು ನೀಡಿದೆ. 'ಜನನ ಪ್ರಮಾಣ ಪತ್ರ, ವಲಸೆ ಪ್ರಮಾಣ ಪತ್ರ, ಪಾಸ್‌ಪೋರ್ಟ್‌ಗಳನ್ನು ವ್ಯಕ್ತಿಯ ಮೂಲ ತಿಳಿಯಲು ಬಳಕೆ ಮಾಡಬಹುದು. ಚುನಾವಣಾ ಆಯೋಗದ ಗುರುತಿನ ಚೀಟಿಯನ್ನು ಪೌರತ್ವದ ದಾಖಲೆಯನ್ನಾಗಿ ಬಳಕೆ ಮಾಡಬಹುದು. ಆದರೆ ಈ ಬಗ್ಗೆ ಆತ ಜನತಾ ಪ್ರಾತಿನಿಧ್ಯ ಕಾಯ್ದೆಯಡಿ ಭಾರತದ ಪ್ರಜೆಯೆಂದು ದೃಢೀಕರಣ ನೀಡಬೇಕು. 2017ರಲ್ಲಿ ಬಂಧಿಸಲಾಗಿದ್ದ ಬಾಂಗ್ಲಾ ಪ್ರಜೆಗಳನ್ನು ಕೋರ್ಟ್ ದೋಷಮುಕ್ತಿಗೊಳಿಸಿದೆ.

**(ಉದಯವಾಣಿ 16–2–2020)**

===

## 43 ವರ್ಷ ಬಳಿಕ ಮನೆ ಸೇರಿದ ಅಜ್ಜಿ

ಮುಂಬಯಿ: ಮೊಬೈಲ್ ಇಲ್ಲದ ಹಿಂದಿನ ಕಾಲದಲ್ಲಿ ದಾರಿ ತಪ್ಪಿದವರನ್ನು ಹುಡುಕುವುದೇ ಕಷ್ಟದ ಮಾತು. ಮಹಾರಾಷ್ಟ್ರದ ಒಬ್ಬಳು ಅಜ್ಜಿ ಹಾಗೆ ದಾರಿ ತಪ್ಪಿ ಮಧ್ಯಪ್ರದೇಶದ ಹಳ್ಳಿ ಸೇರಿದ್ದಳು. ಗೂಗಲ್, ವಾಟ್ಸ್ಯಾಪ್ ನೆರವಿನಿಂದ 43 ವರ್ಷಗಳ ಬಳಿಕ ಈಗ ಈಕೆ ಕುಟುಂಬವನ್ನು ಸೇರಿದ್ದಾಳೆ.

ಮಹಾರಾಷ್ಟ್ರದ ಬುಂದೇಲ್ ಖಂಡ್‌ನ ಪಂಚುಬಾಯಿ 1977ರಲ್ಲಿ ಜೇನ್ನೊಣಗಳ ದಾಳಿಗೆ ತುತ್ತಾಗಿ ಹಾದಿ ತಪ್ಪಿದ್ದಳು. ಕಾಡಿನ ನಡುರಸ್ತೆಯಲ್ಲಿ ಕಂಡ ಈಕೆಯನ್ನು ಟ್ರಕ್ ಚಾಲಕ ನೂರ್ ಖಾನ್ ರಕ್ಷಿಸಿ ಮನೆಗೆ ಕರೆದೊಯ್ದು ಚಿಕಿತ್ಸೆ ನೀಡಿದ್ದ. ಪಂಚುಬಾಯಿಯ ಮರಾಠಿ ಭಾಷೆ ತಿಳಿಯದ ಕಾರಣ ನೂರ್‌ಗೆ ಈಕೆಯನ್ನು ಮನೆಗೆ ತಲುಪಿಸಲು ಸಾಧ್ಯವಾಗಿರಲಿಲ್ಲ. ಅಚ್ಚನ್ ಮೌಸಿ ಎಂದು ಹೆಸರಿಟ್ಟು ದಮೋಹ್ ಜಿಲ್ಲೆಯ ಟಾಲಾ ಹಳ್ಳಿಯ ತಮ್ಮ ಮನೆಯಲ್ಲಿಯೇ ಉಳಿಸಿಕೊಂಡಿದ್ದ. ಈಗ ನೂರ್ ಬದುಕಿಲ್ಲ. ನೂರ್ ಮೊಮ್ಮಗ ಇಸ್ರಾರ್ ಖಾನ್ ಬಳಿ ಅಜ್ಜಿ ತನ್ನ ಊರು 'ಖಂಜಾಮ್ ನಗರ' ಅಂತ ಹೇಳಿದಾಗ ಆತ ಗೂಗಲ್‌ನಲ್ಲಿ ಹುಡುಕಿದ್ದಾನೆ. ಅದು ಮಹಾರಾಷ್ಟ್ರದ ನಾಗ್ಪುರ ಸಮೀಪವೆಂದು ಗೊತ್ತಾಗಿ ಅಜ್ಜಿಯ ಫೋಟೊಗಳನ್ನು ಅಲ್ಲಿನವರಿಗೆ ವಾಟ್ಸ್ಯಾಪ್ ಮಾಡಿದ್ದಾನೆ. ಮೊಮ್ಮಗ ಪೃಥ್ವಿ ಕುಮಾರ್ ಶಿಂಧೆ ಬಂದು ಅಜ್ಜಿಯನ್ನು ನಾಗ್ಪುರದ ಮನೆಗೆ ಕರೆದೊಯ್ದಿದ್ದಾನೆ. ಇಷ್ಟು ದಿನ ಅಜ್ಜಿಗೆ ಆಶ್ರಯ ನೀಡಿದ್ದ ಖಾನ್ ಕುಟುಂಬಕ್ಕೆ ಧನ್ಯವಾದ ಹೇಳಿದ್ದಾನೆ.

**(ಉದಯವಾಣಿ 22–6–2020)**

===

## ಅಸಭ್ಯ ವರ್ತನೆ: ಪಾದ್ರಿ ಅಮಾನತು

ತಿರುವನಂತಪುರ: ಅಸಭ್ಯವಾಗಿ ವರ್ತಿಸಿದ ದೃಶ್ಯ ವೈರಲ್ ಆದ ಹಿನ್ನೆಲೆಯಲ್ಲಿ ಚರ್ಚ್‌ನ ಪಾದ್ರಿಯೊಬ್ಬರನ್ನು ಅಮಾನತುಪಡಿಸಲಾಗಿದೆ. ಕೇರಳದ ಇಡುಕ್ಕಿ ಕ್ಯಾಥೋಲಿಕ್ ಚರ್ಚ್‌ನ ಪಾದ್ರಿ ಜೇಮ್ಸ್ ಮಂಗಲಾಶೇರಿ, ಮಹಿಳೆಯೊಬ್ಬರ ಜತೆಗೆ ಅಕ್ರಮ ಸಂಬಂಧ ಹೊಂದಿದ್ದಾರೆ ಎನ್ನಲಾದ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. **(ಉದಯವಾಣಿ 24–5–2020)**

## ಪುತ್ರಿಯ ಮೇಲೆ ಲೈಂಗಿಕ ದೌರ್ಜನ್ಯ: ಬಂಧನ

### ಮದ್ರಸ ಅಧ್ಯಾಪಕನ ವಿರುದ್ಧ ಪೋಕ್ಸೋ ಕಾಯ್ದೆಯಡಿ ಕೇಸು

ಸುಳ್ಯ, ಜು. 21: ತನ್ನ ಹದಿನಾರು ವರ್ಷದ ಪುತ್ರಿಯ ಮೇಲೆಯೇ ಲೈಂಗಿಕ ದೌರ್ಜನ್ಯ ನಡೆಸಿದ ಗೂನಡ್ಕ ಮೂಲದ ಮದ್ರಸ ಅಧ್ಯಾಪಕನೋರ್ವನನ್ನು ಕೇರಳದ ನೀಲೇಶ್ವರ ಪೊಲೀಸರು ಬಂಧಿಸಿದ್ದಾರೆ.

ಪ್ರಸ್ತುತ ಕಾಂಞಂಗಾಡ್ ಸಮೀಪದ ತೈಕಡಪ್ಪುರ ನಿವಾಸಿಯಾದ ಈ ಉಸ್ತಾದ್ ಅಲ್ಲಿ ಮದ್ರಸ ಅಧ್ಯಾಪಕನಾಗಿದ್ದ. ಗೂನಡ್ಕ ಮೂಲದವನಾದ ಈತ ಇಲ್ಲಿಯೂ ಒಂದು ವಿವಾಹವಾಗಿದ್ದು, ಕಾಂಞಂಗಾಡ್‌ನಲ್ಲಿ ಮತ್ತೊಂದು ವಿವಾಹವಾಗಿದ್ದ. ಈತನ ಮೇಲೆ ಈ ಹಿಂದೆಯೂ ಪೋಕ್ಸೋ ಕೇಸು ಸಹಿತ ನಾಲ್ಕು ಲೈಂಗಿಕ ದೌರ್ಜನ್ಯ ಪ್ರಕರಣಗಳು ದಾಖಲಾಗಿತ್ತು.

ಈತನ ಹದಿನಾರು ವರ್ಷದ ಪುತ್ರಿಯು ತನ್ನ ಮಾವನ ಸಹಕಾರದೊಂದಿಗೆ ನೀಲೇಶ್ವರ ಪೊಲೀಸರಿಗೆ ದೂರು ನೀಡಿದ್ದು, ಕಳೆದ ಕೆಲವು ವರ್ಷಗಳಿಂದ ತಂದೆ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದ ಹಾಗೂ ಇತರ ಕೆಲವು ಮಂದಿಯೂ ಲೈಂಗಿಕ ದೌರ್ಜನ್ಯದಲ್ಲಿ ಭಾಗಿಯಾದ ಕುರಿತು ಮಾಹಿತಿ ನೀಡಿದ್ದಾಳೆ. ಈ ಹುಡುಗಿ ಗರ್ಭಿಣಿಯಾದ ಸಂದರ್ಭ ಪ್ರಕರಣ ಬೆಳಕಿಗೆ ಬಂದಿದೆ.

ಆಕೆಯ ದೂರಿನ ಹಿನ್ನೆಲೆಯಲ್ಲಿ ಪೊಲೀಸರು ಉಸ್ತಾದ್ ಹಾಗೂ ಪರಿಸರದ ಮೂವರು ಯುವಕರನ್ನು ಬಂಧಿಸಿದ್ದಾರೆ. ಲೈಂಗಿಕ ದೌರ್ಜನ್ಯದ ಮಾಹಿತಿ ಗೊತ್ತಿದ್ದೂ, ತಿಳಿಸದ ಹಿನ್ನೆಲೆಯಲ್ಲಿ ಆಕೆಯ ತಾಯಿಯ ಮೇಲೂ ಕೇಸು ದಾಖಲಾಗಿದೆ.

**(ಉದಯವಾಣಿ 22–7–2020)**

=========================================================

## ಉಯಿಘರ್ ಮುಸ್ಲಿಂ ಜನಸಂಖ್ಯೆ ನಿಗ್ರಹಕ್ಕೆ ಬಲವಂತದ ಗರ್ಭಪಾತ

### ♦ ಚೀನದ ಕ್ಸಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಜಾರಿ ♦ ಹಲವು ಬಾರಿ ಅಲ್ಪಸಂಖ್ಯಾಕ ಸಮುದಾಯದ ಮಹಿಳೆಯರ ತಪಾಸಣೆ ♦ ಹೆಚ್ಚಿನ ಮಕ್ಕಳು ಇರುವವರಿಗೆ ಶಿಬಿರಗಳಲ್ಲಿ ಬಲವಂತ ಬಂಧನ

ಬೀಜಿಂಗ್: ದೇಶದಲ್ಲಿನ ಮುಸ್ಲಿಂ ಜನಸಂಖ್ಯೆಯನ್ನು ನಿಗ್ರಹಿಸುವ ವ್ಯಾಪಕ ಅಭಿಯಾನದ ಅಂಗವಾಗಿ ಉಯಿಘರ್ ಮತ್ತು ಇತರ ಅಲ್ಪಸಂಖ್ಯಾಕರಲ್ಲಿ ಜನನದ ಪ್ರಮಾಣವನ್ನು ಕಡಿತಗೊಳಿಸಲು ಚೀನ ಸರಕಾರ ಕಠಿನ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅಲ್ಲದೆ, ದೇಶದ ಬಹುಸಂಖ್ಯಾಕ ಹ್ಯಾನ್ ಸಮುದಾಯದವರಿಗೆ ಹೆಚ್ಚಿನ ಮಕ್ಕಳನ್ನು ಹೊಂದಲು ಉತ್ತೇಜನ ನೀಡುತ್ತಿದೆ. ಈ ಅಭಿಯಾನವನ್ನು ಈಗ ಹಿಂದಿಗಿಂತ ಹೆಚ್ಚು ವ್ಯಾಪಕವಾಗಿ ಹಾಗೂ ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ. ಅದರಲ್ಲೂ ವಿಶೇಷವಾಗಿ ಉಯಿಘರ್ ಸ್ವಾಯತ್ತ ಪ್ರದೇಶವಾಗಿರುವ ಕ್ಸಿನ್‌ಜಿಯಾಂಗ್ ಪ್ರಾಂತ್ಯದಲ್ಲಿ ಇದು ಹೆಚ್ಚಿದೆ. ಇಲ್ಲಿನ ಅಲ್ಪಸಂಖ್ಯಾಕ ಮಹಿಳೆಯರನ್ನು ನಿಯಮಿತವಾಗಿ ಗರ್ಭಧಾರಣೆಯ ತಪಾಸಣೆಗೆ ಒಳಪಡಿಸಲಾಗುತ್ತದೆ. ಅವರಿಗೆ ಗರ್ಭ ನಿರೋಧಕ ಬಳಸಲು ಆಗ್ರಹಿಸಲಾಗುತ್ತದೆ. ಸಂತಾನ ಶಕ್ತಿಹರಣ ಹಾಗೂ ಬಲವಂತದ ಗರ್ಭಪಾತಕ್ಕೆ ಒತ್ತಾಯಿಸಲಾಗುತ್ತದೆ.

ಹೆಚ್ಚಿನ ಮಕ್ಕಳನ್ನು ಹೊಂದಿರುವವರನ್ನು ನಿರಾಶ್ರಿತರ ಶಿಬಿರಗಳಲ್ಲಿ ಬಲವಂತದ ಬಂಧನಕ್ಕೆ ಒಳಪಡಿಸಲಾಗುತ್ತದೆ. ಮೂರಕ್ಕಿಂತ ಹೆಚ್ಚಿನ ಮಕ್ಕಳಿದ್ದರೆ ದೊಡ್ಡ ಮೊತ್ತದ ದಂಡ ವಿಧಿಸಲಾಗುತ್ತದೆ. ಪೊಲೀಸರು ಮನೆಗಳ ಮೇಲೆ ಆಗಾಗ ದಾಳಿ ಮಾಡಿ, ಹೆಚ್ಚಿನ ಮಕ್ಕಳಿರುವ ಪೋಷಕರನ್ನು ಬೆದರಿಸುತ್ತಾರೆ. ಇಂಥ ಬಲವಂತದ ಜನಸಂಖ್ಯಾ ನಿಯಂತ್ರಣ, ಒಂದು ರೀತಿಯ ಜನಾಂಗೀಯ ಹತ್ಯಾಕಾಂಡದ ರೂಪ ಎಂದು 'ಅಸೋಸಿಯೇಟೆಡ್ ಪ್ರೆಸ್' ವರದಿ ಮಾಡಿದೆ. ಈ ಮಧ್ಯೆ, 2015–18ರ ಅವಧಿಯಲ್ಲಿ ಉಯಿಘರ್ ಪ್ರಾಂತ್ಯದ ಹೋಟನ್ ಮತ್ತು ಕಾಶ್ಗರ್ ವಲಯಗಳಲ್ಲಿ ಜನನ ಪ್ರಮಾಣ ಶೇ.60ರಷ್ಟು ಕುಸಿದಿದೆ ಎಂಬುದನ್ನು ಚೀನ ಸರಕಾರದ ಅಂಕಿ–ಅಂಶಗಳೇ ಹೇಳುತ್ತವೆ.

**(ಉದಯವಾಣಿ 30–6–2020)**

=========================================================

## ಪಾಕ್‌ನಲ್ಲಿ ಶ್ರೀಕೃಷ್ಣ ದೇಗುಲ ನಿರ್ಮಾಣ ವಿರುದ್ಧ ಫತ್ವಾ

### ♦ ನಿರ್ಮಾಣದ ವಿರುದ್ಧ ಕೋರ್ಟ್‌ನಲ್ಲಿ ದಾವೆ

### ♦ ಮಧ್ಯಾಂತರ ತಡೆಯಾಜ್ಞೆ ನೀಡಲು ಇಸ್ಲಾಮಾಬಾದ್ ಹೈಕೋರ್ಟ್ ನಕಾರ

ಇಸ್ಲಾಮಾಬಾದ್: ಪಾಕಿಸ್ಥಾನದ ಇಸ್ಲಾಮಾಬಾದ್‌ನಲ್ಲಿ ನಿರ್ಮಾಣವಾಗುತ್ತಿರುವ ಶ್ರೀಕೃಷ್ಣ ದೇವಾಲಯದ ವಿರುದ್ಧ ಪ್ರಭಾವಿ ಧಾರ್ಮಿಕ ಸಂಸ್ಥೆಯೊಂದು ಫತ್ವಾ ಹೊರಡಿಸಿದೆ. ಅಲ್ಲದೆ ನಿರ್ಮಾಣ ಕಾರ್ಯಕ್ಕೆ ತಡೆ ಘೋಷಿಸುವಂತೆ ನ್ಯಾಯಾಲಯದ ಮೊರೆ ಹೋಗಿದೆ.

2018ರಲ್ಲಿ ಇಮ್ರಾನ್ ಖಾನ್ ಪಾಕ್ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ವೇಳೆ ದೇಶದ ಅಲ್ಪಸಂಖ್ಯಾತರ ಧಾರ್ಮಿಕ ಸ್ವಾತಂತ್ರ್ಯ ರಕ್ಷಿಸುವುದಾಗಿ ಭರವಸೆ ನೀಡಿದ್ದರು. ಅದರಂತೆ ಇಸ್ಲಾಮಾಬಾದ್‌ನಲ್ಲಿ ಸ್ಥಳೀಯ ಹಿಂದೂ ಸಮಿತಿಗೆ ಭೂಮಿಯನ್ನೂ ಹಸ್ತಾಂತರಿಸಿ, ಶ್ರೀಕೃಷ್ಣ ದೇಗುಲ ನಿರ್ಮಾಣಕ್ಕೆ ಅನುಮತಿ ನೀಡಲಾಗಿತ್ತು. ಮೊದಲ ಹಂತದ ನಿರ್ಮಾಣಕ್ಕೆ 10 ಕೋಟಿ ರೂ.ಗಳನ್ನು ಸರಕಾರ ಘೋಷಿಸಿತ್ತು. ಸರಕಾರದಿಂದ ಹಣ ತಲುಪದಿದ್ದರೂ ಭಕ್ತರು ತಾವೇ ನಿಧಿ ಸಂಗ್ರಹಿಸಿ ನಿಗದಿತ ಜಾಗದಲ್ಲಿ ದೇಗುಲ ನಿರ್ಮಿಸುತ್ತಿದ್ದಾರೆ.

ಇಸ್ಲಾಮ್ ಹೊರತುಪಡಿಸಿ ಇತರ ಧರ್ಮಗಳ ಅನುಯಾಯಿಗಳಿಗೆ ಪೂಜಾ ಕೇಂದ್ರಗಳನ್ನು ನಿರ್ಮಿಸಲು ಅವಕಾಶ ಮಾಡಿಕೊಡಬಾರದು ಎಂದು ಜಾಮಿಯಾ ಅಶ್ರಫಿಯಾ ಸಂಸ್ಥೆ ಕೋರ್ಟ್‌ನಲ್ಲಿ ವಾದಿಸಿದೆ. ಆದರೆ ದೇಗುಲ ನಿರ್ಮಾಣ ಕಾರ್ಯಕ್ಕೆ ಮಧ್ಯಾಂತರ ತಡೆ ನೀಡಲು ಇಸ್ಲಾಮಾಬಾದ್ ಹೈಕೋರ್ಟ್ ಗುರುವಾರ ನಿರಾಕರಿಸಿದೆ. **(ಉದಯವಾಣಿ 3–7–2020)**

=====================================================

## ಕೃಷ್ಣ ದೇಗುಲ ನಿರ್ಮಾಣಕ್ಕೆ ಸಮ್ಮತಿ

ಇಸ್ಲಾಮಾಬಾದ್: ಪಾಕಿಸ್ಥಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಕೃಷ್ಣ ದೇವಸ್ಥಾನ ನಿರ್ಮಿಸುತ್ತಿರುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ತಿರಸ್ಕರಿಸಿದೆ. ಈ ಬಗ್ಗೆ ತೀರ್ಪು ನೀಡಿರುವ ಇಸ್ಲಾಮಾಬಾದ್ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ಇನ್ಸ್ಟಿಟ್ಯೂಟ್ ಆಫ್ ಹಿಂದೂ ಪಂಚಾಯತ್‌ಗೆ ದೇಗುಲ ನಿರ್ಮಿಸಲು ಜಮೀನು ಮಂಜೂರಾಗಿದೆ. **(ಉದಯವಾಣಿ 9–7–2020)**

=====================================================

## ಕತ್ತೆ ಹಾಲಿನ ಹೈನುಗಾರಿಕೆಯತ್ತ ಹೊರಳಿದ ಭಾರತ

**ಹರ್ಯಾಣದ ಹಿಸ್ಸಾರ್‌ನಲ್ಲಿ ಭಾರತೀಯ ಅಶ್ವಜಾತಿಯ ಪ್ರಾಣಿಗಳ ಸಂಶೋಧನಾ ಕೇಂದ್ರ (ಎನ್‌ಆರ್‌ಸಿಇ) ಕತ್ತೆಗಳ ಪಶು ಸಂಗೋಪನಾ ಕೇಂದ್ರವನ್ನು ಆರಂಭಿಸಲು ನಿರ್ಧರಿಸಿದೆ. ಅವುಗಳಲ್ಲಿ ಹಲಾರಿ ತಳಿಯ ಕತ್ತೆ ಹಾಲಿನ ಹೈನುಗಾರಿಕೆ ನಡೆಸಲು ಉದ್ದೇಶಿಸಲಾಗಿದೆ. ಈಗಾಗಲೇ ಆ ತಳಿಯ 10 ಕತ್ತೆಗಳನ್ನು ತಂದು ಅವುಗಳನ್ನು ಎನ್‌ಆರ್‌ಸಿಇ ಕೇಂದ್ರದಲ್ಲಿ ಸಾಕಲಾಗುತ್ತಿದೆ.**

### ಕತ್ತೆ ಹೈನುಗಾರಿಕೆ ಏಕೆ?

ಕತ್ತೆ ಹಾಲಿನಲ್ಲಿ ಮನುಷ್ಯರಿಗೆ ಬೇಕಾದ ಅನೇಕ ಉಪಯುಕ್ತ ಪೋಷಕಾಂಶಗಳನ್ನು ಒಳಗೊಂಡಿದೆ. ಅದರ ಉಪಯೋಗದಿಂದ ರೋಗ ನಿರೋಧಕ ಶಕ್ತಿ ಹೆಚ್ಚಾಗುವುದು ಪ್ರಯೋಗಗಳಿಂದ ದೃಢಪಟ್ಟಿದೆ. ಹಾಗಾಗಿ, ಕತ್ತೆ ಹಾಲಿನ ಹೈನುಗಾರಿಕೆ ಹೊಸ ಒತ್ತು ನೀಡಲು ನಿರ್ಧರಿಸಲಾಗಿದೆ.

### ಬೆಲೆ ಎಷ್ಟಿರುತ್ತೆ?

ಸದ್ಯಕ್ಕೆ ಮಾರುಕಟ್ಟೆಯಲ್ಲಿ ಒಂದು ಲೀಟರ್ ಕತ್ತೆ ಹಾಲಿಗೆ 2,000 ರೂ. ಗಳಿಂದ 7,000 ರೂ. ವರೆಗೆ ಬೆಲೆ ಇದೆ. ಕತ್ತೆ ಹಾಲಿನ ಹೈನುಗಾರಿಕೆ ದೇಶದ ತುಂಬೆಲ್ಲಾ ವ್ಯಾಪಿಸಿ ಅಗಾಧವಾಗಿ ಹಾಲು ಉತ್ಪಾದನೆಯಾದರೆ ಬೆಲೆ ಕಡಿಮೆಯಾಗುವ ನಿರೀಕ್ಷೆಯಿದೆ.

### ಹಲಾರಿ ತಳಿಯ ಮಹತ್ವವೇನು?

ಗುಜರಾತ್‌ನಲ್ಲಿ ಕಾಣಬರುವ ಈ ತಳಿಯ ಕತ್ತೆಗಳ ಹಾಲು ಔಷಧೀಯ ಅಂಶಗಳ ನಿಧಿ ಎಂದೇ ಕರೆಯಲಾಗುತ್ತದೆ. ಇದರ ಹಾಲಿನಲ್ಲಿ ಕ್ಯಾನ್ಸರ್, ಬೊಜ್ಜುತನ, ಸೋಂಕುಗಳ ವಿರುದ್ಧ ಹೋರಾಡುವ ಅಂಶಗಳಿವೆ. ಅವುಗಳ ಹಾಲನ್ನು ಮಕ್ಕಳಿಗೆ ನೀಡಿದರೆ ಅವರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಒಮ್ಮೊಮ್ಮೆ ಕೆಲವು ಮಕ್ಕಳಿಗೆ ಹಸುವಿನ ಹಾಲು ಅಲರ್ಜಿಯಾದರೂ ಹಲಾರಿ ಕತ್ತೆಗಳ ಹಾಲು ಎಂದೂ ಅಲರ್ಜಿಯಾಗದು. ಈ ಹಾಲಿನಲ್ಲಿ ಆ್ಯಂಟಿ ಆಕ್ಸಿಡಂಟ್ಸ್ ಹಾಗೂ ಆ್ಯಂಟಿ ಏಜಿಂಗ್ ಅಂಶ ಅಲ್ಪಪ್ರಮಾಣದಲ್ಲಿರುತ್ತವೆ. ಹಾಗಾಗಿ, ಇದು ಸೋಪು, ಲಿಪ್ ಬಾಮ್, ಬಾಡಿ ಲೋಷನ್, ಕಾಸ್ಮೆಟಿಕ್ಸ್‌ಗಳ ತಯಾರಿಕೆಯಲ್ಲಿಯೂ ಬಳಕೆಯಾಗುತ್ತದೆ. **(ಉದಯವಾಣಿ 11–8–2020)**

=====================================================

## ಹೆಣ್ಣು ಮಕ್ಕಳಿಗೆ ಸಮಾನ ಆಸ್ತಿ ಹಕ್ಕು

### 2005ರ ಸೆ. 9ರ ಸಮಪಾಲು ತೀರ್ಪಿಗೆ ಸುಪ್ರೀಂ ಸ್ಪಷ್ಟನೆ

ಹೊಸದಿಲ್ಲಿ, ಆ. 11: ಭಾರತೀಯ ಹಿಂದೂ ಅವಿಭಕ್ತ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಕ್ಕಳು 2005ಕ್ಕೆ ಮುನ್ನ ತಮ್ಮ ತಂದೆ ತೀರಿಹೋಗಿದ್ದರೂ ಪಿತ್ರಾರ್ಜಿತ ಆಸ್ತಿಯಲ್ಲಿ ಸಿಗಬೇಕಿರುವ ಸಮಪಾಲು ಪಡೆಯಲು ಅರ್ಹರು ಎಂಬ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ಮಂಗಳವಾರ ಪ್ರಕಟಿಸಿದೆ.

ಅಲ್ಲದೆ ತನ್ನಿಂದ ಈ ಸ್ಪಷ್ಟನೆಗಾಗಿ ಕಾಯುತ್ತ, ಇತ್ಯರ್ಥಪಡಿಸದೇ ಇರುವ ಆಸ್ತಿ ಹಕ್ಕು ಪ್ರಕರಣಗಳನ್ನು 6 ತಿಂಗಳೊಳಗೆ ಇತ್ಯರ್ಥಗೊಳಿಸುವಂತೆ ಎಲ್ಲ ಕೆಳ ನ್ಯಾಯಾಲಯಗಳಿಗೆ ಸೂಚಿಸಿದೆ.

ಹಿಂದೂ ಅವಿಭಕ್ತ ಕುಟುಂಬಗಳ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳು ಸಮಪಾಲು ಪಡೆಯುವ ಹಕ್ಕುಳ್ಳವರು ಎಂದು 2005ರ ಸೆ. 9ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಆ ತೀರ್ಪಿನ ಅನ್ವಯ ಹಿಂದೂ ಉತ್ತರಾಧಿಕಾರ ಕಾಯ್ದೆ (ಎಚ್‌ಎಸ್‌ಎ) ರೂಪಿಸಲಾಗಿದೆ. ಆದರೆ 2005ಕ್ಕೂ ಮುನ್ನ ತಂದೆ ತೀರಿದ್ದಲ್ಲಿ ಈ ಕಾಯ್ದೆ ಅನ್ವಯವಾಗುತ್ತದೆಯೇ ಎಂಬ ಪ್ರಶ್ನೆ ಇತ್ತು.

ಈಗ ಈ ಕುರಿತಾಗಿ ಸುಪ್ರೀಂ ಕೋರ್ಟ್ ತೀರ್ಪಿನಿಂದ ಸ್ಪಷ್ಟತೆ ಲಭಿಸಿದೆ. ಅಲ್ಲದೆ 2005ರ ತೀರ್ಪಿನ ಅನಂತರ ತಂದೆ ಅಥವಾ ಮಗಳು ಬದುಕಿದ್ದರೆ ಮಾತ್ರ ಆಸ್ತಿಯಲ್ಲಿ ಸಮಾನ ಹಕ್ಕು ಕೇಳಬಹುದು ಎಂಬ ಕೆಳ ನ್ಯಾಯಾಲಯಗಳ ತೀರ್ಪುಗಳನ್ನೂ ಈ ತೀರ್ಪು ಬದಿಗಿರಿಸಿದೆ.

**ಅನುಕೂಲವೇನು?**

ಈ ತೀರ್ಪಿನಿಂದಾಗಿ 20005ರಲ್ಲಿ ಎಚ್ಎಸ್ಎ ಕಾಯ್ದೆ ತಿದ್ದುಪಡಿ ಆಗುವುದಕ್ಕೂ ಮುನ್ನ ಅಥವಾ ತಿದ್ದುಪಡಿಯ ಅನಂತರ ಪುತ್ರಿ ಜೀವಂತ ಇರಲಿ, ಇಲ್ಲದಿರಲಿ; ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಪಾಲು ಪಡೆಯಲು ಅರ್ಹಳಾಗಿರುತ್ತಾಳೆ. ಮಗಳು ಜೀವಂತವಾಗಿಲ್ಲದಿದ್ದರೂ ಆಕೆಯ ಮಕ್ಕಳು ತಮ್ಮ ತಾಯಿಗೆ ಸಿಗಬೇಕಾದ ಹಕ್ಕುಗಳನ್ನು ಕೇಳಬಹುದಾಗಿದೆ. **(ಉದಯವಾಣಿ 12–8–2020)**

## ಲಂಡನ್‌ನಲ್ಲಿ ಚೆನ್ನೈಯ ಯುವತಿ ಅಪಹರಣ: ಝಕೀರ್‌ಗೆ ಲಿಂಕ್?

ಚೆನ್ನೈ: ಲಂಡನ್‌ನಲ್ಲಿ ಚೆನ್ನೈ ಮೂಲದ ಯುವತಿಯನ್ನು ಬಾಂಗ್ಲಾದೇಶದ ದುಷ್ಕರ್ಮಿಗಳು ಅಪಹರಣ ಮಾಡಿದ ಪ್ರಕರಣಕ್ಕೂ ವಿವಾದಿತ ಇಸ್ಲಾಮಿಕ್ ವಿದ್ವಾಂಸ ಝಕೀರ್ ನಾಯ್ಕ್‌ಗೂ ಸಂಬಂಧವಿದೆಯೇ?

ಈ ಅಪಹರಣದಲ್ಲಿ ಝಕೀರ್ ನಾಯ್ಕ್ ಜತೆ ನಂಟು ಹೊಂದಿರುವ ಬಾಂಗ್ಲಾದ ಸಂಘಟಿತ ಗ್ಯಾಂಗ್‌ವೊಂದರ ಪಾತ್ರವಿದೆ ಎಂಬ ಅನುಮಾನದ ಮೇರೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್ಐಎ) ತನಿಖೆ ಆರಂಭಿಸಿದೆ.

ಕಳೆದ ಮೇ ತಿಂಗಳಲ್ಲಿ ಚೆನ್ನೈ ಮೂಲದ ಉದ್ಯಮಿಯು ಲಂಡನ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದ ತಮ್ಮ ಪುತ್ರಿಯನ್ನು ಬಾಂಗ್ಲಾದೇಶೀಯರು ಅಪಹರಿಸಿದ್ದಾರೆ ಎಂದು ದೂರು ನೀಡಿದ್ದರು. ಅಲ್ಲದೆ, ತಮ್ಮ ಪುತ್ರಿಯನ್ನು ತೀವ್ರಗಾಮಿತ್ವದ ಕಡೆಗೆ ಆಕರ್ಷಿತಳಾಗುವಂತೆ ಮಾಡಿ, ಆಕೆಯನ್ನು ಇಸ್ಲಾಂ ಧರ್ಮಕ್ಕೆ ಒತ್ತಾಯ ಪೂರ್ವಕವಾಗಿ ಮತಾಂತರಿಸಲಾಗಿದೆ ಎಂದೂ ಅವರು ದೂರಿನಲ್ಲಿ ತಿಳಿಸಿದ್ದರು. ಹೀಗಾಗಿ ಆರಂಭದಲ್ಲಿ ಚೆನ್ನೈ ಕ್ರೈಂ ಬ್ರಾಂಚ್ ಪ್ರಕರಣ ದಾಖಲಿಸಿಕೊಂಡಿತ್ತು. ಬಳಿಕ ಕೇಂದ್ರ ಗೃಹ ಸಚಿವಾಲಯದ ಆದೇಶದ ಮೇರೆಗೆ ಪ್ರಕರಣವನ್ನು ಎನ್ಐಎಗೆ ಹಸ್ತಾಂತರಿಸಲಾಗಿತ್ತು.

ಬಾಂಗ್ಲಾದ ಮಾಜಿ ಸಂಸದ ಸರ್ದಾರ್ ಶೇಖಾವತ್ ಹುಸೇನ್ ಬೊಕುಲ್ ಅವರ ಪುತ್ರನಾದ ನಫೀಸ್‌ನನ್ನು ಪ್ರಮುಖ ಆರೋಪಿ ಎಂದು ಎಫ್ಐಆರ್‌ನಲ್ಲಿ ಹೆಸರಿಸಲಾಗಿತ್ತು. ಜತೆಗೆ, ಆರೋಪಿಗಳ ಪೈಕಿ ಝಕೀರ್ ನಾಯ್ಕ್ ಹೆಸರೂ ಇತ್ತು. ಇವರು ಪರಸ್ಪರ ನಂಟು ಹೊಂದಿದ್ದಾರೆಂಬ ಶಂಕೆಯ ಮೇರೆಗೆ ತನಿಖೆ ನಡೆಸಲಾಗುತ್ತಿದೆ ಎಂದು 'ಝೀ ನ್ಯೂಸ್' ವರದಿ ಮಾಡಿದೆ.

**(ಉದಯವಾಣಿ 26–8–2020)**

## ಝಕೀರ್ ಭಾಷಣದಿಂದ ಪ್ರಭಾವಿತನಾಗಿದ್ದ ಉಗ್ರ

ಹೊಸದಿಲ್ಲಿ: ದಿಲ್ಲಿ ಪೊಲೀಸರ ಕೈಗೆ ಸಿಕ್ಕಿ ಬಿದ್ದಿರುವ ಐಸಿಸ್ ಉಗ್ರ ಅಬು ಯೂಸುಫ್ ಅಲಿಯಾಸ್ ಮುಸ್ತಖೀಮ್ ಖಾನ್, ತಾನು ವಿವಾದಿತ ಇಸ್ಲಾಮಿಕ್ ವಿದ್ವಾಂಸ ಝಕೀರ್ ನಾಯ್ಕ್ ಭಾಷಣದಿಂದ ಪ್ರಭಾವಿತನಾಗಿದ್ದೆ ಎಂದು ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾನೆ ಎಂದು ಹೇಳಲಾಗಿದೆ.

ಆತ ಝಕೀರ್ ನಾಯ್ಕ್‌ನ ಭಾಷಣವನ್ನು ಹೆಚ್ಚಾಗಿ ಆಲಿಸುತ್ತಿದ್ದ. ಜತೆಗೆ, ದಿನದಲ್ಲಿ 9 ಗಂಟೆ ಕಾಲ ಜೆಹಾದಿ ವೀಡಿಯೋಗಳನ್ನು ವೀಕ್ಷಿಸುತ್ತಿದ್ದ ಎಂದು ಮೂಲಗಳು ಹೇಳಿವೆ. ಶುಕ್ರವಾರ ರಾತ್ರಿ ಯೂಸುಫ್‌ನನ್ನು ದಿಲ್ಲಿಯ ರಿಡ್ಜ್ ರಸ್ತೆಯಲ್ಲಿ ಬಂಧಿಸಲಾಗಿತ್ತು. ಉತ್ತರ ಪ್ರದೇಶದ ಬಲರಾಂಪುರದವನಾದ ಯೂಸುಫ್ ದೇಶದಲ್ಲಿ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿರುವುದು ಬಯಲಾಗಿತ್ತು. ಜತೆಗೆ, ಬಲರಾಂಪುರದಲ್ಲಿ ಆತ್ಮಾಹುತಿ ಜಾಕೆಟ್, ಐಸಿಸ್ ಧ್ವಜ, ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳೂ ದೊರೆತಿದ್ದವು. **(ಉದಯವಾಣಿ 25–8–2020)**

## ಟಿಪ್ಪು ವೀರ ಹೋರಾಟಗಾರ: ಎಚ್. ವಿಶ್ವನಾಥ್

ಬೆಂಗಳೂರು, ಆ. 26: ಟಿಪ್ಪು ಸುಲ್ತಾನ್ ಈ ನೆಲದ ಮಗ, ವೀರ ಹೋರಾಟಗಾರ ಎಂದು ಬಿಜೆಪಿ ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅವರು ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಟಿಪ್ಪು ಯಾವುದೇ ಜಾತಿ ಅಥವಾ ಧರ್ಮಕ್ಕೆ ಸೇರಿದ ವ್ಯಕ್ತಿಯಲ್ಲ. ಆತನ ಕುರಿತು ವಿದ್ಯಾರ್ಥಿಗಳು ಓದಿ ತಿಳಿದುಕೊಳ್ಳಬೇಕು. ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಹೋರಾಡಿದ ಕಮಾಂಡರ್. ಅದೇ ಸಾಲಿಗೆ ಟಿಪ್ಪು ಕೂಡ ಸೇರುತ್ತಾನೆ ಎಂದು ಅವರು ಹೇಳಿದರು.

ಗಾಂಧೀಜಿಯಿಂದ ಟಿಪ್ಪು ಸುಲ್ತಾನ್ ವರೆಗೆ ನಮ್ಮ ವಿದ್ಯಾರ್ಥಿಗಳು ಓದಬೇಕು. ಸರಕಾರ ಟಿಪ್ಪು ಪಠ್ಯವನ್ನು ಕೈಬಿಟ್ಟಿಲ್ಲ. 5ನೇ ತರಗತಿ ಬದಲಿಗೆ 7ನೇ ತರಗತಿಯಲ್ಲಿ ಸೇರಿಸಿದೆ ಎಂದರು. **(ಉದಯವಾಣಿ 27–8–2020)**

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

# ಕುರ್ಕುಮಿನ್‌ನಿಂದ ಕೊರೋನಾ ವೈರಸ್‌ಗಳ ನಾಶ: ಅಧ್ಯಯನ

**■ ಅರಶಿಣದ ಉಪಯೋಗಗಳು: ♦ರೋಗ ನಿರೋಧಕ ಶಕ್ತಿ ವೃದ್ಧಿ ♦ಸೂಕ್ಷ್ಮಜೀವ ಪ್ರತಿರೋಧಕ ♦ಶೀತ, ಕಫ, ಕೆಮ್ಮು ಶಮನ ♦ಸಂಧಿ ಆರೋಗ್ಯ ರಕ್ಷಣೆ ♦ಚರ್ಮ ಆರೋಗ್ಯ ಸಂರಕ್ಷಣೆ ♦ಪಿತ್ತಕೋಶ ಆರೋಗ್ಯ ವೃದ್ಧಿ ♦ಜೀರ್ಣ ಶಕ್ತಿಗೆ ಉಪಯುಕ್ತ ♦ಉಸಿರಾಟದ ತೊಂದರೆ ನಿವಾರಣೆ ♦ನೋವು ಹಾಗೂ ನಂಜು ನಿವಾರಕ ♦ಸಾಂಕ್ರಾಮಿಕ ರೋಗ ನಿರೋಧಕ ಶಕ್ತಿ**

ಭಾರತೀಯ ಆಹಾರ ಪದ್ಧತಿಯಲ್ಲಿ CURCUMIN ಹೊಂದಿರುವ ವೈದ್ಯಕೀಯ ಗುಣಗಳು ಈಗಾಗಲೇ ಸರ್ವರಿಗೂ ತಿಳಿದಿರುವ ವಿಚಾರ. ಇದೀಗ ಅರಶಿಣದಲ್ಲಿ ಕೆಲವು ವೈರಾಣುಗಳನ್ನು ನಾಶಪಡಿಸುವಲ್ಲಿ ಉಪಯುಕ್ತವಾಗಿದೆ ಎಂಬುದನ್ನು ಸಂಶೋಧನಕಾರರು ಕೂಡಾ ಕಂಡುಕೊಂಡಿದ್ದಾರೆ. ಬೀಜಿಂಗ್‌ನಲ್ಲಿ ಈ ಕುರಿತು ಈಗಾಗಲೇ ಸಂಶೋಧನೆಗಳು ನಡೆದಿವೆ. ಅರಶಿಣದಲ್ಲಿರುವ ಕುರ್ಕುಮಿನ್ ಅಂಶ ಮಾರಕ ಗ್ಯಾಸ್ಟ್ರೋ ಎಂಟ್ರರಿಟಿಸ್ ವೈರಸ್ (ಟಿಜಿಇವಿ) ಹರಡುವುದನ್ನು ತಡೆಯುತ್ತದೆ ಎಂದು ಜರ್ನಲ್ ಆಫ್ ವೈರಾಲೋಲಾಜಿಯಲ್ಲಿ ಪ್ರಕಟಿಸಿದ ಲೇಖನ ಹೇಳಿದೆ. ಕುರ್ಕುಮಿನ್ ಟಿಜಿಇವಿ ವೈರಾಣುಗಳು ಜೀವಕೋಶದೊಳಗೆ ಪ್ರವೇಶಿಸುವ ಮೊದಲೇ ಅವುಗಳನ್ನು ನಾಶಪಡಿಸುತ್ತದೆ. ಕುರ್ಕುಮಿನ್ ಟಿಜಿಇವಿ ಸೋಂಕು ತಡೆಯಲ್ಲಿ ಮಹತ್ವದ ಶಕ್ತಿಯಾಗಿದೆ ಎಂದು ಚೀನಾದ ಹ್ಯೂವಾನ್ ಇನ್‌ಸ್ಟಿಟ್ಯೂಟ್ ಆಫ್ ಬಯೋ ಎಂಜಿನಿಯರಿಂಗ್‌ನ ಸಂಶೋಧಕ ಲಿಲಾನ್ ಜೀ ಹೇಳಿದ್ದಾರೆ. ಇದಲ್ಲದೆ ಡೆಂಗ್ಯೂ, ಹೆಪಟೈಟಿಸ್ ಬಿ., ವೈರಾಣು ಹಾಗೂ ಝಿಕಾ ವೈರಾಣುಗಳ ಪರಿಣಾಮಗಳನ್ನು ತಡೆಯುವಲ್ಲಿ ಪರಿಣಾಮಕಾರಿಯಾಗಿರುವುದು ಕಂಡುಬಂದಿದೆ. ಇದಲ್ಲದೆ ಆ್ಯಂಟಿ ಟ್ಯೂಮರ್, ಆ್ಯಂಟಿ ಬ್ಯಾಕ್ಟೀರಿಯಾ ನಿರೋಧಕದಲ್ಲೂ ಪರಿಣಾಮಕಾರಿ ಶಕ್ತಿಯಾಗಿರುವುದು ಕಂಡುಬಂದಿದೆ.

## ಕೋವಿಡ್–19 ಚಿಕಿತ್ಸೆಗೆ ಕುರ್ಕುಮಿನ್ ನೆರವಾಗಬಲ್ಲದು: ಸಂಶೋಧಕರು

ಕೋವಿಡ್ ಚಿಕಿತ್ಸೆಯಲ್ಲಿ ಕುರ್ಕುಮಿನ್ ಉಪಯುಕ್ತ ಪಾತ್ರವನ್ನು ನಿರ್ವಹಿಸಬಲ್ಲದು ಎಂದು ತಜ್ಞರು ಇತ್ತೀಚೆಗೆ ಪ್ರಕಟಿಸಿರುವ ಸಂಶೋಧನಾ ಲೇಖನದಲ್ಲಿ ಸವಿವರವಾಗಿ ತಿಳಿಸಿದ್ದಾರೆ. ವಿಜ್ಞಾನಿಗಳ ತಂಡ ಇತ್ತೀಚೆಗೆ ಪ್ರಕಟಿಸಿದ ವೈಜ್ಞಾನಿಕ ಲೇಖನದಲ್ಲಿ ಕೋವಿಡ್–19 ಚಿಕಿತ್ಸೆಯಲ್ಲಿ ಕುರ್ಕುಮಿನ್ ವಹಿಸಬಹುದಾದ ಪಾತ್ರವನ್ನು ಸಾಕ್ಷ್ಯಾಧಾರಗಳೊಂದಿಗೆ ವಿಶ್ಲೇಷಿಸಿದ್ದಾರೆ.

ಕೊರೊನಾಕ್ಕೆ ಯಾವುದೇ ಔಷಧ ಅಥವಾ ಲಸಿಕೆಗಳು ಲಭ್ಯವಾಗದಿರುವ ಪ್ರಸ್ತುತ ಕಾಲಘಟ್ಟದಲ್ಲಿ ಔಷಧೀಯ ಸಸ್ಯಗಳತ್ತ ಗಮನ ಹರಿಸಿರುವುದು ಕಂಡು ಬಂದಿದೆ. ಈ ನಿಟ್ಟಿನಲ್ಲಿ ವಿಜ್ಞಾನಿಗಳ ತಂಡ ನಡೆಸಿದ ವಿಶೇಷ ಅಧ್ಯಯನದಲ್ಲಿ ಅನೇಕ ರೀತಿಯ ವೈರಸ್‌ಗಳಿಂದ ಮಾನವ ದೇಹಕ್ಕೆ ರಕ್ಷಣೆ ಒದಗಿಸುವಲ್ಲಿ ಕುರ್ಕುಮಿನ್ ವಹಿಸಬಹುದಾದ ಸಾಧ್ಯತೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಕುರ್ಕುಮಿನ್ ಒಂದು ಪ್ರಬಲ ರೋಗ ನಿರೋಧಕ ವೃದ್ಧಿ ಶಕ್ತಿಯಾಗಿ ಕಾರ್ಯನಿರ್ವಹಿಸಬಲ್ಲದು ಎಂಬುದನ್ನು ಆಧಾರಸಹಿತವಾಗಿ ವಿವರಿಸಿರುವ ಅವರು ತಮ್ಮ ಸಂಶೋಧನೆಗಳ ಜತೆಗೆ ಕುರ್ಕುಮಿನ್ ಬಗ್ಗೆ ಅನೇಕ ಸಾಹಿತ್ಯಗಳಲ್ಲಿ, ಸಂಶೋಧನಾ ಲೇಖನಗಳಲ್ಲಿ ಹೇಳಿರುವ ಸಾಕ್ಷ್ಯಗಳನ್ನು ಕೂಡಾ ಆಧಾರವಾಗಿ ಉಲ್ಲೇಖಿಸಿದ್ದಾರೆ.

"ಜಾಗತಿಕ ಸೋಂಕು ಆಗಿರುವ ಕೊರೊನಾಕ್ಕೆ ಶಾಶ್ವತ ಪರಿಹಾರಕ್ಕಾಗಿ ಜಗತ್ತು ಕಾತರಿಸುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ ಕುರ್ಕುಮಿನ್ ಸಹಿತ ಔಷಧೀಯ ಸಸ್ಯಗಳು ರೋಗನಿರೋಧಕ ಶಕ್ತಿಯನ್ನು ವೃದ್ಧಿಸುವಲ್ಲಿ ಯಾವ ರೀತಿ ಸುರಕ್ಷಿತ ಅಂಶಗಳಾಗಿರುತ್ತವೆ ಎಂಬ ಬಗ್ಗೆ ಅರಿವು ಹೊಂದುವುದು ಅತ್ಯಂತ ಉಪಯುಕ್ತವಾಗುತ್ತದೆ."

## ಸೋಂಕು ವೈರಾಣು ಪ್ರತಿರೋಧದಲ್ಲಿ ಅರಶಿಣ

**1. ಇರಿಟೆಬಲ್ ಬೌಲ್ ಸಿಂಡ್ರಮ್ (ಕೆರಳಿಸುವ ಕರಳು–ಐಬಿಎಸ್):** ಜಠರ–ಕರುಳಿನ ಕಾರ್ಯಚಟುವಟಿಕೆಯಲ್ಲಿ ಪದೇ ಪದೇ ಆಗುವ ದೀರ್ಘಕಾಲದ ಬದಲಾವಣೆಯಿಂದ ಐಬಿಎಸ್ ಸಮಸ್ಯೆ ಸೃಷ್ಠಿಯಾಗುತ್ತದೆ. ಇದು ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಐಬಿಎಸ್ ಶಮನದಲ್ಲಿ ಕುರ್ಕುಮಿನ್ ಮಹತ್ತರ ಪಾತ್ರ ವಹಿಸುತ್ತದೆ.

**2. ಎಚ್‌ಐವಿ:** ಅರಿಶಿಣ ಎಚ್‌ಐವಿ ನಿರೋಧಕ ಶಕ್ತಿಯಾಗಿ ಕಾರ್ಯವೆಸಗುತ್ತದೆ. ಎಚ್‌ಐವಿ ವೈರಾಣುಗಳ ಸೋಂಕು ತಡೆಯುತ್ತದೆ. ಆ ಮೂಲಕ ಸೋಂಕಿನಿಂದ ರಕ್ಷಣೆ ನೀಡುತ್ತದೆ.

**3. ಹೆಪಟೈಟಿಸ್ ವೈರಾಣು:** ಅಪಾಯಕಾರಿ ಹೆಪಟೈಟಿಸ್ ಬಿ ಹಾಗೂ ಸಿ ವೈರಾಣುಗಳು ನಿಯಂತ್ರಣದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ. ವೈರಾಣುಗಳು ದೇಹದಲ್ಲಿ ಆಶ್ರಯ ಪಡೆಯದಂತೆ ರಕ್ಷಿಸುತ್ತದೆ.

**4. ಇನ್‌ಫ್ಲೂಯೆಜ್ಞ ವೈರಸ್:** ತೀವ್ರ ನೆಗಡಿಯಿಂದ ಕೂಡಿದ ಸಾಂಕ್ರಾಮಿಕ ಜ್ವರದ ವಿರುದ್ಧ ಪ್ರಬಲ ನಿರೋಧಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತದೆ.

**5. ಅರಶಿಣ ಮತ್ತು ಎಬೋಲಾ ವೈರಾಣು ಸೋಂಕು:** ಅರಶಿಣ ಎಬೋಲಾ ಸೋಂಕುಪೀಡಿತರ ಚಿಕಿತ್ಸೆಯಲ್ಲೂ ನೆರವಾಗುತ್ತದೆ. ಸೋಂಕು ಉಲ್ಬಣಗೊಳಿಸುವ ಕೆಲವು ಅಂಶಗಳನ್ನು ತಡೆಹಿಡಿಯುತ್ತದೆ.

## ಅರಶಿಣ: ಸೋಂಕು ನಿವಾರಕ ಶಕ್ತಿಗಳ ಕಣಜ

ಅರಶಿಣ (ಕರ್ಕುಮಾ ಲಾಂಗ್ಗಾ) ಭಾರತದ ಸಾಂಪ್ರದಾಯಿಕ ಔಷಧವಾಗಿದ್ದು, ಹಲವು ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ವೈಜ್ಞಾನಿಕವಾಗಿಯೂ, ವೈದ್ಯಕೀಯವಾಗಿಯೂ ಮಹತ್ವ ಪಡೆದಿದೆ. ಅರಿಶಿಣ ಸೂಕ್ಷ್ಮಜೀವ ಪ್ರತಿರೋಧಕ ಶಕ್ತಿಯನ್ನು ಹೊಂದಿದ್ದು ಸೋಂಕು ನಿವಾರಕ ಶಕ್ತಿಗಳ ಕಣಜವಾಗಿದೆ. ಹಲವಾರು ಸಂಶೋಧನೆಗಳು, ವೈಜ್ಞಾನಿಕ ಸಾಕ್ಷ್ಯಗಳು ಇದನ್ನು ಸಾಬೀತು ಪಡಿಸಿದೆ. ಅರಿಶಿಣದ ಕೊಂಬುಗಳನ್ನು ಆಯುರ್ವೇದ ಔಷಧಗಳ ತಯಾರಿಕೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬಳಕೆಯಾಗುತ್ತಿದೆ. ಕಫ, ಶೀತ ಕೆಮ್ಮು, ಮಧುಮೇಹ, ವಿವಿಧ ರೀತಿಯ ಕ್ಯಾನ್ಸರ್, ಉಸಿರಾಟದ ತೊಂದರೆ, ಆಲ್‌ಜೈಮರ್ ಕಾಯಿಲೆ, ಲಿವರ್ ಸಂಬಂಧಿ ರೋಗಗಳು ಸೇರಿದಂತೆ ಹಲವಾರು ರೋಗಗಳ ಉಪಶಮನಕ್ಕೆ ಸಹಕಾರಿಯಾಗಿದೆ. **(ಉದಯವಾಣಿ 24–08–2020)**

==========================================================

## ಕಾಮಕಸ್ತೂರಿಯಲ್ಲಿದೆ ಆರೋಗ್ಯದ ಗುಟ್ಟು

**♦ ಧನ್ಯಶ್ರೀ ಬೋಳಿಯಾರ್**

ಹಳ್ಳಿಮನೆಗಳಲ್ಲಿ ಮನೆ ಮದ್ದಾಗಿ ಕಾಮ ಕಸ್ತೂರಿಯನ್ನು ಸಾಮಾನ್ಯವಾಗಿ ಉಪಯೋಗಿಸುತ್ತಾರೆ. ಆದರೆ ಅನೇಕ ಮಂದಿಗೆ ಇದರಲ್ಲಿರುವ ಆರೋಗ್ಯಕರ ಅಂಶಗಳು ತಿಳಿದಿಲ್ಲ. ಹೇರಳವಾದ ಪ್ರೋಟೀನ್, ನಾರಿನಾಂಶ ಮತ್ತು ಕಬ್ಬಿಣಾಂಶಗಳನ್ನು ಹೊಂದಿದೆ. ಇದನ್ನು ಪುರಾತನ ಆರ್ಯುವೇದ ಮತ್ತು ಪ್ರಾಚೀನ ಚೀನೀ ಔಷಧಗಳಲ್ಲಿಯೂ ಬಳಸಲಾಗುತ್ತಿದೆ.

**1. ಬಾಯಿ ಹುಣ್ಣು ನಿವಾರಣೆ:**

ಉಷ್ಣತೆಯಿಂದ ಬಾಯಿ ಹುಣ್ಣು ಉಂಟಾಗುವುದು ಸಾಮಾನ್ಯ. ಕಾಮಕಸ್ತೂರಿಯನ್ನು ನೀರಿನಲ್ಲಿ ನೆನೆ ಹಾಕಿ ಪ್ರತಿನಿತ್ಯ ಸೇವಿಸಿದರೆ ಬಾಯಿಹುಣ್ಣು ನಿವಾರಿಸಲು ಸಾಧ್ಯ. ಇದರ ಸೇವನೆಯಿಂದ ದೇಹದ ಉಷ್ಣತೆ ಕಡಿಮೆ ಮಾಡುತ್ತದೆ.

**2. ಜೀರ್ಣಕ್ರಿಯೆಗೆ ಸಹಕಾರಿ:**

ಕಾಮಕಸ್ತೂರಿಯಲ್ಲಿರುವ ನಾರಿನಾಂಶ ಜೀರ್ಣಕ್ರಿಯೆಗೆ ಸಹಕಾರಿಯಾಗಿದೆ. ಉದರ ಸಮಸ್ಯೆಗಳಿಂದ ಪರಿಹಾರ ನೀಡುತ್ತದೆ. ಜತೆಗೆ ಮಲಬದ್ಧತೆ ಮತ್ತು ಭೇದಿ ನಿವಾರಿಸಲು ಸಹಾಯಕವಾಗಿದೆ.

**3. ಉರಿಯೂತ ಕಡಿಮೆ:**

ಕಾಮಕಸ್ತೂರಿ ಬೀಜದ ಸೇವನೆ ಉರಿಯೂತಕ್ಕೆ ಸಂಬಂಧಿಸಿರುವ ಸಮಸ್ಯೆಯನ್ನು ಕಡಿಮೆ ಮಾಡುತ್ತದೆ.

**4. ರೋಗ ನಿರೋಧಕ ಶಕ್ತಿ:**

ಕಾಮಕಸ್ತೂರಿ ಬೀಜ ಸೇವನೆಯಿಂದ ರೋಗ ನಿರೋಧಕ ಶಕ್ತಿಯೂ ಹೆಚ್ಚಾಗುತ್ತದೆ. ಜೀರ್ಣಕ್ರಿಯೆ, ತೂಕ ನಷ್ಟ, ಕೆಮ್ಮು ಮತ್ತು ಶೀತವನ್ನು ಗುಣಪಡಿಸಿ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

**5. ಕೊಲೆಸ್ಟ್ರಾಲ್ ನಿವಾರಕ:**

ಅಧಿಕ ಕೊಲೆಸ್ಟ್ರಾಲ್ ಮಟ್ಟ ಮತ್ತು ಅಧಿಕ ರಕ್ತದೊತ್ತಡವು ಹೃದಯದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ. ಪ್ರತಿದಿನ ಕಾಮಕಸ್ತೂರಿ ಬೀಜಗಳನ್ನು ಸೇವಿಸುವುದರಿಂದ ಕೊಲೆಸ್ಟ್ರಾಲ್ ಮಟ್ಟವನ್ನು ನಿಯಂತ್ರಣದಲ್ಲಿಡಬಹುದು.

**6. ಶುದ್ಧಿಕಾರಕ:**

ಶರೀರದಲ್ಲಿರುವ ಮಲೀನ ಪದಾರ್ಥಗಳನ್ನು ಹೊರಹಾಕುವ ಸಾಮರ್ಥ್ಯ ಹಾಗೂ ರಕ್ತ ಶುದ್ಧ ಮಾಡುವ ಶಕ್ತಿ ಕಾಮಕಸ್ತೂರಿಗಿದೆ.

**7. ಒತ್ತಡ ನಿವಾರಣೆ:**

ಒತ್ತಡ ನಿವಾರಕವಾಗಿಯೂ ಕಾಮ ಕಸ್ತೂರಿ ಸಹಕಾರಿ. ಮಾನಸಿಕ ಒತ್ತಡ ಮತ್ತು ಖಿನ್ನತೆಯಿಂದ ಬಳಲುವವರ ಚಿಕಿತ್ಸೆಗಾಗಿ ಕಾಮಕಸ್ತೂರಿ ಬೀಜಗಳನ್ನು ಬಳಸಲಾಗುತ್ತದೆ.

**8. ಶ್ವಾಸಕೋಶದ ಸಮಸ್ಯೆ ಪರಿಹಾರ:**

ಕಾಮಕಸ್ತೂರಿ ಬೀಜದೊಂದಿಗೆ ಶುಂಠಿ ರಸ ಸೇವಿಸಿ ಕುಡಿದರೆ ಶ್ವಾಸಕೋಶದ ಸಮಸ್ಯೆ ನಿವಾರಣೆಯಾಗುತ್ತದೆ. ಕಾಮಕಸ್ತೂರಿ ಬೀಜಗಳ ಪಾನೀಯವನ್ನು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದಲ್ಲಿ ಶರೀರದ ಉಷ್ಣತೆ ಕಡಿಮೆಯಾಗುತ್ತದೆ. ಸಕ್ಕರೆ ಬೆರೆಸದೆ ಕುಡಿದರೆ, ಸಕ್ಕರೆ ಕಾಯಿಲೆ ಹತೋಟಿಗೆ ಬರುತ್ತದೆ. ರಕ್ತದಲ್ಲಿನ ಗ್ಲೂಕೋಸ್ ಮಟ್ಟ ಕಡಿಮೆಯಾಗುತ್ತದೆ. ಮಹಿಳೆಯರಿಗೆ ಬೇಕಾದ ಫೋಲೇಟ್, ನಿಯಾಸಿನ್, ವಿಟಮಿನ್–ಇ ಪೋಷಕಾಂಶಗಳು ಇದರಲ್ಲಿವೆ. **(ಉದಯವಾಣಿ 22–10–2019)**

# ಆರೋಗ್ಯವೃದ್ಧಿಗೆ ಪಪ್ಪಾಯಿ ಹಣ್ಣು

♦ ರಾಧಿಕಾ, ಕುಂದಾಪುರ

ಇತ್ತೀಚಿನ ಫಾಸ್ಟ್‌ಫುಡ್ ಕಾಲಘಟ್ಟದಲ್ಲಿ ದೇಹಕ್ಕೆ ಬೇಕಾದ ಪೌಷ್ಟಿಕಾಂಶಯುಕ್ತ ಆಹಾರ ಸೇವನೆ ತೀರ ವಿರಳವೆಂಬಂತಾಗಿದೆ. ಮುಂದೆ ಬರಬಹುದಾದ ಸಮಸ್ಯೆಗಳಿಗೆ ಆಹ್ವಾನ ನೀಡುವ ಬದಲು ಈಗಿಂದಲೇ ಅಗತ್ಯ ಆಹಾರವನ್ನು ಆಯ್ಕೆ ಮಾಡಿ ಸೇವಿಸುವುದು ಒಳಿತಲ್ಲವೇ. ಈ ನಿಟ್ಟಿನಲ್ಲಿ ದೇಹದ ಆರೋಗ್ಯ ವೃದ್ಧಿಗೆ ಉಪಯುಕ್ತವಾಗುವ ಪಪ್ಪಾಯಿ ಸೇವನೆಯನ್ನು ಮಾಡುವುದರಿಂದ ಏನೆಲ್ಲಾ ಒಳಿತಿದೆ ಎಂದು ಇಲ್ಲಿ ನೀವು ಕಾಣಬಹುದಾಗಿದೆ.

### ಜೀರ್ಣಕ್ರಿಯೆ ಸುಗಮ

ಜೀರ್ಣ ಕ್ರಿಯೆಗೆ ಉಪಯುಕ್ತವಾಗುವ ಪಪ್ಪಾಯಿಯಲ್ಲಿ ನಾರಿನಾಂಶವಿದೆ. ಮೊಸರಿನೊಂದಿಗೆ ಪಪ್ಪಾಯಿ ಬೆರೆಸಿ ಸೇವಿಸುವುದರಿಂದ ಹೆಚ್ಚಿನ ಪ್ರೋಟಿನ್ ಅಂಶವನ್ನು ಪಡೆಯಬಹುದಾಗಿದೆ. ಪಪ್ಪಾಯಿಯಲ್ಲಿರುವ ಲಾಟೆಕ್ಸ್ ಮತ್ತು ಎನ್ಜಿಮ್ ಜೀರ್ಣಕ್ರಿಯೆಯ ಸ್ನಾಯುಗಳನ್ನು ಸಡಿಲಗೊಳಿಸಿ ದೇಹದಲ್ಲಿರುವ ಅನುಪಯುಕ್ತ ಮತ್ತು ಹಾನಿಕಾರಕ ಅಂಶಗಳನ್ನು ದೇಹದಿಂದ ಹೊರಹಾಕುತ್ತದೆ.

### ಮಲಬದ್ಧತೆ ಸಮಸ್ಯೆ ನಿವಾರಕ

ಹಸಿ ಪಪ್ಪಾಯಿನಲ್ಲಿರುವ ಅಧಿಕ ನಾರಿನಾಂಶ ಕರುಳನ್ನು ಅತ್ಯಂತ ಕ್ರಿಯಾಶೀಲವಾಗಿಸುವಲ್ಲಿ ಉಪಯುಕ್ತ. ಪಪ್ಪಾಯಿ ಕಾಯಿಯನ್ನು ಸಣ್ಣಗೆ ತುಂಡರಿಸಿ ಅದಕ್ಕೆ ಉಪ್ಪು, ನಿಂಬೆರಸ, ಜೀರಿಗೆ ಪುಡಿ ಬೆರೆಸಿ ತಿನ್ನಬೇಕು. ಇದರಿಂದಾಗಿ ಮಲಬದ್ಧತೆ ಸಮಸ್ಯೆ ನಿವಾರಿಸಬಹುದಾಗಿದೆ.

### ನರದೌರ್ಬಲ್ಯ ನಿವಾರಕ

ಕಬ್ಬಿಣ ಹಾಗೂ ಕ್ಯಾಲ್ಸಿಯಂ ಹೇರಳವಾಗಿ ಲಭ್ಯವಾಗುವ ಪಪ್ಪಾಯಿ ಸೇವನೆಯೂ ನರದೌರ್ಬಲ್ಯ ಸಮಸ್ಯೆಯ ನಿವಾರಕವಾಗಿದೆ. ಹಾಲು, ಜೇನುತುಪ್ಪದೊಂದಿಗೆ ಪಪ್ಪಾಯಿ ಸೇವಿಸಬೇಕು. ಇದು ನರದೌರ್ಬಲ್ಯದೊಂದಿಗೆ ಮಧುಮೇಹದ ಸಮಸ್ಯೆಯನ್ನು ನಿವಾರಿಸುವ ಸಾಮರ್ಥ್ಯವನ್ನು ಹೊಂದಿದೆ.

### ಸೌಂದರ್ಯ ವೃದ್ಧಿಗೆ ಸಹಕಾರಿ

ಸೌಂದರ್ಯಕ್ಕಾಗಿ ನಾವಿಂದು ಕೆಮಿಕಲ್‌ಗಳಿಗೆ ಮೊರೆ ಹೋಗುತ್ತಿರುವುದು ವಿಪರ್ಯಾಸವೆನ್ನಬಹುದು. ನಿಯಾಸಿಸ್ ಮತ್ತು ಕ್ಯಾರೋಟಿನ್ ಅಂಶಗಳು ದೇಹದ ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸುತ್ತದೆ. ಹಣ್ಣನ್ನು ಪೇಸ್ಟ್ ಮಾಡಿ ಮುಖಕ್ಕೆ ಹಚ್ಚಿಕೊಳ್ಳುವುದರಿಂದಾಗಿ ಮೊಡವೆ ಸಮಸ್ಯೆ ನಿವಾರಿಸುತ್ತದೆ.

### ಜಂತುಹುಳು ನಿವಾರಕ

ಮಕ್ಕಳಲ್ಲಿ ಹೆಚ್ಚಾಗಿ ಕಾಣಸಿಗುವ ಜಂತುಹುಳು ಸಮಸ್ಯೆ ಅಧಿಕ ಸಿಹಿತಿನಿಸನ್ನು ತಿನ್ನುವುದರಿಂದಾಗಿ ಉದ್ಭವಿಸುವ ಸಮಸ್ಯೆಯಾಗಿದೆ. ಪಪ್ಪಾಯಿ ಬೀಜವನ್ನು ಊಟಕ್ಕೆ ಮೊದಲು ಸೇವಿಸಬಹುದು ಇಲ್ಲವೆ ಹಣ್ಣಿನ ತಿರುಳನ್ನು ನಿಯಮಿತವಾಗಿ ಮಕ್ಕಳಿಗೆ ನೀಡುವುದರಿಂದ ಜಂತುಹುಳು ಸಮಸ್ಯೆ ನಿವಾರಣೆ ಮಾಡಲು ಉಪಯುಕ್ತವಾಗಿದೆ. **(ಉದಯವಾಣಿ 22–10–2019)**

==========================================================


# ಮೆದುಳು ಚುರುಕಾಗಲು ಚಹಾ ಸಹಕಾರಿ

ಚಹಾ ಪ್ರಿಯರಿಗೆ ಮತ್ತೊಂದು ಸಿಹಿ ಸುದ್ದಿ. ಅಧ್ಯಯನವೊಂದರ ಪ್ರಕಾರ ದಿನಂಪ್ರತಿ ಚಹಾ ಕುಡಿಯುವುದರಿಂದ ಮೆದುಳಿನ ಸಂರಚನೆ ಉತ್ತಮವಾಗುವುದಲ್ಲದೇ, ನರಮಂಡಲ ದಕ್ಷವಾಗಿ ಕಾರ್ಯನಿರ್ವಹಿಸಲು ಸಹಾಕಾರಿಯಾಗಿದೆ. ಸಿಂಗಾಪುರ ರಾಷ್ಟ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ತಂಡವೊಂದು ಇದನ್ನು ಅಧ್ಯಯನದ ಮೂಲಕ ಕಂಡುಕೊಂಡಿದೆ. ಇದಕ್ಕಾಗಿ ಎರಡು ತಂಡಗಳನ್ನು ಸಂಶೋಧನೆಗೆ ಒಳಪಡಿಸಲಾಗಿತ್ತು. ದಿನನಿತ್ಯ ನಿಯಮಿತವಾಗಿ ಚಹಾ ಸೇವನೆಯಿಂದ ಮರೆಗುಳಿತನ ಕಾಯಿಲೆಯಿಂದ ದೂರ ಉಳಿಯಬಹುದಾಗಿದೆ. ಚಹಾದಲ್ಲಿರುವ ಅಂಶವು ನರಮಂಡಲಕ್ಕೆ ರಕ್ಷಣಾತ್ಮಕವಾಗಿ ಕೆಲಸ ಮಾಡುತ್ತದೆ ಮತ್ತು ನರಮಂಡಲ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸಂಶೋಧಕರು ತಿಳಿಸಿದ್ದಾರೆ. **(ಉದಯವಾಣಿ 22–10–2019)**

==========================================================

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

## ಪ್ರವಾದಿ ಮುಹಮ್ಮದ್(ﷺ) ಮುಸ್ಲಿಮೇತರರ ವೀಕ್ಷಣೆಯಲ್ಲಿ




**◆ ಮಹಾತ್ಮಾ ಗಾಂಧಿ**
ಭಾರತದ ರಾಷ್ಟ್ರಪಿತ

“ ಮಾನವ ಸಮೂಹದ ಕೋಟ್ಯಂತರ ಹೃದಯಗಳಲ್ಲಿ ವಿವಾದರಹಿತವಾಗಿ ಪ್ರಭುತ್ವವನ್ನು ಸ್ಥಾಪಿಸಿದ ಓರ್ವ ಅತ್ಯುನ್ನತ ವ್ಯಕ್ತಿಯ ಕುರಿತು ತಿಳಿಯಬಯಸಿದ್ದೆ..... ಅಂದಿನ ಜೀವನ ರಂಗದಲ್ಲಿ ಇಸ್ಲಾಮಿಗೆ ಸ್ಥಾನವನ್ನು ಗಳಿಸಿಕೊಟ್ಟದ್ದು ಖಡ್ಗವಲ್ಲ ಬದಲಾಗಿ ಪ್ರವಾದಿಯವರ ಅನನ್ಯ ಸರಳತೆ, ಪರಿಪೂರ್ಣ ನಿಷ್ಕಾಪಟ್ಯತೆ, ವಾಗ್ದಾನಗಳ ಕುರಿತು ಅತ್ಯಂತಿಕವಾದ ನಿಷ್ಠೆ, ತನ್ನ ಸ್ನೇಹಿತರು ಮತ್ತು ಅನುವರ್ತಿಗಳಿಗೆ ಅವರು ನೀಡುತ್ತಿದ್ದ ಉತ್ತಮ ಪರಿಗಣನೆ, ಧರ್ಮಪ್ರಚಾರ ಕಾರ್ಯದಲ್ಲಿ ಅವರಿಗಿದ್ದ ಎದೆಗಾರಿಕೆ, ನಿರ್ಭಯತೆ ಮತ್ತು ದೇವನಲ್ಲಿದ್ದ ಪರಿಪೂರ್ಣ ನಂಬಿಕೆ ಮತ್ತು ಭರವಸೆಗಳಾಗಿದ್ದವು, ಇವುಗಳಾಗಿದ್ದವು ಅವರ ಮುಂದಿದ್ದ ಸರ್ವ ಅಡೆತಡೆಗಳನ್ನು ನಿವಾರಿಸಿದ ಅಸ್ತ್ರವೇ ಹೊರತು ಖಡ್ಗವಾಗಿರಲಿಲ್ಲ. ”

ಯಂಗ್ ಇಂಡಿಯ (ಸಪ್ಟೆಂಬರ್ 23, 1924)

---

ಪ್ರವಾದಿ ಮುಹಮ್ಮದ್(ﷺ) ಮುಸ್ಲಿಮೇತರರ ವೀಕ್ಷಣೆಯಲ್ಲಿ



**◆ ಜಾರ್ಜ್ ಬರ್ನಾಡ್ ಷಾ**
ಐರಿಶ್ ನಾಟಕಗಾರ ಮತ್ತು ಖ್ಯಾತ ಸಾಹಿತಿಗಾರ

“ ಮುಹಮ್ಮದರ ಧರ್ಮದ ಬಗ್ಗೆ ನಾನು ಅರಿತುಕೊಂಡಾಗಲೇ ನನ್ನ ಮನಸ್ಸಿನಲ್ಲಿ ಗೌರವಭಾವ ಮೂಡಿತ್ತು. ಇದಕ್ಕೆ ಕಾರಣವಾದ ಅಂಶ ಅವರ ಜೀವನಶೈಲಿಯೇ ಆಗಿತ್ತು. ಮುಂದಿನ ಶತಮಾನದಲ್ಲಿ ಯುರೋಪನ್ನು ಆಳುವ ನೈಜ ಅಧಿಕಾರವಿದ್ದರೆ ಅದು ಇಸ್ಲಾಂ ಧರ್ಮಕ್ಕೆ ಮಾತ್ರ. ನಾನು ಅವರ ಬಗ್ಗೆ ಅಧ್ಯಯನ ಮಾಡಿದೆ. ನಿಜಕ್ಕೂ ಅವರ ವ್ಯಕ್ತಿತ್ವ ಅಚ್ಚರಿ ಮೂಡಿಸುವಂತಹದು. ಅವರು ಇಂದು ಜೀವಂತವಾಗಿರುತ್ತಿದ್ದರೆ ಮಾನವ ನಾಗರಿಕತೆಯನ್ನು ಹಾಳುಮಾಡುವ ಎಲ್ಲಾ ಸಮಸ್ಯೆಗಳನ್ನು ಯಶಸ್ವಿಯಾಗಿ ಪರಿಹರಿಸುತ್ತಿದ್ದರು.

**ನನ್ನ ಅಭಿಪ್ರಾಯದಂತೆ ಅವರನ್ನುಮಾನವ ಕುಲದ ವಿಮೋಚಕರೆಂದೇ ಕರೆಯಬೇಕು.** ”

ದಿ ಜೆನ್ಯೂನ್ ಇಸ್ಲಾಂ, ಸಂಪುಟ-1, ಸಂಖ್ಯೆ-8, 1936

---

ಪ್ರವಾದಿ ಮುಹಮ್ಮದ್(ﷺ) ಮುಸ್ಲಿಮೇತರರ ವೀಕ್ಷಣೆಯಲ್ಲಿ



**◆ ಎ. ಡೆ ಲಾಮರ್ಟೈನ್**
ಇತಿಹಾಸ ತಜ್ಞ, ಮತ್ತು ಫ್ರೆಂಚ್ ಬರಹಗಾರ

“ ....ತತ್ವಜ್ಞಾನಿ, ವಾಗ್ಮಿ, ಧರ್ಮಪ್ರಚಾರಕ, ಶಾಸನಾಕಾರ, ಯೋಧ, ಊಹೆಗಳನ್ನು ಧಮನಿಸಿದವನು, ವೈಚಾರಿಕ ಸಿದ್ಧಾಂತಗಳ, ಪ್ರತಿಮೆಗಳಿಲ್ಲದ ಉಪಾಸನಾ ಪದ್ಧತಿಯ ಸಂರಕ್ಷಕ, 20 ಭೂಸಾಮ್ರಾಜ್ಯಗಳ ಮತ್ತು ಒಂದು ಆಧ್ಯಾತ್ಮಿಕ ಸಾಮ್ರಾಜ್ಯದ ಸ್ಥಾಪಕ ಅವರೇ ಮುಹಮ್ಮದ್. ಮನುಷ್ಯ ಶ್ರೇಷ್ಠತೆಯನ್ನಳೆಯುವ ಸರ್ವ ಮಾನದಂಡಗಳನ್ನು ಬಳಸಿ ಪರಿಶೋಧಿಸಿದ ನಂತರ ಖಂಡಿತವಾಗಿಯೂ ನಾವು ಕೇಳುವೆವು ಮುಹಮ್ಮದರಿಗಿಂತಲೂ ಶ್ರೇಷ್ಠವಾದ ವ್ಯಕ್ತಿ ಯಾರಾದರೂ ಇದ್ದಾರೆಯೇ...? ”

ಹಿಸ್ತೋಯಿರ್ ಡೇ ಲಾ ತುರ್ಕ್ವಿ, ಪ್ಯಾರಿಸ್.
ಸಂಪುಟ-11, ಪುಟ-276

---

ಪ್ರವಾದಿ ಮುಹಮ್ಮದ್(ﷺ) ಮುಸ್ಲಿಮೇತರರ ವೀಕ್ಷಣೆಯಲ್ಲಿ



**◆ ಮೈಕಲ್ ಎಚ್. ಹರ್ಟ್**
ಅಮೇರಿಕದ ಖ್ಯಾತ ಅಸ್ಟ್ರೋಫಿಸಿಸ್ಟ್ ಮತ್ತು ಲೇಖಕ

“ ಜಗತ್ತಿನ ಅತೀ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ನಾನು ಮುಹಮ್ಮದರ ಹೆಸರನ್ನು ಮೊಟ್ಟ ಮೊದಲು ಸೂಚಿಸಿರುವುದು ಅನೇಕರನ್ನು ವಿಸ್ಮಯಗೊಳಿಸಿರಬಹುದು ಮತ್ತು ಇನ್ನಿತರರನ್ನು ಪ್ರಶ್ನಿಸುವಂತೆ ಮಾಡಬಹುದು. ಆದರೆ ಇತಿಹಾಸದಲ್ಲಿ ಧಾರ್ಮಿಕ ಮತ್ತು ಧರ್ಮಾತೀತ ಮಟ್ಟಗಳಲ್ಲಿ ಪೂರ್ಣ ಯಶಸ್ಸು ಸಾಧಿಸಿದವರು ಅವರೊಬ್ಬರೇ ಆಗಿದ್ದಾರೆ. ”

ದಿ 100: ಎ ರಾಂಕಿಂಗ್ ಆಫ್ ದಿ ಮೋಸ್ಟ್ ಇನ್ಫುಲೆನ್ಷಿಯಲ್ ಪರ್ಸನ್ಸ್ ಇನ್ ಹಿಸ್ಟರಿ, 1978, ಪುಟ-33

---

ಪ್ರವಾದಿ ಮುಹಮ್ಮದ್(ﷺ) ಮುಸ್ಲಿಮೇತರರ ವೀಕ್ಷಣೆಯಲ್ಲಿ



**◆ ಪ್ರೊ.ಕೆ.ಎಸ್. ರಾಮಕೃಷ್ಣ ರಾವ್**
(ಇಂಡಿಯನ್ ಕೌನ್ಸಿಲ್ ಆಫ್ ಫಿಲಾಸಫಿಕಲ್ ರಿಸರ್ಚ್ ನಿರ್ದೇಶಕ)

“ ಮುಹಮ್ಮದ್‌'ರ ವ್ಯಕ್ತಿತ್ವದ ಕುರಿತು ಹೇಳುವುದಾದರೆ ಅದರ ಸಂಪೂರ್ಣ ಸತ್ಯವನ್ನು ಗ್ರಹಿಸಿಕೊಳ್ಳುವುದು ಅಸಾಧ್ಯ. ಅದರ ಒಂದು ಸಣ್ಣ ತುಣುಕನ್ನು ಮಾತ್ರ ಮಾತ್ರ ನನಗೆ ಅರಿಯಲು ಸಾಧ್ಯ-ವಾಗಿದೆ. ಒಂದರ ಹಿಂದೆ ಒಂದು ಎಂಬಂತೆ ಬರುವ ಅವರ ಜೀವನದ ಮುಗ್ಗಲುಗಳು ಅದ್ಭುತವಾಗಿದೆ.

ಮುಹಮ್ಮದ್ ಎಂಬ ಪ್ರವಾದಿ, ಮುಹಮ್ಮದ್ ಎಂಬ ಯೋಧ, ಮುಹಮ್ಮದ್ ಎಂಬ ವ್ಯಾಪಾರಿ, ಮುಹಮ್ಮದ್ ಎಂಬ ಆಡಳಿತಗಾರ, ಮುಹಮ್ಮದ್ ಎಂಬ ವಾಗ್ಮಿ, ಮುಹಮ್ಮದ್ ಎಂಬ ಸುಧಾರಕ, ಮುಹಮ್ಮದ್ ಎಂಬ ಅನಾಥರ ಅಭಯಕೇಂದ್ರ, ಮುಹಮ್ಮದ್ ಎಂಬ ಗುಲಾಮರ ಸಂರಕ್ಷಕ, ಮುಹಮ್ಮದ್ ಎಂಬಾ ಮಹಿಳಾ ವಿಮೋಚಕ, ಮುಹಮ್ಮದ್ ಎಂಬ ನ್ಯಾಯಾಧೀಶ, ಮುಹಮ್ಮದ್ ಎಂಬ ಭಕ್ತ... ಈ ಎಲ್ಲಾ ಪ್ರಮುಖ ಪಾತ್ರಗಳಲ್ಲೂ, ಬದುಕಿನ ಈ ಎಲ್ಲ ವಿಭಾಗಗಳಲ್ಲೂ ಅವರೊಬ್ಬ ನಾಯಕರೇ ಆಗಿದ್ದರು. ”

ಮುಹಮ್ಮದ್: ದಿ ಪ್ರೊಫೆಟ್ ಅಫ್ ಇಸ್ಲಾಮ್. 1989

---


ಪ್ರವಾದಿ ಮುಹಮ್ಮದ್(ﷺ) ಮುಸ್ಲಿಮೇತರರ ವೀಕ್ಷಣೆಯಲ್ಲಿ



**◆ ಆನೀ ಬೆಸೆಂಟ್**
ಬ್ರಿಟೀಷ್ ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಮತ್ತು ಬರಹಗಾರ್ತಿ

“ ಅರೇಬಿಯಾದ ಮಹಾನ್ ಪ್ರವಾದಿಯ ಜೀವನ ಮತ್ತು ಸ್ವಭಾವವನ್ನು, ಅವರು ಹೇಗೆ ಕಳಿಸಿದರು ಮತ್ತು ಹೇಗೆ ಬದುಕಿದರು ಎನ್ನುವುದನ್ನು ಅಧ್ಯಯನ ಮಾಡುವ ಯಾವುದೇ ವ್ಯಕ್ತಿಗೂ, ಆ ಮಹಾನ್ ಪ್ರವಾದಿಯ ಬಗ್ಗೆ ಗೌರವ ಭಾವನೆಯಲ್ಲದೆ ಬೇರೇನೂ ಉಂಟಾಗದು. ನಾನು ಇಲ್ಲಿ ಏನು ಬರೆಯುತ್ತಿರುವೆನೋ, ಅದು ಅನೇಕ ಜನರಿಗೆ ಈಗಾಗಲೇ ತಿಳಿದಿರುವ ವಿಷಯಗಳಾಗಿರಬಹುದು. ಆದರೆ ನಾನು ಅವುಗಳನ್ನು ಪುನಃ ಪುನಃ ಓದುವಾಗಲೆಲ್ಲಾ, ಅರೇಬಿಯಾದ ಆ ಮಹಾನ್ ಶಿಕ್ಷಕನನ್ನು ಮೆಚ್ಚುವಂತಹ ಒಂದು ಹೊಸ ದಾರಿಯನ್ನು ಮತ್ತು ಅವರನ್ನು ಗೌರವಿಸುವಂತಹ ಒಂದು ಹೊಸ ಸ್ಪಂದನವನ್ನು ನಾನು ನನ್ನಷ್ಟಕ್ಕೆ ಅನುಭವಿಸುತ್ತಿದ್ದೇನೆ. ”

ಆನಿ ಬೆಸೆಂಟ್, ದಿ ಲೈಫ್ ಏಂಡ್ ಟೀಚಿಂಗ್ಸ್ ಆಫ್ ಮುಹಮ್ಮದ್, ಮದ್ರಾಸ್-1932, ಪುಟ-4




(ವಾಟ್ಸ್ಯಾಪ್‌ನಲ್ಲಿ ಬಂದದ್ದು)

**ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ...............**

**ಓದುಗರ ಓಲೆ** **(ಅಕ್ಟೋಬರ್ 1991 ಸಂಚಿಕೆಯಿಂದ)**

ಪ್ರಿಯ ಮುಹಮ್ಮದ್ ಯೂಸುಫ್‌ರವರೆ,

ನಾನು ಯಾವಾಗಲೂ ಆಸಕ್ತಿಯಿಂದ ನಿಮ್ಮ ಪತ್ರಿಕೆಯನ್ನು ಗಮನಿಸುತ್ತಿದ್ದೇನೆ. ಸಂದರ್ಭ ದೊರೆತಾಗಲೆಲ್ಲ ನನ್ನ ಮಿತ್ರರಿಗೂ ವಿದ್ಯಾರ್ಥಿಗಳಿಗೂ ಆ ಬಗ್ಗೆ ಹೇಳುತ್ತಿದ್ದೇನೆ.

**ಮೈಸೂರು.** **– ಪ್ರೊಫೆಸರ್ ಕೆ.ಎಸ್. ರಾಮಕೃಷ್ಣ ರಾವ್, M.A.**
**Professor of Philosophy (Emeritus)**

---

ಪ್ರಿಯ ಸಂಪಾದಕರೆ,

ನಿಮ್ಮ ಪತ್ರಿಕೆ ನನಗೆ ತುಂಬಾ ತೃಪ್ತಿ ನೀಡಿತು. ಇಸ್ಲಾಂ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬೇರೆ ಪತ್ರಿಕೆಗಳಿಗಿಂತ ನಿಮ್ಮ ಪತ್ರಿಕೆ ನನಗೆ ತುಂಬಾ ಉಪಯುಕ್ತವಾದ ಮಾಹಿತಿಗಳನ್ನು ಒದಗಿಸಿದೆ.

**ತಿಪಟೂರು.** **– ಎಂ. ಸಾಹಿರ ಬಾನು, M. Ed.**

---

ನಾನು “ಯುಗರಶ್ಮಿ” ನೋಡಿ ಖುಷಿಯಾಗಿ ಆನಂದ ಭಾಷ್ಪ ಸುರಿಯಿತು.

“ಯುಗರಶ್ಮಿ”ಯು ಅಹ್ಮದಿಯಾ ಶತಾಬ್ದದ ಸವಿನೆನಪುಗಳನ್ನು ಹೊತ್ತು ತಂದಿದ್ದು ಮನಸ್ಸು ಮುದಗೊಂಡಿತು. ನನ್ನ ಹಿಂದೂ ಗೆಳೆಯರು ಅದನ್ನು ತುಂಬಾ ಮೆಚ್ಚಿಕೊಂಡಿದ್ದಾರೆ. “ಸರ್ವಧರ್ಮ ಮೈತ್ರಿ” ಲೇಖನವು ಆಕರ್ಷಣೀಯವಾಗಿದೆ.

ಶತಾಬ್ದ ಸಂಚಿಕೆ ಹೊರಡಿಸುವುದರಲ್ಲಿ ನೀವು ಪಟ್ಟ ಶ್ರಮ ತುಂಬಾ ಸಾರ್ಥಕವಾಗಿದೆ. ಅಲ್ಲಾಹನು ನಿಮಗೆ ಇನ್ನಷ್ಟು ನವಚೈತನ್ಯ ನೀಡಲಿ ಎಂದು ದುಆ ಮಾಡುತ್ತೇನೆ.

**ಗಾಂಧಿಗವಾಡ.** **– ಝಮೀರ್ ಅಹ್ಮದ್**

---

“ಯುಗರಶ್ಮಿ”ಯ ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆಯನ್ನು ಓದಿ ಮನಸ್ಸಿಗೆ ತುಂಬಾ ಸಂತೋಷವಾಯಿತು. ಅದರಲ್ಲಿ ಉಪಯುಕ್ತವಾದ ಹಲವು ಲೇಖನಗಳೂ ಸುಂದರವಾದ ಅನೇಕ ಫೋಟೋಗಳು ಇದ್ದವು.

ಕರ್ನಾಟಕದ ಎಲ್ಲೆಡೆ ನಿಮ್ಮ ಪತ್ರಿಕೆ ಹರಡಲಿ ಎಂದು ಪ್ರಾರ್ಥಿಸುತ್ತೇನೆ.

**ಖಾದಿಯಾನ್.** **– ನಈಂ ಅಹ್ಮದ್ ಶರೀಫ್**

---

ತಾವು ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆಯಾದ “ಯುಗರಶ್ಮಿ”ಯನ್ನು ನಾನು ತಪ್ಪದೇ ಸಾರ್ವಜನಿಕ ಗ್ರಂಥಾಲಯದಲ್ಲಿ ಓದುತ್ತಿದ್ದೇನೆ. ಇದರಲ್ಲಿ ಇಸ್ಲಾಂ ಧರ್ಮಕ್ಕಾಗಿ ಶ್ರಮಿಸಿದ ಮಹಾ ಪುರುಷರ ಜೀವನ ಚರಿತ್ರೆ ಹಾಗೂ ಇಸ್ಲಾಂ ಧರ್ಮ ಹುಟ್ಟಿ ಬೆಳೆದು ಬಂದ ಬಗೆಯನ್ನು ಸರಳವಾದ ಶೈಲಿಯಲ್ಲಿ ಚಿತ್ರಿಸಲಾಗಿದೆ. ಇದನ್ನು ಪ್ರತಿಯೊಂದು ಧರ್ಮದವರೂ ಓದಿ ಅರ್ಥೈಸಿಕೊಳ್ಳುವ ರೀತಿಯಲ್ಲಿ ರಚಿಸಲಾಗಿದೆ. ಇದೇ ರೀತಿ ಪತ್ರಿಕೆಯು ಮರೆಯಾಗದೆ ಮೆರೆಯಲಿ ಎಂದು ಹಾರೈಸುತ್ತಿದ್ದೇನೆ.

**ಚಿಂತಾಮಣಿ.** **– ಕೆ.ಎ. ನವೀದ್ ಅಹ್ಮದ್, B.A.**

ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ...............

(ಅಕ್ಟೋಬರ್ 1991 ಸಂಚಿಕೆಯಿಂದ)

## ಸಂಪಾದಕರಿಗೆ ಪತ್ರ

ಪ್ರಿಯ ಮುಹಮ್ಮದ್ ಯೂಸುಫ್‌ರವರೆ,

ಅಸ್ಸಲಾಮು ಅಲೈಕುಂ ವ ರಹ್ಮತುಲ್ಲಾಹಿ ವ ಬರಕಾತುಹು.

ಅನೇಕ ಎಡರು ತೊಡರುಗಳಿದ್ದರೂ ನೀವು "ಯುಗರಶ್ಮಿ"ಯ ಅಹ್ಮದಿಯಾ ಶತಾಬ್ದ ವಿಶೇಷ ಸಂಚಿಕೆಯನ್ನು ಪ್ರಕಟಪಡಿಸಿದ್ದು ತಿಳಿದು ಹರ್ಷವಾಯಿತು. ನಿಮ್ಮ ಪತ್ರಿಕೆ ಕಳೆದ 15 ವರ್ಷಗಳಿಂದ ನೈಜ ಇಸ್ಲಾಮಿಕ ಅಧ್ಯಾಪನೆಗಳನ್ನು ಅದರ ಓದುಗರಿಗೆ ಅರುಹಿ ಇಸ್ಲಾಮಿನ ಬಗ್ಗೆ ಇರುವ ಅನೇಕ ತಪ್ಪು ಕಲ್ಪನೆಗಳನ್ನು ನೀಗಿಸಲು ಪ್ರಯತ್ನಪಟ್ಟಿದೆ ಎಂದು ತಿಳಿದು ಸಹ ಸಂತಸವಾಯಿತು.

ಅಲ್ಲಾಹನು ಈ ಪತ್ರಿಕೆಗೆ ಇನ್ನೂ ಯಶಸ್ಸನ್ನು ನೀಡಲಿ, ಅದರ ಪ್ರಚಾರ ಹೆಚ್ಚಾಗಲಿ, ಹಾಗೂ ಇನ್ನೂ ಹೆಚ್ಚು ಸತ್ಯಾನ್ವೇಷಕರು ಅದರಿಂದ ಪ್ರಯೋಜನ ಪಡೆಯಲಿ ಎಂದು ಪ್ರಾರ್ಥಿಸುತ್ತೇನೆ.

– ಮಿರ್ಝಾ ತಾಹಿರ್ ಅಹ್ಮದ್

ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ

---

ಪ್ರಿಯ ಸಹೋದರ,


ಅಸ್ಸಲಾಮು ಅಲೈಕುಂ,


"ಯುಗರಶ್ಮಿ"ಯ ಅಹ್ಮದಿಯಾ ಶತಾಬ್ದ ಸಂಚಿಕೆ ಕೈ ಸೇರಿತು. ಅಲ್‌ಹಮ್ದುಲಿಲ್ಲಾಹ್. ನಿಮ್ಮ ಪ್ರಯತ್ನ ನಿಸ್ಸಂದೇಹವಾಗಿಯೂ ಹೃದಯಾನಂದಕರವಾಗಿದೆ. ನಿಮ್ಮ ಪ್ರಾಮಾಣಿಕ ಹಾಗೂ ಉದಾತ್ತ ಧ್ಯೇಯಗಳಿಂದ ಕೂಡಿದ ಶ್ರಮಕ್ಕೆ ಅಲ್ಲಾಹನು ಯಶಸ್ಸನ್ನು ನೀಡಲಿ ಮತ್ತು ಇನ್ನೂ ಹೆಚ್ಚಿನ ಸಾಮರ್ಥ್ಯ ಹಾಗೂ ಉತ್ಸಾಹದಿಂದ ಜಮಾಅತಿನ ಸೇವೆಗೈಯಲು ನಿಮಗೆ ಶಕ್ತಿ ಕೊಡಲಿ.


ನಿಮ್ಮ ದಾರಿಯಲ್ಲಿ ಬರುವ ಎಲ್ಲ ಅಡೆತಡೆಗಳನ್ನು ನೀವು ಗೆಲ್ಲುವಂತಾಗಿ ಅಹ್ಮದಿಯತಿನ ಸಂದೇಶವನ್ನು ಎಲ್ಲೆಡೆ ತಲಪಿಸುವಂತಾಗಿ ಅಲ್ಲಾಹನ ಸಂತೃಪ್ತಿಯನ್ನು ಪಡೆಯುವಂತಾಗಲು ಅಲ್ಲಾಹನು ನಿಮಗೆ ನೆರವಾಗಲಿ, ಆಮೀನ್.


– ಮಿರ್ಝಾ ವಸೀಂ ಅಹ್ಮದ್


ಅಹ್ಮದಿಯಾ ಜಮಾಅತಿನ ಭಾರತದ ಸರ್ವೋನ್ನತ ನಿರ್ದೇಶಕ.















**NEW PUBLICATIONS**

**Contact:**

**NAZARAT NASHRO - ISHA'AT**

**Sadr Anjuman Ahmadiyya**

**Qadian – 143516 (Punjab)**

**Phone: 01872 - 500970**







ರಾಜೂರ : ದಿನಾಂಕ 20-8-20ರಂದು ಗದಗ್ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ರಾಜೂರ ಗ್ರಾಮದಲ್ಲಿ ಹಿಂದೂ ಮುಸ್ಲಿಂ ಭಾವೈಕ್ಯ ಸಮಾವೇಶ ಜರಗಿತು.








ಕಡಲಾಯಿ : ಕಣ್ಣೂರ್ ಜಿಲ್ಲೆಯ ಕಡಲಾಯಿ ಜಮಾಅತಿನ ಮಜ್ಲಿಸ್ ಅನ್ಸಾರುಲ್ಲಾಹ್ ವತಿಯಿಂದ ಕಡಲಾಯಿ ಸೌತ್ ಯು.ಪಿ. ಸ್ಕೂಲ್‌ನಲ್ಲಿ ಮೆಡಿಕಲ್ ಕ್ಯಾಂಪ್ ಏರ್ಪಡಿಸಲಾಗಿತ್ತು. ಹೋಮಿಯೋಪಥಿಕ್ ಕೊರೋನಾ ಪ್ರತಿರೋಧಕ ಮದ್ದನ್ನು ವಿತರಿಸಲಾಯಿತು. ಶಾಲೆಗೆ ಕುರ್ಚಿಗಳನ್ನು ನೀಡಲಾಯಿತು. ಶಾಲೆಯ ಮಕ್ಕಳಿಗೆ ಪುಸ್ತಕ ವಿತರಣೆ ಮಾಡಲಾಯಿತು. ಲಾಕ್‌ಡೌನ್ ಕಾಲದಲ್ಲಿ ತರಕಾರಿ ಹಂಚಲಾಯಿತು.

Registered with the Registrar of Newspapers for India No. R.N. 27354/75
**Yugarashmi** Kannada Quarterly, **October - 2020.** Price : **Rs. 15/-**

# Ahmadiyya Muslim Community

## Apps for mobile devises

Download free apps developed by Ahmadiyya Muslim Community for your iphone,ipode, and Android



**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages




**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below



Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore